ಅಧ್ಯಕ್ಷರು : ಯಾವ ರೀತಿ ಕಡಿವಾಣ ರೂಲ್ಸ್‌ನಲ್ಲಿ ಕೊರಂ ಇದ್ದಾಗ ಸದನ ನಡೆಸಬೇಕೆಂದು ಮಾಡಿಕೊಂಡಿದ್ದೇವೆ, ಕೊರಂ ಇದ್ದಾಗ ನಾವು ಸದನವನ್ನು ನಡೆಸಬಹುದಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ದುರ್ದೈವ.

4) ನಿಯಮ 69ರ ಮೇರೆಗೆ

ವಿಷಯ : ರಾಜ್ಯ ಹಾಗು ದೇಶದಲ್ಲಿ ವ್ಯಾಪಕವಾಗಿ ಹರಡಿಕೊಂಡಿರುವ ನಕಲಿ ಛಾಪಾ ಕಾಗದ ಹಗರಣದ ಬಗ್ಗೆ – ಮುಂದುವರೆದ ಚರ್ಚೆ

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ಈ ನಕಲಿ ಛಾಪಕಾಗದಗಳ ವಿಚಾರ ನಾವೆಲ್ಲರೂ ತಿಳಿದಿರುವಂತೆ ಸುಮಾರು ನಾಲ್ಕುವರ್ಷಗಳಿಂದ ಈ ರಾಜ್ಯದಲ್ಲಿ ದೊಡ್ಡ ಹಾವಳಿಯಾಗಿದೆ. ಕೊನೆಯಪಕ್ಷ ಮಹಾರಾಷ್ಟ್ರದಲ್ಲಿ ಈ ವಿಚಾರದಲ್ಲಿ ಉಪ ಮುಖ್ಯಮಂತ್ರಿಗಳು, ಗೃಹಮಂತ್ರಿಗಳು ರಾಜಿನಾಮೆ ಕೊಟ್ಟಿದ್ದಾರೆ ಮುಂಬೈ ಪೊಲೀಸ್ ಕಮಿಷನರ್‌ರವರು ಹಿಂದೆ ಕೇಂದ್ರ ಸರ್ಕಾರದ ದೊಡ್ಡ ದೊಡ್ಡ ಸ್ಥಾನದಲ್ಲಿದ್ದವರು, ಅವರು ಪ್ರಧಾನ ಮಂತ್ರಿಗಳ ಕಛೇರಿಯಲ್ಲಿದ್ದಂಥವರು ಅವರ ಮೇಲೆ ಇವತ್ತು ಆರೋಪ ಬಂದು ಇವತ್ತು ಅವರನ್ನು ರಜದ ಮೇಲೆ ಕಳುಹಿಸಿದ್ದಾರೋ ಅಥವಾ ಅಮಾನತ್ತು ಮಾಡಿದ್ದಾರೋ ಗೊತ್ತಿಲ್ಲ. ಆ ರಾಜ್ಯದಲ್ಲೂ ಕೂಡ ವಿವಾದ ಎದ್ದಿದೆ. ನಮ್ಮ ಕರ್ನಾಟಕ ರಾಜ್ಯದಲ್ಲೂ ಕೂಡ ಅಷ್ಟೇ ತೀಕ್ಷ್ಣಗತಿಯ ಪರಿಸ್ಥಿತಿ ಇದ್ದರೂ ಇದುವರೆಗೆ ಮೊನ್ನೆ ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದು ಬಿಟ್ಟರೆ, ಯಾವುದೇ ಪೊಲೀಸ್ ಇಲಾಖೆಯ ಅಧಿಕಾರಿಗಳ ಮೇಲೆ, ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಅದಕ್ಕೆ ಬದಲಾಗಿ ದೊಡ್ಡ ದೊಡ್ಡ ಮುಖಂಡರುಗಳ ಸಂಬಂಧ ಕರೀಂಲಾಲ್ ಜೊತೆಗೆ ದಿನೇದಿನೇ ಕಮ್ಮಿಯಾಗಿಲ್ಲ. ನವೆಂಬರ್ 1999ರಲ್ಲಿ ಕರೀಂಲಾಲನ ಸಹಪಾಠಿ ಬದ್ರುದ್ದೀನ್ ಖಾನಪುರ ಎಂಬುವವರನ್ನು ನಕಲಿ ಛಾಪಕಾಗದ ವ್ಯವಹಾರದಲ್ಲಿ ಕರೀಂಲಾಲನು ಉಪಯೋಗಿಸಿಕೊಂಡಿರುತ್ತಾನೆ. ದಿನಾಂಕ : 19.8.2000 ರಲ್ಲಿ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಅವನ ಮೇಲೆ ಒಂದು ಪ್ರಕರಣ ದಾಖಲಾಗಿದ್ದು ಸಂ: 542: 2000 ಆಗಿರುತ್ತದೆ. ಅವನೊಂದು ಹೇಳಿಕೆಯನ್ನು ಕೊಡುತ್ತಾನೆ. ಅದೇನೆಂದರೆ ಈ ನಕಲಿ ಛಾಪಾಕಾಗದ ಮಾರಾಟದಿಂದ ಸುಮಾರು 40 ಸಾವಿರದಿಂದ 4 ಲಕ್ಷ ರೂಪಾಯಿಗಳ ಆದಾಯ ಒಂದು ದಿವಸಕ್ಕೆ ಬರುತ್ತಿದೆ ಎಂದು ಹೇಳುತ್ತಾನೆ. ಜೊತೆಗೆ ಆವಾಗಲೇ ಎನ್ ಆರ್ ರಸ್ತೆಯಲ್ಲಿ ಅಮಾನತ್ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಒಂದು ಖಾತೆಯನ್ನು ತೆರೆದಿರುತ್ತಾರೆ, ಶಿವಾಜಿನಗರದ ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ ಪ್ರದೀಪ್ ಕುಮಾರ್ ಎಂಬುವವರ ಹೆಸರಿನಲ್ಲಿ ಕರೆಂಟ್ ಅಕೌಂಟ್ ತೆರೆದಿರುತ್ತಾರೆ ಮತ್ತೆ ಮಹಮದ್ ರೆಹಾನ್ ಅವರ ಹೆಸರಿನಲ್ಲಿ ಒಂದು ಅಕೌಂಟ್ ಅನ್ನು ತೆಗೆದಿರುತ್ತಾರೆ. ಈ ಅಕೌಂಟ್‌ಗಳಲ್ಲಿ ಎಷ್ಟು ಹಣ ಜಮಾ ಆಗಿದೆ, ಆ ಅಕೌಂಟ್‌ಗಳನ್ನು ಸೀಜ್ ಮಾಡಿ ಏನು ಕ್ರಮ ತೆಗೆದುಕೊಂಡಿದ್ದಾರೆ, ಆ ಅಕೌಂಟ್ ತೆರದದ್ದು ಯವಾಗ? ಅದರ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳಬೇಕಾಗುತ್ತದೆ. ಅಷ್ಟೇ ಅಲ್ಲ 1999 ನವೆಂಬರ್ ತಿಂಗಳಲ್ಲಿ, ಅಂದರೆ ನಮ್ಮ ಸರ್ಕಾರದ ಅವಧಿ ಅಕ್ಟೋಬರ್ 1999ಕ್ಕೆ ಮುಗಿಯುತ್ತದೆ. ಅಕ್ಟೋಬರ್ 10, 1999 ರಲ್ಲಿ ಇವರು ಅಧಿಕಾರಕ್ಕೆ ಬರುತ್ತಾರೆ. ಅಧಿಕಾರಕ್ಕೆ ಬಂದ ತಕ್ಷಣ ನವೆಂಬರ್ ತಿಂಗಳಲ್ಲಿ ಆ ಕರೀಂಲಾಲ ತನ್ನ ಕಛೇರಿಗಳನ್ನು ಆರಂಭ ಮಾಡುತ್ತಾನೆ. ಜಯನಗರ, ವಸಂತನಗರ ಮತ್ತು ಕಾವಲಭೈರಸಂದ್ರದ ಎರಡು ಮನೆಗಳಲ್ಲಿ ಇದರ ವಹಿವಾಟು ನಕಲಿ ಛಾಪಕಾಗದಗಳನ್ನು ಸ್ಟಾಕ್ ಮಾಡುವುದು ಇದನ್ನು ಪ್ರಾರಂಭ ಮಾಡುತ್ತಾರೆ. ಆ ಮನೆಗಳನ್ನು

ರೈಡ್ ಮಾಡಿ ಏನು ಕ್ರಮ ತೆಗೆದುಕೊಂಡಿದ್ದಾರೆ ಯಾರ ಮೇಲೆ ಕೇಸ್ ಹಾಕಿದ್ದಾರೆ, ಯಾರ ಮೇಲೆ ಚಾರ್ಜ್‌ಶೀಟ್ ಫೈಲ್ ಮಾಡಿದ್ದಾರೆ ಇದನ್ನು ಹೇಳಬೇಕು. ನಕಲಿ ಛಾಪಕಾಗದಗಳ ಮಾರಾಟವನ್ನು ನಿಲ್ಲಿಸಿದ್ದರೂ ಬಲ್ಕ್ ಪರ್ಚೇಸ್‌ನಲ್ಲಿ ಉಪಯೋಗಿಸುವ ಸಂಸ್ಥೆಗಳು, ಫ್ರಾಂಕಿಂಗ್ ಮೆಷಿನ್ ಹೊಂದಲು ಅವಕಾಶವಿದ್ದರೂ, ಅದು ಕಾರ್ಪೊರೇಟ್ ಕಂಪನಿಗಳಾದ ಹೆಚ್‌ಡಿಎಫ್‌ಸಿ ಇರಬಹುದು, ಕಾರ್ಪೊರೇಷನ್, ಬ್ಯಾಂಕ್‌ಗಳಿರಬಹುದು, ಇನ್‌ಫೋಸಿಸ್ ಸೇರಿದಂತೆ, ಛಾಪಾಕಾಗದಗಳನ್ನು ಪಡೆಯುತ್ತಿದ್ದರು. ಕೋಟ್ಯಾಂತರ ರೂಪಾಯಿಗಳ ವ್ಯವಹಾರದಲ್ಲಿ ರಿಜಿಸ್ಟರ್ ಮಾಡುವುದಕ್ಕೆ ಛಾಪಾಕಾಗದವನ್ನು ಬಳಸುತ್ತಿದ್ದಾರೆ. ಈ ನಕಲಿ ಛಾಪಾಕಾಗದಗಳ ಬಳಕೆ ಇಂತಹ ಕಡೆಗಳಲ್ಲಿ ಹೆಚ್ಚು ಬಳಕೆಯಾಗುತ್ತದೆಂದು ಈ ಫ್ರಾಂಕಿಂಗ್ ಮೆಷಿನ್ ವ್ಯವಸ್ಥೆಯನ್ನು ನಾವು ಜಾರಿಗೆ ತಂದಿದ್ದು, ಅಕ್ಟೋಬರ್ 1999ರಲ್ಲಿ ಅಮೆಂಡ್‌ಮೆಂಟ್ ಆಗಿ 2000ನೇ ಇಸವಿಯಲ್ಲಿ ಈ ಸರ್ಕಾರ ಬಂದ ಮೇಲೆ ಯಾವ ಕಂಪನಿಗಳಿಗೆ ಫ್ರಾಂಕಿಂಗ್ ಮೆಷಿನ್ ಕೊಳ್ಳಲು ಅವಕಾಶ ಕೊಡಬೇಕು, ಲೈಸೆನ್ಸ್ ಕೊಡಬೇಕು ಮತ್ತೆ ಯಾರ್‍ಯಾರಿಗೆ ಕೊಡಬೇಕೆನ್ನುವುದನ್ನು ರೂಲ್ಸ್ ಮಾಡಿ ಇಟ್ಟಿದ್ದೆವು, ಈ ಸರ್ಕಾರ ಎರಡು ವರ್ಷಗಳವರೆಗೆ, ನಾನು ಈಗಾಗಲೇ 2000ನೇ ಇಸವಿಯಲ್ಲಿ ಈ ಪ್ರಸ್ತಾಪ ಮಾಡಿದ್ದೆ, ಈ ಫ್ರಾಂಕಿಂಗ್ ಮೆಷಿನ್ ಅನ್ನು ಎಷ್ಟು ಕಂಪನಿಗಳಿಗೆ ನೀವು ಸರಬರಾಜು ಮಾಡಿದ್ದೀರಿ ಎಂದು ಕೇಳಿದಾಗ ಈ ಸರ್ಕಾರದಿಂದ ಆಗ ಉತ್ತರವಿಲ್ಲ. ಎರಡು ವರ್ಷಗಳ ಕಾಲ ಈ ನಕಲಿ ಛಾಪಾಕಾಗದಗಳು ಮಾರಾಟವಾಗಲೀ ಎನ್ನುವ ಉದ್ದೇಶದಿಂದಲೇ ಈ ನಕಲಿ ಛಾಪಾಕಾಗದಗಳನ್ನು ಈ ಕಾರ್ಪೊರೇಟ್ ಕಂಪನಿಗಳಿಗೆ ಸರಬರಾಜು ಮಾಡುವ ಒಂದೇ ಒಂದು ಉದ್ದೇಶದಿಂದ ಈ ಫ್ರಾಂಕಿಂಗ್ ಮೆಷಿನ್‌ಗಳಿಗೆ ಪರವಾನಿಗೆ ಕೊಟ್ಟಿಲ್ಲ ಅದಕ್ಕೆ ಬದಲಾಗಿ ನಕಲಿ ಛಾಪಕಾಗದಗಳನ್ನು ಮಾರಾಟ ಮಾಡಲು ಕರೀಂಲಾಲ್ ಏನು ಮಾಡುತ್ತಾನೆಂದರೆ ಈಗ ಇರುವ ಸ್ಟ್ಯಾಂಪ್ ವೆಂಡರ್ಸ್ ನಕಲಿ ಹೆಸರಿನಲ್ಲಿ ಸ್ಟ್ಯಾಂಪ್ ಪೇಪರ್‌ಗಳನ್ನು ಪಡೆದುಕೊಂಡು ಆ ಕಾರ್ಪೊರೇಟ್ ಕಂಪನಿಗಳಿಗೆ ತಾನೇ ಸರಬರಾಜು ಮಾಡುತ್ತಾನೆ. ಪದ್ಧತಿ ಏನಿದೆ ಎಂದರೆ, ಛಾಪಾಕಾಗದಗಳನ್ನು ಟ್ರೆಜರಿಯವರು ಇಂಡೆಂಟ್ ಮಾಡಿಕೊಳ್ಳುತ್ತಾರೆ ಮತ್ತೆ ಆ ಕಾರ್ಪೊರೇಟ್ ಕಂಪನಿಗಳು ಇಷ್ಟು ಛಾಪಾಕಾಗದ ಬೇಕಾಗುತ್ತದೆಂದು ಇಂಡೆಂಟ್ ಮಾಡುತ್ತಾರೆ. ಆ ಬಗ್ಗೆ ಇವರು ರಿಜಿಸ್ಟ್ರೇಷನ್ ಡಿಪಾರ್ಟ್‌ಮೆಂಟಿಗೆ ಮಾಹಿತಿ ಕೊಟ್ಟು, ಇಷ್ಟು ಸ್ಟ್ಯಾಂಪ್ ಪೇಪರ್ ಬೇಕು ಎಂದು ಇಂಡೆಂಟ್ ಮಾಡಿಕೊಳ್ಳಬೇಕು ಎಂದು ಹೇಳಿದಾಗ, ಅವರು ಅದನ್ನು ಸಪ್ಲೈ ಮಾಡುತ್ತಾರೆ. ಅದನ್ನು ಇವರು, ಇನ್ನೊಬ್ಬ ಸ್ಟ್ಯಾಂಪ್ ವೆಂಡರ್ ಸಪ್ಲೈ ಮಾಡುತ್ತಾರೆ ಎಂದು ಹೇಳಿ, ಕರೀಮ ಲಾಲನ ಮುಖಾಂತರ ಸಪ್ಲೈ ಮಾಡಿಸಿದ್ದಾರೆ. ನನ್ನ ಆರೋಪವೇನೆಂದರೆ, ಆಗಲೇ ಫ್ರಾಂಕಿಂಗ್ ಮೆಷಿನ್‌ಗೆ ಲೈಸೆನ್ಸ್ ಕೊಟ್ಟಿದ್ದರೆ, ಕರೀಂ ಲಾಲ ನಕಲಿ ಛಾಪಾ ಕಾಗದಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ಸಪ್ಲೈ ಮಾಡತಕ್ಕಂಥ ಪ್ರಮೇಯವೇ ಇರುತ್ತಿರಲಿಲ್ಲ. ನೀವು ಲೈಸೆನ್ಸನ್ನು ತಡೆಹಿಡಿದು, ಎರಡು ವರ್ಷಗಳ ಕಾಲ ನಕಲಿ ಛಾಪಾ ಕಾಗದಗಳನ್ನು ಕಾರ್ಪೋರೇಟ್ ಕಂಪನಿಗಳಿಗೆ ಸಪ್ಲೈ ಮಾಡಲು ಅವಕಾಶ ಮಾಡಿಕೊಟ್ಟಿರಿ. ನಕಲಿ ಛಾಪಾ ಕಾಗದಗಳನ್ನು ತಡೆಗಟ್ಟುವುದಕ್ಕೆ.......

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, 1999ರಲ್ಲಿ ತಾವು ಕಂದಾಯ ಸಚಿವರಾಗಿದ್ದಿರಿ. ಈ ರೀತಿಯಾದಂಥ ಒಂದು ನಕಲಿ ಛಾಪಾ ಕಾಗದದ ಪಿಡುಗಿದೆ ಎನ್ನುವುದನ್ನು ಗುರುತಿಸಿ ಸ್ಟ್ಯಾಂಪ್ ಆ್ಯಕ್ಟ್‌ಗೆ ತಾವು ತಿದ್ದುಪಡಿ ತಂದಿರಿ ಎಂದು ಹೇಳಿದಿರಿ. ತಿದ್ದುಪಡಿಯನ್ನು ಮಾಡಿದಿರಿ. ಆದರೆ ತಿದ್ದುಪಡಿ ಮಾಡಿದ ಮೇಲೆ ಅದರ ಕಾನ್ಸೀಕ್ವೆನ್‌ಷಿಯಲ್ ಆ್ಯಕ್ಷನ್ಸ್ ಏನು? ತಿದ್ದುಪಡಿ ಮಾಡಿದ ಕೂಡಲೇ, ಸ್ಟ್ಯಾಂಪ್ ಪೇಪರ್ ಇಂಡೆಂಟ್ ಮಾಡಕೂಡದು, ಸ್ಟ್ಯಾಂಪ್ ವೆಂಡರ್‌ಗಳ ಲೈಸೆನ್ಸ್

ಕ್ಯಾನ್ಸಲ್ ಮಾಡಬೇಕು, ಇವುಗಳನ್ನು ನಿಲ್ಲಿಸಬೇಕು ಎಂದು ಕ್ರಮ ತೆಗೆದುಕೊಂಡಿರೇನು? ಏಕೆಂದರೆ, ತಿದ್ದುಪಡಿ ಮಾಡಿದ ಕೂಡಲೇ ಇವುಗಳು ನಿಲ್ಲುವುದಿಲ್ಲ. ಲೈಸೆನ್ಸ್ ಸ್ಟ್ಯಾಂಪ್ ವೆಂಡರ್‌ಗಳಿದ್ದಾರೆ, ಇಂಡೆಂಟ್ ಮಾಡುವ ಪದ್ಧತಿ ನಡೆಯುತ್ತಿದೆ. ನಿಮ್ಮ ಉದ್ದೇಶ ಏನಿತ್ತು ಎಂದರೆ, ಸ್ಟ್ಯಾಂಪ್ ಪೇಪರನ್ನು ತೆಗೆದು ಹಾಕಬೇಕು, ಅದರ ಬದಲಾಗಿ ಚಲನ್ ಅನ್ನು ಕಟ್ಟಿ, ಖಾಲಿ ಪೇಪರಿನಲ್ಲಿ ರಿಜಿಸ್ಟ್ರೇಷನ್ ಮಾಡಬೇಕು ಎನ್ನುವ ಉದ್ದೇಶದಿಂದ ತಿದ್ದುಪಡಿಯನ್ನು ಮಾಡಿದಿರಿ. ತಿದ್ದುಪಡಿ ಮಾಡಿದಾಗ, ಆ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿದ್ದಂಥ ನೀವು, ಅದರ ಬದಲಾಗಿ ಏನೇನು ಕಾರ್ಯಕ್ರಮಗಳನ್ನು ಮಾಡಬೇಕು ಎನ್ನುವುದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಬಿ. ಸೋಮಶೇಖರ್ : ಮೊದಲು ನಾನು ಮಾತನಾಡುವಾಗ ತಾವು ಇರಲಿಲ್ಲವೆಂದು ಕಾಣಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಇದ್ದೆ, ಅದರಿಂದಲೇ ಇದನ್ನು ಹೇಳಿದ್ದು.

ಶ್ರೀ ಬಿ. ಸೋಮಶೇಖರ್ : ನಾನು ಹೇಳಿದೆ 11ನೇ ವಿಧಾನಸಭೆಯ 2ನೇ ಅಧಿವೇಶನದಲ್ಲಿ ಅಂದರೆ 15ನೇ ಮಾರ್ಚ್ 2000 ದಲ್ಲಿ, ಆಗ ನಿಮ್ಮ ಸರ್ಕಾರ ಬಂದು ಕೇವಲ 5 ತಿಂಗಳಾಗಿತ್ತು, ನಾನು ಸ್ಟ್ಯಾಂಪ್ ಆಕ್ಟ್‌ಗೆ ತಿದ್ದುಪಡಿ ತಂದಂಥ ಆದೇಶ ಹೊರಡಿಸಿದ್ದು 18-8-1999 ರಲ್ಲಿ, ಆಗ ನಾವು ಪರ್ಯಾಯ ವ್ಯವಸ್ಥೆ ಏನು ಮಾಡಿದೆವು ಎಂದರೆ ಸ್ಟ್ಯಾಂಪ್ ಡ್ಯೂಟಿಯನ್ನು ಚಲನ್ ಮುಖಾಂತರ ಕಟ್ಟಬಹುದು, ಪೇ ಆರ್ಡರ್ ಮುಖಾಂತರ ಕಟ್ಟಬಹುದು , ಫ್ರಾಂಕಿಂಗ್ ಮೆಷಿನ್ ಸಪ್ಲೈ ಆದಮೇಲೆ ಇಷ್ಟು ಅಮೌಂಟ್‌ಗೆ ಫ್ರಾಂಕಿಂಗ್ ಮಾಡಬಹುದು, ಅಂದರೆ ಸರ್ಕಾರಕ್ಕೆ ಏನು ಸ್ಟ್ಯಾಂಪ್ ಡ್ಯೂಟಿ ಬರಬೇಕಾಗಿತ್ತು. ಅದು ಬಂದೇ ಬರುತ್ತದೆ. ಸ್ಟ್ಯಾಂಪ್ ವೆಂಡರ್‌ಗಳಿಗೆ ಕೊಡತಕ್ಕಂಥ ಕಮೀಷನ್ ಒಂದು ವರ್ಷಕ್ಕೆ 40-50 ಕೋಟಿ ರೂಪಾಯಿಗಳಾಗುತ್ತದೆ. ನಕಲಿ ಛಾಪಾ ಕಾಗದಗಳನ್ನು ಇವರ ಮೂಲಕ ಮಾಡಿಸತಕ್ಕಂಥ ಅವಕಾಶವಿತ್ತು. ಅದನ್ನು ತಪ್ಪಿಸಿ, ಸರ್ಕಾರಕ್ಕೆ ಬರಬೇಕಾದಂಥ ಹಣ ಬಂದೇ ಬರುತ್ತದೆ, registration is not a right. Registration of document will not accrue the right. ಆದರೆ ಸರ್ಕಾರಕ್ಕೆ ಬರತಕ್ಕಂಥ ಡ್ಯೂಟಿ ಬಂದೇ ಬರುತ್ತದೆ. ಖಾತೆಗಳು ಬದಲಾವಣೆಯಾಗಿ ಲೀಗಲೈಸ್ ಆದಾಗ ಮಾತ್ರ ಸಾಧ್ಯವಾಗುತ್ತದೆ. ಈ ರೀತಿ ಮಾಡಬೇಕು ಎಂದು ನಾವು ಪರ್ಯಾಯ ವ್ಯವಸ್ಥೆಯನ್ನು ತಂದೆವು. ಬಿಳಿಯ ಹಾಳೆಯ ಮೇಲೆ ರಿಜಿಸ್ಟ್ರೇಷನ್ ಮಾಡುವಂಥಾದ್ದು ನಮ್ಮ ಕಾಲದಲ್ಲಿಯೇ ಶುರುವಾಯಿತು ನಂತರ ಎರಡು ತಿಂಗಳಲ್ಲಿ ನಮ್ಮ ಸರ್ಕಾರದ ಅವಧಿ ಮುಗಿಯಿತು.

ಶ್ರೀ ಕಾಗೋಡು ತಿಮ್ಮಪ್ಪ : ತಿದ್ದುಪಡಿ ಮಾಡುವ ನಿಮ್ಮ ಉದ್ದೇಶ ಏನಿತ್ತು ಎಂದರೆ, ಸ್ಟ್ಯಾಂಪ್ ಪೇಪರನ್ನು ತೊಡೆದು ಹಾಕಬೇಕು ಪರ್ಯಾಯವಾಗಿ, ಸ್ಟ್ಯಾಂಪ್ ಡ್ಯೂಟಿಯನ್ನು ಚಲನ್ ಮುಖಾಂತರ ಕಟ್ಟಿ ರಿಜಿಸ್ಟರ್ ಮಾಡಬೇಕು ಎನ್ನುವುದಾಗಿತ್ತು. ಹಾಗಿದ್ದಮೇಲೆ, ಸ್ಟ್ಯಾಂಪ್ ವೆಂಡರ್‌ಗಳು ಇರಬೇಕಾದಂಥ ಅಗತ್ಯವಿರಲಿಲ್ಲ. ಅವರ ಲೈಸೆನ್ಸ್‌ನ್ನು ತತ್‌ಕ್ಷಣ ಏಕೆ ಹಿಂದಕ್ಕೆ ತೆಗೆದುಕೊಳ್ಳಲಿಲ್ಲ.

ಶ್ರೀ ಬಿ. ಸೋಮಶೇಖರ್ : ನಾನು ಕ್ಲಾರಿಫೈ ಮಾಡುತ್ತೇನೆ. ಸ್ಟ್ಯಾಂಪ್ ಪೇಪರನ್ನು ಸಂಪೂರ್ಣವಾಗಿ ಅಚ್ಚು ಹಾಕಬಾರದು ಎಂದು ಹೇಳುವ ಅಧಿಕಾರ ನಮಗಿಲ್ಲ. ಸ್ಟ್ಯಾಂಪ್ ಪೇಪರನ್ನು ಪ್ರಿಂಟ್ ಮಾಡಲೇಬಾರದು ಎನ್ನುವ ಕಾನೂನು ತರಲು ನಮಗೆ ಅಧಿಕಾರವಿಲ್ಲ. ಸ್ಟ್ಯಾಂಪ್ ಪೇಪರನ್ನು ಅಚ್ಚು ಹಾಕತಕ್ಕಂಥ, ನೋಟ್‌ಗಳನ್ನು ಅಚ್ಚು ಹಾಕತಕ್ಕಂಥ ಅಧಿಕಾರ ಕೇಂದ್ರ ಸರ್ಕಾರದ್ದು. ನಮ್ಮ ರಾಜ್ಯ ಸರ್ಕಾರಗಳು ನೋಟ್ಸ್, ಸ್ಟ್ಯಾಂಪ್ ಪೇಪರ್‌ಗಳನ್ನು ಇಂಡೆಂಟ್ ಮಾಡಿಕೊಂಡು ಅದನ್ನು

ಸ್ಟ್ಯಾಂಪ್ ವೆಂಡರ್ ಮುಖಾಂತರ ರಿಜಿಸ್ಟ್ರೇಷನ್‌ಗೆ ಕೊಡುತ್ತಿದ್ದರು. ನಮಗೆ ಏನು ಅಧಿಕಾರವಿದೆ? We can stop buying the stamp papers. We can prevent, on the other hand what is the alternative? The alternative is to have the white paper registration. That was the alternative we made.

ಶ್ರೀ ಕಾಗೋಡು ತಿಮ್ಮಪ್ಪ : ಹಾಗಿದ್ದರೆ, ನೀವು ಸ್ಟ್ಯಾಂಪ್ ವೆಂಡರ್‌ಗಳ ಲೈಸೆನ್ಸನ್ನು ಏಕೆ ವಿತ್‌ಡ್ರಾ ಮಾಡಲಿಲ್ಲ? ಮತ್ತು ತಿದ್ದುಪಡಿ ಮಾಡಿದ ನಿಮಿಷದಿಂದ ನೀವು ಇಂಡೆಂಟ್ ಮಾಡುವುದನ್ನು ಏಕೆ ನಿಲ್ಲಿಸಲಿಲ್ಲ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ : ಎಲ್ಲಿಯವರೆಗೆ ಕೇಂದ್ರ ಸರ್ಕಾರದ ಸ್ಟ್ಯಾಂಪ್ ಪೇಪರ್‌ಗಳು ಚಲಾವಣೆಯಲ್ಲಿರುತ್ತವೆಯೋ, ಅಲ್ಲಿಯವರೆಗೆ ಸ್ಟ್ಯಾಂಪ್ ಪೇಪರ್ ಲೈಸನ್ಸ್ ಇದ್ದೇ ಇರುತ್ತದೆ. ನಮ್ಮ ಉದ್ದೇಶ ಏನಿತ್ತು ಎಂದರೆ, ಸ್ಟ್ಯಾಂಪ್ ಪೇಪರ್‌ಗಳ ಬದಲಾಗಿ ವೈಟ್ ಪೇಪರ್ ಮೇಲೆ ರಿಜಿಸ್ಟ್ರೇಷನ್ ಮಾಡುವುದನ್ನು ಚಲಾವಣೆಗೆ ಕೊಟ್ಟರೆ, Then using the stamp papers will have a natural death. That is what we have done.

ಶ್ರೀ ಕಾಗೋಡು ತಿಮ್ಮಪ್ಪ : ಹಾಗಿದ್ದಾಗ ಸ್ಟ್ಯಾಂಪ್ ವೆಂಡರ್ ಲೈಸೆನ್ಸ್‌ನ್ನು ಏಕೆ ವಿತ್‌ಡ್ರಾ ಮಾಡಲಿಲ್ಲ?

ಶ್ರೀ ಬಿ. ಸೋಮಶೇಖರ್ : ಅದು ಆಟೋಮೆಟಿಕ್ ಆಗಿ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಆಟೋಮೆಟಿಕ್ ಅಲ್ಲ. you yourself issued license. ನಕಲಿ ಛಾಪಾ ಕಾಗದಗಳು ನಿಮ್ಮ ಗಮನಕ್ಕೆ ಬಂದ ಹಿನ್ನಲೆಯಲ್ಲಿ ನೀವು ಕಂದಾಯ ಸಚಿವರಾಗಿ ತಿದ್ದುಪಡಿಯನ್ನು ಮಾಡಿದಿರಿ. ಉದ್ದೇಶವೆಂದರೆ, ನಮ್ಮ ರಾಜ್ಯದಲ್ಲಿ ಸ್ಟ್ಯಾಂಪ್ ಪೇಪರ್ ಬಳಕೆ ಬೇಡ, ಖಾಲಿ ಕಾಗದದಲ್ಲಿ ರಿಜಿಸ್ಟ್ರೇಷನ್ ಮಾಡೋಣ ಎಂದು ಮಾಡಿದಿರಿ. ಹಾಗಿದ್ದ ಮೇಲೆ, ಕಾನ್ಸೀಕ್ವೆನ್‌ಷಿಯಲ್ಲಾಗಿ ಸ್ಟ್ಯಾಂಪ್ ವೆಂಡರ್‌ಗಳ ಲೈಸೆನ್ಸನ್ನು ಏಕೆ ಕ್ಯಾನ್ಸಲ್ ಮಾಡಲಿಲ್ಲ?

Sri B. Somashekhar : Why should we cancel?

ಶ್ರೀ ಕಾಗೋಡು ತಿಮ್ಮಪ್ಪ : ನೀವು ಒಂದು ಕಡೆ, ಖಾಲಿ ಕಾಗದದಲ್ಲಿ ರಿಜಿಸ್ಟ್ರೇಷನ್ ಮಾಡಬೇಕು ಎಂದು ತಿದ್ದುಪಡಿ ಮಾಡಿದಿರಿ. ಇನ್ನೊಂದು ಕಡೆ ಸ್ಟ್ಯಾಂಪ್ ವೆಂಡರ್‌ಗಳ ಲೈಸೆನ್ಸನ್ನು ಹಾಗೆಯೇ ಕಂಟಿನ್ಯೂ ಮಾಡಿ, ಅವರು ನಿಮ್ಮ ಟ್ರಜರಿ ಮುಖಾಂತರ ಇಂಡೆಂಟ್ ಮಾಡಿ ತರಿಸಿಕೊಂಡು, ಅವುಗಳನ್ನು ಹಂಚುವುದಕ್ಕೆ ವ್ಯವಸ್ಥೆಯನ್ನೂ ಮಾಡಿಕೊಟ್ಟಿರಿ. ಇವೆರಡೂ ಆಗ ಏಕಿತ್ತು? ಆಗ ನಿಮ್ಮ ತಲೆಯಲ್ಲಿ ಏನಿತ್ತು?

ಶ್ರೀ ಬಿ. ಸೋಮಶೇಖರ್ : ಇದು ವಿತಂಡವಾದ ಹಳ್ಳಿಗಳ ಕಡೆ ಒಂದು ಗಾದೆ ಹೇಳುತ್ತಾರೆ, 'ತುಂಬಾ ಕೆಳಗೆ ಬಿದ್ದರೂ ಅದೂ ಒಂದು ನಾದ' ಎಂದು ಆ ರೀತಿಯಿದೆ ಇದು.

Sri Kagodu Thimmappa : No. No. I am raising a very pertinent question . ಇಲ್ಲಿರತಕ್ಕಂಥಾದ್ದು ಏನೆಂದರೆ.........

ಶ್ರೀ ಬಿ. ಸೋಮಶೇಖರ್ : ಎರಡು ತಿಂಗಳಲ್ಲಿ ನಮ್ಮ ಸರ್ಕಾರದ ಅವಧಿ ಮುಗಿಯಿತು. ನಮ್ಮ ಉದ್ದೇಶ ಏನಿತ್ತು ಎಂದರೆ, to discourage. Whatever alternative steps were taken, it was taken within one year of my resuming office as Revenue Minister.

ಶ್ರೀ ಕಾಗೋಡು ತಿಮ್ಮಪ್ಪ : ಅದರ ಪರಿಣಾಮ ಏನಾಯಿತು?

SRI B. Somashekhar : The consequences is that using white paper for registration has already started in the State. Then 14% of registration in Bangalore city and about 3-4% registration outside Bangalore city have already started.

ಶ್ರೀ ಕಾಗೋಡು ತಿಮ್ಮಪ್ಪ : ಅದನ್ನು ದೊಡ್ಡ ಸಾಧನೆ ಎಂದು ತಿಳಿದು ಕೊಳ್ಳಬೇಡಿ. ಅದಕ್ಕೆ ಹಿಂದೆಯೂ ಕೂಡ, ಸ್ಟ್ಯಾಂಪ್ ಪೇಪರ್ ಎಲ್ಲೆಲ್ಲಿ ಸಿಗುತ್ತಿರಲಿಲ್ಲವೋ ಅಂಥ ಸಂದರ್ಭದಲ್ಲಿ, ಸ್ಟ್ಯಾಂಪ್ ಡ್ಯೂಟಿಯನ್ನು ಚಲನ್ ಮುಖಾಂತರ ಕಟ್ಟಿ ರಿಜಿಸ್ಟ್ರೇಷನ್ ಮಾಡಿಸುವುದಕ್ಕೆ ಅವಕಾಶವಿತ್ತು.

ಶ್ರೀ ಬಿ. ಸೋಮಶೇಖರ್ : ನಾವೇನೂ ಯೋಚನೆ ಮಾಡಿಲ್ಲ ಎಂದು ತಿಳಿದುಕೊಳ್ಳಬೇಡಿ. As long as the circulation of the stamp papers is there in the Country, suppose we abolish the license, they may go to the Court. Suppose they get the stamp papers from other States. They may go to the Court and bring a stay order. The whole exercise may come to a stand still. for that, as a first step....

ಶ್ರೀ ಕಾಗೋಡು ತಿಮ್ಮಪ್ಪ : ಬೇರೆ ರಾಜ್ಯಗಳಲ್ಲಿ ಏನಾದರೂ ಇರಬಹುದು. ನಮ್ಮ ರಾಜ್ಯದಲ್ಲಿ ನೀವು ಕಂದಾಯ ಸಚಿವರಾಗಿ ಒಂದು ಪ್ರೋಗ್ರೆಸೀವ್ ಸ್ಟೆಪ್‌ನ್ನು ತೆಗೆದುಕೊಂಡಿರಿ, to prevent all these mal-practices, At the same time ಆಗ ನಿಮ್ಮ ಉದ್ದೇಶ ಏನಿತ್ತು ರಾಜ್ಯದಲ್ಲಿ ಸ್ಟ್ಯಾಂಪ್ ಪೇಪರ್‌ಗಳನ್ನು ನಿಲ್ಲಿಸಬೇಕು, ಬಿಳಿಯ ಕಾಗದದಲ್ಲಿ ರಿಜಿಸ್ಟ್ರೇಷನ್ ಮಾಡಿದರೆ ಸಾಕು ಎಂದು ಹೇಳಿದ ಮೇಲೆ........

ಶ್ರೀ ಬಿ. ಸೋಮಶೇಖರ್ : ಅದರ ಪರಿಣಾಮ ಎರಡು ತಿಂಗಳಲ್ಲಿ ಎಷ್ಟು ಆಗಬೇಕೋ ಅಷ್ಟು ಆಗಿದೆ. ನಂತರ ನಮ್ಮ ಸರ್ಕಾರದ ಅವಧಿ ಎರಡು ತಿಂಗಳು ಮಾತ್ರ ಇತ್ತು.

ಶ್ರೀ ಕಾಗೋಡು ತಿಮ್ಮಪ್ಪ : ಅದು ನೀವು ಅರ್ಜೆನ್ಸಿಯಲ್ಲಿ ಮಾಡಿರತಕ್ಕಂಥ ಕೆಲಸ.

ಶ್ರೀ ಬಿ. ಸೋಮಶೇಖರ್ : ಎರಡು ತಿಂಗಳಲ್ಲಿ ನಾವು ಇದನ್ನೆಲ್ಲಾ ಮಾಡಿದ್ದೇವಲ್ಲಾ.

ಅಧ್ಯಕ್ಷರು : ಸೋಮಶೇಖರ್‌ರವರೇ, ನೀವು ಮುಂದುವರೆಸಿ you please continue.

ಶ್ರೀ ಬಿ. ಸೋಮಶೇಖರ್ : ಎರಡು ತಿಂಗಳಲ್ಲಿ ಎಷ್ಟರ ಮಟ್ಟಿಗೆ ಬದಲಾವಣೆ ಮಾಡಿದ್ದೇವೆ ಎಂದರೆ ಪರ್ಯಾಯ ವ್ಯವಸ್ಥೆಯಾಗಿ ಫ್ರಾಂಕಿಂಗ್ ಮೆಷಿನ್ ಅನ್ನು ಇಂಟ್ರೊಡ್ಯೂಸ್ ಮಾಡಿದೆವು. ಅದನ್ನು ನಿಮ್ಮ ಕಣ್ಣೆದುರಿಗೆ ತಂದಿಟ್ಟೆವು. It has come into existence. ಅವರ ಲೈಸೆನ್ಸ್ ಕ್ಯಾನ್ಸಲ್ ಮಾಡಬೇಕಾಗಿತ್ತು ಎಂದರೆ ಅದನ್ನು ಲೀಗಲ್ಲಾಗಿ ಎಕ್ಸಾಮಿನ್ ಮಾಡಬೇಕಿತ್ತು, ಅದನ್ನು ಇನ್ನು ಮುಂದೆ ನೀವು ಮಾಡಬೇಕಾಗಿತ್ತು. ಅದು ಆದಮೇಲೆ 2 ವರ್ಷಗಳ ಕಾಲ, 1.4.2003 ರಿಂದ ನಾವು ಸಂಪೂರ್ಣವಾಗಿ ನಿಲ್ಲಿಸಿದ್ದೇವೆಂದು ಹೇಳಿದಿರಲ್ಲಾ ನೀವು ಯಾವ ಅಮೆಂಡ್‌ಮೆಂಟ್ ತಂದಿದ್ದೀರಿ? ಯಾವ ಅಮೆಂಡ್‌ಮೆಂಟ್ ತಂದಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. I want to know which government order you have issued. Under what provision you have claimed in the country that we have abolished stamp paper

transaction. I would like to know under what provision of the Stam Act you have introduced the System. There is nothing new in that ಇಲ್ಲಿ ಒಬ್ಬರು ಹೇಳುತ್ತಾರೆ. 'Doing away with Stamps" ಸ್ಟೇಟ್‌ಮೆಂಟ್ ಮೊನ್ನೆಯ ದಿವಸ Sunday Magazine ನಲ್ಲಿ ಬಂದಿದೆ "When the Finance Ministry top brass met in North Block to take stock of the Rs. 30,000 crore fake stamp scandal, they focused on incorporating more security features in stamp papers. The logic obviously being that the greater the security features, the more difficult it would be for somebody to forge.

This logic may be sound in tackling the rather familiar and recurring problem of fake currency notes. But, the stamp scam demands an altogether different remedy indeed. The best way of dealing with fake stamp paper is to ban stamp paper altogether.

However, radical it may appear, there is nothing airy-fairy about the idea of banning stamps. North Block has a live example before it, that too right here in India. Karnataka, the home state of the main perpetrator of the scam Abdul Karim Telgi is appropriately the first one to try this reform. "Who has tried this reform? Which government? ಇದು ಒಂದು "Karnataka, the home state of the main perpetrator of the scam Abdul Karim Telgi is appropriately the first one to try this reform. "ಈ ರಿಫಾರ್ಮ್ ಅನ್ನು ಮಾಡಿದವರು ಕಾಂಗ್ರೆಸ್ ಸರ್ಕಾರವೇ ಅಥವಾ ಜನತಾದಳ ಸರ್ಕಾರವೋ?

"Karnataka Government has dispensed with stamp papers. They have been replaced by plain paper." ಇಡೀ ದೇಶದ ರಾಜ್ಯಗಳಲ್ಲೂ ಸ್ಟ್ಯಾಂಪ್ ಪೇಪರ್ ಮೇಲೆ ರಿಜಿಸ್ಟರ್ ಆಗುತ್ತಿದೆ. ವೈಟ್ ಪೇಪರ್‌ನಲ್ಲಿ ರಿಜಿಸ್ಟರ್ ಮಾಡಿಸತಕ್ಕಂಥ ರಿಫಾರ್ಮ್ ತಂದವರು ಯಾರು? They have been replaced by plain paper.

You can, now for instance, buy a flat or a plot thereby executing the sale deed literally on plain paper. True, this may not be any plain piece of paper. They have to be what is supplied by the State..... Each sold at a nominal price of Rs. 2/-

Elsewhere in the country for the same transaction, you would have to buy usual non-judicial stamp papers equivalent to the preseribed stamp duty... "ಇಲ್ಲಿ ಹೇಳುತ್ತಾರೆ "Abolition of stamp paper does not mean that the Karnataka has forsaken the revenue flowing in from their sale. On the contrary, this progressive state has devised a system that promises to enhance this revenue from this source.

The Karnataka Stamp Act, 1957 has been amended to enable payment of stamp duty by demand draft, pay order or at banks through challans. "So, this is provision which the progressive state has made. Which Government? ಆ ಮೇಲೆ "Those machines are used to frank stamps of any denomination on documents." ಅಂದರೆ using franking machines, taking stamp duty through challan, pay order, these are the alternative reforms, using white paper for registration. This is the progressive state in the country which has introduced the new reform. ಇದು ಆದಮೇಲೆ "Besides, it has set up franking machines at all sub-Registrar Offices, where property transactions are registered and in designated banks. Those machines are used to frank stamps of any denomination on documents." When was this introduced? When was this Government introduced? Why did you delay it for two years? When this franking syste m was introduced in 1999 why did you delay it for two years? ಇನ್ನೊಂದು ಬಹಳ ತಮಾಷೆಯ ವಿಚಾರ ಇದ್ದು ಇದನ್ನು ಹೇಳುತ್ತೇನೆ. "The Government is also planning to introduce state of the art taxmeasuses. 'People have taken easily to the new system as it is more transparent and user-Friendly.' say, former Karnataka Inspector-General of Registration and Commissioner of Stamps K. Sathya Murthy, Who played a big role in implementing stamp paper paperless Scheme." What a fake officer he is? This is another fake officer. This is another fake government. ಪಾಪ, ಐ.ಎ.ಎಸ್. ಆಫೀಸರ್ ಆಗಿದ್ದಂಥ ರವಿಕುಮಾರ್ ಎನ್ನುವವರು ನಮ್ಮ ಜೊತೆ ಇದ್ದವರು. It is he who proposed to me and explained to me everything "Sir, this is the idea to ban this. And there is already a case in Coorg and it would be a credit to this government, Sir. This you have to do." ಎಂದು ಹೇಳಿದಾಗ ಇಮ್ಮಿಡಿಯೆಟ್ ಆಗಿ ನಾನು ಅದನ್ನು ತರಿಸಿ ಅಮೆಂಡ್‌ಮೆಂಟ್ ಮಾಡಿ ಅಸೆಂಬ್ಲಿಯೊಳಗೆ ತಂದು ಮಾಡಿದ ಮೇಲೆ this fake officer has claimed. ಆಗ ನೀವು ಏನು ಹೇಳುತ್ತೀರಿ ಎಂದರೆ "There is no reason why this cannot be replicated by other states. The efficacy of the Karnataka model is evident from the paradox between stamp and currency notes. When it comes to currency notes, people are encouraged to resort to alternatives: cheques, demand drafts, credit cards, debit cards even e-commerce." ಇದನ್ನು ಹೇಳುತ್ತಾರಲ್ಲಾ ಮಾನಮರ್ಯಾದೆ ಬೇಡವೇ? ನಾಚಿಕೆ ಬೇಡವೇ? ನಾನು ಒಂದು ವಿಷಯವನ್ನು ಹೇಳುವುದಕ್ಕೆ ಸಂತೋಷಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದ ವರ್ಷವೇ......

ಶ್ರೀ ಕಾಗೋಡು ತಿಮ್ಮಪ್ಪ : ಒಂದ್ನಿಮಿಷ.

ಶ್ರೀ ಬಿ. ಸೋಮಶೇಖರ್ : ಸ್ವಲ್ಪ ಮಾತನಾಡುವುದಕ್ಕೆ ಅವಕಾಶ ಕೊಡಿ ಸ್ವಾಮಿ. ತಾವು ಏನು ಉತ್ತರ ಕೊಡುತ್ತೀರೋ ಆನಂತರ ಕೊಡಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಭಾಷೆ ಬಳಸುವಾಗ ಸರಿಯಾಗಿ ಬಳಸಿರಿ. ಮಾನ ಮರ್ಯಾದೆ ಇಲ್ಲದೆ ನಿಮಗೆ....

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನಿಮಗೆ ಮಾನ ಮರ್ಯಾದೆ ಇದೆಯೇನು?

(ಗೊಂದಲ)

ಶ್ರೀ ಬಿ. ಸೋಮಶೇಖರ್ : ನಿಮ್ಮ ಸರ್ಕಾರಕ್ಕೆ ಮಾನಮರ್ಯಾದೆ ಇಲ್ಲ ಎನ್ನುವುದನ್ನು ಹೇಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ : ನಮ್ಮ ಮಾನ ಮರ್ಯಾದೆ ಏನಾಗಿದೆ?

SRI B. SOMASHEKHAR : Why do you take credit to you?

SRI KAGODU THIMMAPPA : We are not taking credit. Use good words.

(ಗೊಂದಲ)

SRI B. SOMASHEKHAR : When you have not done it why do you take credit? is it not shameless?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಪ್ರತಿ ಟೀಕೆ ಮಾಡುವುದಕ್ಕೆ ಬೇರೆ ಭಾಷೆ ಇಲ್ಲವೇನು?

SRI B. SOMASHEKHAR : Is it not shameful on your part?

ಶ್ರೀ ಕಾಗೋಡು ತಿಮ್ಮಪ್ಪ : ಇದೇ ಬಾಷೆಯಲ್ಲಿ ನಾವು ನಿಮಗೆ ಹೇಳಿದರೆ ಹೇಗೆ ಇರುತ್ತದೆ?

SRI B. SOMASHEKHAR : You tell me what shameless act I have done. I will apologise.

ಅಧ್ಯಕ್ಷರು : ಇಲ್ಲಿ ನಾನು ಹೇಳುವುದನ್ನು ಕೇಳಿ. ಇಬ್ಬರು ಸೀನಿಯರ್ ಸದಸ್ಯರಾಗಿದ್ದೀರಿ. ಈ ರೀತಿ ಮಾತನಾಡಿದರೆ ಜೂನಿಯರ್ ಸದಸ್ಯರು ಏನು ತಿಳಿದುಕೊಳ್ಳುತ್ತಾರೆ? ನಿಮ್ಮಿಬ್ಬರಲ್ಲಿ ಯಾರೂ ಜೂನಿಯರ್ ಸದಸ್ಯರಲ್ಲ ಸೀನಿಯರ್ ಆಗಿರುವುದರಿಂದ ಬೇರೆಯವರಿಗೆ ಮಾದರಿಯಾಗುವಂತೆ ಮಾತನಾಡಿ.

ಶ್ರೀ ಬಿ. ಸೋಮಶೇಖರ್ : ಹೌದು ಅವರು ಸೀನಿಯರ್ ಮಿನಿಸ್ಟರ್ ಆಗಿರುವಂಥವರು. ನಾವು ಅಮೆಂಡ್‌ಮೆಂಟ್ ತಂದಾಗ ಅವರು ಈ ಕಡೆ ಇದ್ದರು. ಹೊಸದಾಗಿ ಮುಖ್ಯಮಂತ್ರಿಗಳಾಗಿ ಬಂದಾಗ ಒಂದು ವಿಚಾರವನ್ನು acknowledge ಮಾಡಿದರು ಅದೇನೆಂದರೆ, ನಾನು ಇವತ್ತು ಹಿಂದಿನ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಈ ಪವರ್ ಸೆಕ್ಟಾರ್‌ನಲ್ಲಿ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. He has shown magnanimity and he has acted like a statesman. ನನಗೂ ಬಹಳ ಸಂತೋಷ ಆಯಿತು. ಒಳ್ಳೆಯದನ್ನು ಒಳ್ಳೆಯದು ಎಂದು ಹೇಳಿದರಲ್ಲಾ ಇದನ್ನು

ಏಕೆ ಹೇಳಲಿಲ್ಲ? ನಾನು ಪಕ್ಕದಲ್ಲಿ ಇದ್ದೇನೆ ಇವನಿಗೆ ಏಕೆ ಕ್ರೆಡಿಟ್ ಕೊಡಬೇಕೆಂತಲೇ? Why did he not show that magnanimity and statesmanship in his statement and at the same time why this government has taken credit for what we have done? ಆ ಮೇಲೆ ಅದೂ ಕೂಡ ನಾಚಿಕೆ ಇಲ್ಲದೆಯೆ 1.4.2003 ರಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ, ಅದೇನೆಂದರೆ, ಕೇಂದ್ರ ಸರ್ಕಾರದಲ್ಲಿ ಹೋಗಿ ಕೇಳಿಕೊಂಡಿದ್ದೀರಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಸೋಮಶೇಖರ್‌ರವರೇ ನೀವು ಈಗ ಹೇಳಿದ್ದಕ್ಕೆ ಅವರಿಗೆ ಸಿಟ್ಟು ಬಂತು. ಹಿಂದೆ ಅವರು ವಿರೋಧ ಪಕ್ಷದಲ್ಲಿದ್ದಾಗ ನಮಗೆ ಏನೇನು ಹೇಳಿದ್ದಾರೆ ಎನ್ನುವುದನ್ನು ರೆಕಾರ್ಡ್ ತೆಗೆಸಿ ನೋಡಿ. ಆಗ ಇದಕ್ಕಿಂತ ಬಲವಾದ ಶಬ್ದಗಳನ್ನು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ಸದನದಲ್ಲಿ ನಾಲಿಗೆ ತಪ್ಪಿ ಅಂಥ ಭಾಷೆಯನ್ನು ಎಂದಾದರೂ ಬಳಸಿದ್ದರೆ ತೆಗೆದುಬಿಡಿ.

ಶ್ರೀ ಎಸ್.ಎಸ್. ಪಾಟೀಲ್ : ಇಬ್ಬರು ಸೇರಿ ನಮಗೆ ಏನೇನು ಬೈದಿರಿ ಎನ್ನುವುದನ್ನು ಹಳೆಯ ರೆಕಾರ್ಡ್‌ನ್ನು ತೆಗೆಸಿ ನೋಡಿರಿ.

ಅಧ್ಯಕ್ಷರು : ಸಾಧ್ಯವಾದಷ್ಟು ಪಾರ್ಲಿಮೆಂಟರಿ ಪದವನ್ನು ಉಪಯೋಗಿಸಿರಿ. ಸಾಧ್ಯವಾದಷ್ಟು ಎಂದು ಅಲ್ಲ ಯಾವಾಗಲೂ ಪಾರ್ಲಿಮೆಂಟರಿ ಪದವನ್ನು ಉಪಯೋಗಿಸಿ.

ಶ್ರೀ ಎಸ್.ಎಸ್. ಪಾಟೀಲ್ : ಪಾರ್ಲಿಮೆಂಟರಿ ಪದ ಆಗುವುದಿಲ್ಲ ಎಂದು ಅದು ಆಗಿದೆ. ಆ ಸಂದರ್ಭದಲ್ಲಿ ಅವರು ಇದೆಲ್ಲಕ್ಕಿಂತ ಬಲವಾದ ಪದವನ್ನು ಉಪಯೋಗಿಸಿದ್ದರು. ಅದು ರೆಕಾರ್ಡ್‌ನಲ್ಲಿ ಇರುತ್ತದೆ ಬೇಕಾದರೆ ತೆಗೆಸಿ ನೋಡ್ರಿ.

ಶ್ರೀ ಬಿ. ಸೋಮಶೇಖರ್ : ಆಗ ವಿರೋಧ ಪಕ್ಷದ ನಾಯಕರಾಗಿ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಇದ್ದರು ಮಾನಮರ್ಯಾದೆ ಇದೆಯೇ ನಿಮ್ಮ ಸರ್ಕಾರಕ್ಕೆ? ನೀತಿಗೆಟ್ಟ ಸರ್ಕಾರ ಇತ್ಯಾದಿ ಶಬ್ದಗಳನ್ನು ಹೇಳಿದ್ದರು. ಇವೆಲ್ಲವನ್ನು ಹೇಳಿದ್ದೇವೆ. ಆವಾಗ ಎಂಥೆಂಥ ಪದಗಳನ್ನು ಬಳೆಸಿದ್ದಾರೆ ಎಂಬುದನ್ನು ನೋಡಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆವಾಗ ನಾನು ಹೇಳಿದ್ದೇ ಅವರು ಕೇಳಿಕೊಂಡು ಕುಳಿತಿದ್ದರು. ಈಗ ನಾವು ಕೇಳುವುದಕ್ಕೆ ತಯಾರಿಲ್ಲ.

ಶ್ರೀ ಬಿ. ಸೋಮಶೇಖರ್ : ಅಂದರೆ ಮರ್ಯಾದಸ್ಥರು ಸ್ವಲ್ಪ ಇದಕ್ಕೆ..

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಲ್ಲಲ್ಲ, ಮರ್ಯಾದಸ್ಥರು ಅಂದರೆ ಹಾಗೆ ನೀವು ಮಾಡಿದ್ರಿ ಅದಕ್ಕೆ ನಾವು ಹೇಳಿದ್ದನ್ನು ಕೇಳಿದ್ರಿ. ಆದರೆ ನಾವು ಹಾಗೆ ಮಾಡಿಲ್ಲ ಅದಕ್ಕೆ ಕೇಳುವುದಿಲ್ಲ. ನೀವು ಆವಾಗ ಆ ರೀತಿಯಾಗಿ ನಾವು ಹೇಳಿದರೂ ಕೇಳತಕ್ಕಂಥ ಕೆಲಸಗಳನ್ನು ನೀವು ಮಾಡಿದ್ರಿ, ಅದಕ್ಕೆ ಅನ್ನಿಸಿಕೊಂಡ್ರಿ. ಈಗ ನಾವು ಆ ಕೆಲಸ ಮಾಡಿಲ್ಲ ಅದಕ್ಕಾಗಿ ನಾವು ಅನ್ನಿಸಿಕೊಳ್ಳುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಮರ್ಯಾದಸ್ಥರು ಸೂಕ್ಷ್ಮವಾಗಿ ಆರೋಪ ಬಂದ ತಕ್ಷಣ ಸೂಕ್ಷಮತೆಯಿಂದ immediate ಆಗಿ ರಾಜೀನಾಮೆ ಕೊಟ್ಟುಬಿಡುತ್ತೇವೆ. ಭಂಡರುಗಳಿಗೆ ಎಷ್ಟು ಹೇಳಿದರೂ ಕೇಳಿಕೊಂಡು ಸುಮ್ಮನಿರುತ್ತಾರೆ. ಏನು ಮಾಡುವುದಕ್ಕಾಗುತ್ತದೆ? ಭಂಡರಿಗೂ, ಮರ್ಯಾದಸ್ಥರಿಗೂ ಅಷ್ಟೇ ವ್ಯತ್ಯಾಸ.

ಅಧ್ಯಕ್ಷರು : ಇನ್ನೂ ಮಾತನಾಡುವವರು ಸುಮಾರು ನಾಲ್ಕೈದು ಜನರಿದ್ದಾರೆ.

ಶ್ರೀ ಬಿ. ಸೋಮಶೇಖರ್ : ನಾವು ಒಂದು ಪಕ್ಷದ ಮುಖಂಡರು. ಮಂತ್ರಿಗಳಾಗಿದ್ದವರು, ಹೇಳಬೇಕಾಗುತ್ತದೆ.

ಅಧ್ಯಕ್ಷರು : ಮಾತನಾಡುವುದಕ್ಕೆ ನನ್ನ ಅಭ್ಯಂತರವಿಲ್ಲ. ಇನ್ನೂ ಸುಮಾರು 4–5 ಜನರು ಮಾತನಾಡುವವರಿದ್ದಾರೆ. ನಾವು 6 ಗಂಟೆಗೆ ಕ್ಲೋಸ್ ಮಾಡಬೇಕು. 6.15ಕ್ಕೆ ರಾಜಭವನಕ್ಕೆ ಹೋಗಬೇಕು.

SRI B. SOMASHEKHAR: I would like to ask what is the new system, new amendment you have brought in which enabled this government to use only white paper from 1.4.2003 1.4.03ರಿಂದ ಅಬಾಲಿಷ್ ಮಾಡಿದ್ದೇವೆಂದು ಹೇಳುತ್ತೀರಿ. ಗೌರ್ನರ್ ಕೈಯಲ್ಲಿ ಸತ್ಯಕ್ಕೆ ದೂರವಾದ ಮಾತನ್ನು ಕೇಳಿಸುತ್ತಿದ್ದೀರಿ. ನೀವು. ಇದೆಂಥ ಸರ್ಕಾರವೆಂದು ನಾವು ಹೇಳಬೇಕು? 1.4.03 ರಲ್ಲಿ ಏನು ಹೊಸ ತಿದ್ದುಪಡಿ ತಂದಿರಿ? I would like to know? ನಾವೇನು ತಂದಿದ್ದೇವೆ, ಅದನ್ನೇ 1.4.03 ರಲ್ಲಿ ಹೇಳಿದ್ದೀರಿ, That has been practised since August, 1999. 99 ಆಗಸ್ಟ್ ಆವತ್ತು ಮಾಡಿದ್ದರೆ ಈಗ ಏಕೆ ಬರುತ್ತಿತ್ತು? ಫ್ರಾಂಕಿಂಗ್ ಮೆಷಿನ್‌ಗೆ ಲೈಸೆನ್ಸ್ ಕೊಟ್ಟಿಲ್ಲ. ನಕಲಿ ಛಾಪಾ ಕಾಗದಗಳನ್ನು ತಂದಿರಿ,ಕರೀಂ ಲಾಲಾ ನಕಲಿ ಆಫೀಸ್ ತೆಗೆಸಿದ ಎಲ್ಲಾ ಕಡೆ ಬ್ಯಾಂಕ್ ಅಕೌಂಟ್ ಓಪನ್ ಮಾಡಿದ, ಹಣ ಕಲೆಕ್ಷನ್ ಆಯಿತು. ಯಾವ್ಯಾವ ಪಕ್ಷಗಳಿಗೆ ಏನೇನು ಸಮಾವೇಶಗಳಿಗೆ ಹಣ ಕೊಟ್ಟರೋ ಗೊತ್ತಿಲ್ಲ. ಸಾವಿರಾರು ಕೋಟಿ ರೂಪಾಯಿ ದೋಚಿಕೊಂಡು ಹೋದಮೇಲೆ 1.4.03 ರಿಂದ ನಾವು ಅಬಾಲಿಷ್ ಮಾಡಿದ್ದೇವೆ, Ours is a progressive state: it is a unique in the country ಎಂದು ಹೇಳುವುದು. ಏನಿದು? This will not bring credit to you ಇದು ಆಗಿದೆ ಎಂದು ಹೇಳಬೇಕಾಗುತ್ತದೆ. ನಾನು ಅದನ್ನೇ ಹೇಳುತ್ತಿರುವುದು you have abetted this crime ಇಲ್ಲವೆಂದರೆ ನೀವು ಆವತ್ತೇ ಮಾಡಿದ್ದರೆ. ಏಕೆ ಆಗುತ್ತಿರಲಿಲ್ಲ? ಇದಾದಮೇಲೆ ನೀವು ಯಾವ ರೀತಿ ನಡೆದುಕೊಂಡಿದ್ದೀರಿ? ಈಗಲಾದರೂ ತಿದ್ದುಕೊಂಡು ಮ್ಯಾಗ್ನಾನಿಮಿಟಿ ತೋರಿಸಿ. ನನಗೆ ಇನ್ನೇನೂ ಆಶ್ಚರ್ಯವಿಲ್ಲ, ಬೇರೆಯವರು ಮಾಡಿದ್ದನ್ನು ನಾವೇ ತೆಗೆದುಕೊಳ್ಳುವುದು ಇದೆಯಲ್ಲಾ ಇದಕ್ಕೇನು ಹೇಳಬೇಕು ಗೊತ್ತಿಲ್ಲ. ಅಕ್ಷರ ದಾಸೋಹದಲ್ಲಿ ತೋರಿಸಿದ್ದೀರಿ. ಆನ್‌ಲೈನ್ ಲಾಟರಿ ಮಾಡಿ, ಆ ದುಡ್ಡಿನಲ್ಲಿ ಮಕ್ಕಳಿಗೆ ಉಪಾಹಾರ ಕೊಡುತ್ತೇವೆಂದು ಮುಚ್ಚಿಕೊಳ್ಳುವುದಕ್ಕೆ ಹೊರಟಿದ್ದೀರಿ. ಆ ಪಾಪದ ಕೆಲಸ ಮಾಡಿ ಮುಚ್ಚುಕೊಳ್ಳುವುದಕ್ಕೆ, ಮುಖ್ಯ ಮಂತ್ರಿಗಳು ಕುಳಿತುಕೊಂಡು ಊಟ ಮಾಡುತ್ತಿರುವುದನ್ನು ನೋಡಿದರೆ.....

ಅಧ್ಯಕ್ಷರು : ಸಬ್ಜೆಕ್ಟ್ ಎಲ್ಲಿಂದ ಎಲ್ಲಿಗೋ ಹೋಗುತ್ತಿದೆ.

ಶ್ರೀ ಬಿ. ಸೋಮಶೇಖರ್ : ನಾನು ಉದಾಹರಣೆ ಕೊಟ್ಟೆ. ಅಂತಹದೇ ಒಂದು ಉದಾಹರಣೆ ಮುಖ್ಯಮಂತ್ರಿಗಳ ಸಾಲಿನಲ್ಲಿ ಕುಳಿತು ಬಾಳೆ ಎಲೆಯಲ್ಲಿ ಊಟ ಹಾಕಿಸಿಕೊಂಡು ಊಟ ಮಾಡಲು ಕುಳಿತರು ವೈಟ್ ಪೇಪರ್‌ನಲ್ಲಿ ತೆಗೆದು, ಜನರಿಗೆ ಟೋಪಿ ಹಾಕುವುದಕ್ಕೆ ಹೊರಟಿದ್ದೀರಾ? ಗೌರ್ನರ್ ಮೂಲಕ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿಸುವುದಕ್ಕೆ ಹೊರಟಿದ್ದೀರಾ? ನೀವು ಮಾಡಿರುವುದನ್ನು ಮುಚ್ಚುವುದಕ್ಕೆ ಹೊರಟಿದ್ದೀರಾ? ರೋಷನ್ ಬೇಗ್‌ನವರು ಒಬ್ಬರೇ ರಾಜೀನಾಮೆ ಕೊಟ್ಟರು. 2–3 ವರ್ಷಗಳಿಂದ ಇದೇ ಬೇಡಿಕೆ ಇತ್ತು. ಇದೇ ಬೇಡಿಕೆ ಇದ್ದರೂ ಕೊಡುವುದಿಲ್ಲ, ಕೊಡುವುದಿಲ್ಲ ಎಂದು ಅವರು ಏನು ತಪ್ಪು ಮಾಡಿಲ್ಲವೆಂದು ಹೇಳಿದ ಮೇಲೆ, ಎವಿಡೆನ್ಸ್ ಸಿಕ್ಕ ಮೇಲೆ ನೀವು ಕೊಟ್ಟಿರಿ. ಈಗ ನನಗೆ ಅನುಮಾನ ಏನು ಅನ್ನಿಸುತ್ತಿದೆ ಎಂದರೆ, ಮತ್ತೆ ಯಾವತ್ತೂ ಅವರನ್ನು ವಾಪಸ್ಸು, ನಾಳೆ

ನಾಡಿದ್ದರಲ್ಲಿ ತೆಗೆದುಕೊಳ್ಳುತ್ತೀರೋ ಗೊತ್ತಿಲ್ಲ, ಯಾವ ಕಾರಣದಿಂದ ರಾಜೀನಾಮೆ ತೆಗೆದುಕೊಂಡಿದ್ದೀರೆಂಬುದನ್ನು ಹೇಳಿಲ್ಲ. ತಮಗೆ ಗೊತ್ತಿದೆ ನಾನು ರಾಜೀನಾಮೆ ಕೊಟ್ಟ ಮಾರನೇ ದಿನ, ಅಕ್ಸೆಪ್ಟ್ ಆದ ಮಾರನೇ ದಿನ ಬಂದು ಸೆಲ್ಫ್ ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ. ಅದು ಸಂಪ್ರದಾಯ. ಯಾವ ಕಾರಣದಿಂದ ಕೊಟ್ಟಿದ್ದೇನೆ, ಈ ಕಾರಣವೇನು ಎಂದು ಸೆಲ್ಫ್ ಎಕ್ಸ್‌ಪ್ಲನೇಷನ್ ಸ್ಟೇಟ್‌ಮೆಂಟ್ ಕೊಡಬೇಕಿತ್ತು? ಕೊಟ್ಟಿಲ್ಲ ನೀವಾದರೂ ಹೇಳಬೇಕು. ನೀವು ಎಷ್ಟು ಮಂತ್ರಿಗಳಿಂದ ರಾಜೀನಾಮೆ ತೆಗೆದುಕೊಂಡಿದ್ದೀರಿ. ಯಾವುದೋ ಹೇಳಿಕೆ ಕೊಟ್ಟರೆಂದು ಮಾನ್ಯ ಜಾನ್‌ರವರ ರಾಜೀನಾಮೆ ತೆಗೆದುಕೊಂಡಿರಿ. ಮತ್ತೆ ಅವರನ್ನು ವಾಪಸ್ಸು ತೆಗೆದುಕೊಂಡಿರಿ. ಇನ್ನೊಬ್ಬರು ಅಗ್ರಿಕಲ್ಚರ್ ಮಿನಿಸ್ಟರ್ ಮಾನ್ಯ ಟಿ.ಬಿ. ಜಯಚಂದ್ರರವರಿಂದ ರಾಜೀನಾಮೆ ತೆಗೆದುಕೊಂಡು, ಇನ್ನೊಂದು ಕಡೆ ಅವರನ್ನು ಡೆಲ್ಲಿಗೆ ಕಳುಹಿಸಿದಿರಿ. ಅಲ್ಲಿಗೆ ಗೂಟದ ಕಾರು ಹೋಗಲಿಲ್ಲ, ಮನೆ ಹೋಗಲಿಲ್ಲ, ಸ್ಟೇಟಸ್ ಹೋಗಲಿಲ್ಲ. ಮತ್ತೆ ವಾಪಸ್ಸು ಅವರನ್ನು ತಂದಿರಿ. ಯಾವ ಕಾರಣದಿಂದ ತೆಗೆದಿರಿ, ಯಾವ ಕಾರಣದಿಂದ ತೆಗೆದುಕೊಂಡಿರಿ, ಗೊತ್ತಿಲ್ಲ. ಇನ್ನೊಬ್ಬರು ಮಾನ್ಯ ಅಲ್ಲಂ ವೀರಭದ್ರಪ್ಪನವರು, ಅವರನ್ನು ತೆಗೆದಿರಿ. ಸ್ವಲ್ಪ ದಿನ ನಿಮ್ಮ ಪಕ್ಷದಲ್ಲಿ ಕೆಲಸ ಮಾಡಿಸಿ, ವಾಪಸ್ಸು ತೆಗೆದುಕೊಂಡಿರಿ. ಯಾವ ಕಾರಣದಿಂದ ತೆಗೆದಿರಿ, ಯಾವ ಕಾರಣದಿಂದ ತೆಗೆದುಕೊಂಡಿರಿ, ಗೊತ್ತಿಲ್ಲ, ಅದು ನಿಮ್ಮ ಪ್ರಿರೋಗೆಟಿವ್ ಇದೆ, ಮಾಡಿ ನಾವು ಅದಕ್ಕೇನೂ ಕೇಳುವುದಿಲ್ಲ, ಮಾನ್ಯ ಕೌಜಲಗಿಯವರ ರಾಜೀನಾಮೆ ಪಡೆದಿರಿ. ಮತ್ತೆ ವಾಪಸ್ಸು ತೆಗೆದುಕೊಂಡಿರಿ. ಯಾವ ಕಾರಣದಿಂದ ರಾಜೀನಾಮೆ ತೆಗೆದುಕೊಂಡಿರಿ ಗೊತ್ತಿಲ್ಲ, ಇದು ನಿಮ್ಮ ಪ್ರಿರೋಗೆಟಿವ್ ಏನಾದರೂ ಮಾಡಿ. ಮಾನ್ಯ ರೋಷನ್ ಬೇಗ್ ರಾಜೀನಾಮೆಯನ್ನು ಯಾವ ಕಾರಣದಿಂದ ತೆಗೆದುಕೊಂಡಿರಿ? ಮತ್ತೆ ಅವರನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲವೆಂಬುದನ್ನು ಯವ ಗ್ಯಾರಂಟಿ? ಪ್ರಜಾಪ್ರಭುತ್ವದಲ್ಲಿ ಇದನ್ನೆಲ್ಲಾ ಕೇಳಬೇಕಾಗುತ್ತದೆ. ಕಾರಣ ಹೇಳಿಲ್ಲ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ತೆಗೆದುಕೊಳ್ಳುವುದಿಲ್ಲವೆಂದು ಹೇಳಿ ಸ್ಟಾಂಪ್ ಪೇಪರ್‌ನಲ್ಲಿ ರಿಜಿಸ್ಟರ್ ಮಾಡಿ ಕೊಟ್ಟುಬಿಡೋಣ. ಒಂದು ಕಡೆ ಪ್ರಿರೋಗೆಟಿವ್ ಎಂಬ ಮಾತನ್ನು ಹೇಳುತ್ತೀರಿ. ಇನ್ನೊಂದು ಕಡೆ ಯಾವ ಕಾರಣದಿಂದ ತೆಗೆದಿರಿ, ಯಾವ ಕಾರಣದಿಂದ ತೆಗೆದುಕೊಂಡಿರಿ ಎಂದು ಹೇಳುತ್ತೀರಿ. ರಾಜ್ಯಾಂಗದಲ್ಲಿ ಹೇಳಿದೆಯೇ? ಮುಖ್ಯಮಂತ್ರಿ ಅಥವಾ ಪ್ರಧಾನ ಮಂತ್ರಿ ಯಾರನ್ನಾದರೂ ತೆಗೆಯಬೇಕಾದರೆ ಆಪೋಜಿಷನ್‌ರವರಿಗೆ ಅದರಲ್ಲೂ ಸೋಮಶೇಖರ್‌ರವರಿಗೆ ಹೇಳಿ ನಾನು ಇಂಥ ಕಾರಣಕ್ಕೋಸ್ಕರ ತೆಗೆದಿದ್ದೇನೆ, ಆಮೇಲೆ ಪುನಃ ಅವರನ್ನು ವಾಪಸ್ಸು ತೆಗೆದುಕೊಳ್ಳುವಾಗ ಇಂಥ ಕಾರಣಕ್ಕೋಸ್ಕರ ನಾನು ತೆಗೆದುಕೊಂಡಿದ್ದೇನೆಂದು ಹೇಳಬೇಕೇ? ಇದು ಹೊಸ ತಿದ್ದುಪಡಿ. ಅಂಬೇಡ್ಕರ್‌ರವರು ರಾಜ್ಯಾಂಗವನ್ನು ಬರೆದರು. ನಾವು ಅದನ್ನು ಅನುಸರಿಸುತ್ತಿದ್ದೇವೆ. ಸೋಮಶೇಖರ್‌ರವರು ಆ ರಾಜ್ಯಾಂಗಕ್ಕೆ ಒಂದು ತಿದ್ದುಪಡಿ ತಂದರೆ ಇನ್ನು ಮೇಲೆ ಇದನ್ನೆಲ್ಲಾ ಜಾರಿಗೆ ತರೋಣ.

SRI B. SOMASHEKHAR : As I have already told that the Chief Minister has got prerogative to take whomsoever he wants in the Cabinet.

SRI. S.M. KRISHNA : That is the constitutional position.

SRI B. SOMASHEKHAR : But, this House has got a right to know, the people of the State has got a right to know the reason why

this Minister has been dropped. Is it not the propriety on the part of the Government? Is it not propriety on the part of the Chief Minister to say that for this reason I have dropped him.

SRI S.M. KRISHNA : It is not. I would like to go on record that it is not necessary for the Chief Minister to go on record to convey to the House as to why a Minister is being dropped. It is not.

SRI B. SOMASHEKHAR : Particularly, when serious allegations are made against some particular Minister and if the Minister resigne....

SRI. S.M. KRISHNA : If you would kindly yield ಜಾರ್ಜ್ ಫರ್ನಾಂಡಿಸ್‌ರವರು ರಾಜೀನಾಮೆ ಕೊಟ್ಟರು. did the Prime Minister tell Lok Sabha or Rajya Sabha as to why he has resigned Or when he was taken back, did he give an explanation? I think he did the right thing, because it is the prerogative of the Prime Minister either to accept a resignation or to reject a resignation, seek a resignation, nominate somebody in his place. So, why do you want tc distort the constitutional position? ನೀವು ಎಜುಕೇಷನ್ ಮಿನಿಸ್ಟರ್ ಆಗಿದ್ದಿರಿ. ನೀವು ನಮ್ಮ ಪಕ್ಕದ ಊರಿನವರು. ರಾಜ್ಯಾಂಗವನ್ನು ಏಕೆ....

ಶ್ರೀ ಬಿ. ಸೋಮಶೇಖರ್ : ನಾವು ರಾಜೀನಾಮೆ ಕೊಟ್ಟು, ಇಲ್ಲಿ ಹೇಳಿಕೆ ಕೊಟ್ಟಿದ್ದೇವೆ. Moral propriety and the system ಬಗ್ಗೆ ಹೇಳುತ್ತಿದ್ದೇನೆ. I am not questioning your prerogative as a constitutional authority. I am not questioning it. I am not questioning the prerogative as a constitutional authority. The tradition, the custom, propriety - people have got a right to know when a particular allegation is made against the Minister.

ಶ್ರೀ ಕೆ.ಹೆಚ್. ರಂಗನಾಥ್ : ಹಾಗೆಂದು ನಮ್ಮ ರೂಲ್ಸ್ ರಾಜ್ಯಾಂಗದಲ್ಲಿ ಇಲ್ಲ. The first gentlemen while he resigned, who made a statement on the floor of the House was late Baba Saheb Ambedkar. But, ಕೊಡುವುದಕ್ಕೆ ಮುಂಚೆ ಸ್ಪೀಕರ್‌ರವರಿಗೆ ಕೊಟ್ಟಿದ್ದರು. Late Anantha Shayanam Iyengar was the Deputy Speaker who was also presiding over the House then. He did not approve. He did not allow him. Since he was not allowed, be gave a statement outside the House. There are some precedents. ಹಾಗಾದರೆ ಎಲ್ಲರೂ ಬಂದು ಕೇಳುತ್ತಾರೆ. Who elects the leader? The majority of the party elects the leader.

ಮತ್ತೆ? ನೀವು 83ರಲ್ಲಿ ಸರ್ಕಾರ ಮಾಡಿದಾಗ ನಿಮಗೆ ಮೆಜಾರಿಟಿ ಇತ್ತಾ? ಆದರೂ 17 ಜನರ ಸಹಾಯ ತೆಗೆದುಕೊಂಡಿರಿ ಮಾನ್ಯ ಶೆಟ್ಟರ್‌ರವರ ಸಹಾಯ ತೆಗೆದುಕೊಂಡಿದ್ದಿರಿ. ಬಿ.ಬಿ. ಶಿವಪ್ಪನವರು

ಬೇಸತ್ತು ಈ ಕಡೆ ಬಂದರು. ಏನಾದರೂ ಲೆಟ್ ಅಸ್ ಪ್ಲೇಸ್ ಥಿಂಗ್ಸ್, ಒಳ್ಳೆಯ ರೆಕಾರ್ಡ್‌ನಲ್ಲಿ ಮಾಡೋಣ. ಒಳ್ಳೆಯ ಪ್ರಿಸಿಡೆಂಟ್ಸ್ ಹೇಳೋಣ ಹೇಳಬಾರದು ಎಂದಲ್ಲ. ನೀವು ಹೊರಗಡೆ ಕೇಳುವುದನ್ನು ಇಲ್ಲಿ ಬಂದು ಹೇಳಿದ್ದೀರಾ? ಮಾಡಿದ್ದೀರಾ? ಎಂದರೆ ಯಾವ ರೆಗ್ಯುಲೇಷನ್ಸ್... ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ ಅಷ್ಟೆ. ಎಲ್ಲಿದೆ ಹೇಳಿ? ಕೊಡಬೇಕೆಂದು ರೂಲ್ಸ್, ರಾಜ್ಯಾಂಗದಲ್ಲಿ ಇದೆಯೇ? ರಾಜ್ಯಾಂಗದಲ್ಲಿ ಹೌಸ್ ಎಂದು ಹೇಳುತ್ತಾರೆ. who enjoys the majority of House. ಅವರು ಲೀಡರ್ ಆಗುತ್ತಾರೆ. He has got a right and prerogative to form the Ministery ನಮ್ಮನ್ನು ಕೇಳಿ ಮಾಡಬೇಕೆಂದಿದೆಯೇ?

ಶ್ರೀ ಬಿ. ಸೋಮಶೇಖರ್ : ಬಹಳ ಸಂತೋಷ.

ಶ್ರೀ ಕೆ.ಹೆಚ್. ರಂಗನಾಥ್ : ಸಂತೋಷದ ಪ್ರಶ್ನೆ ಅಸಂತೋಷದ ಪ್ರಶ್ನೆ ಅಲ್ಲ ಇದು.

ಶ್ರೀ ಬಿ. ಸೋಮಶೇಖರ್ : ಈ ಸರ್ಕಾರ ಬಹಳ ಸಂವಿಧಾನಾತ್ಮಕವಾಗಿ ಒಳ್ಳೆಯ ಕೆಲಸ ಮಾಡಿದೆ. ಏಕೆಂದರೆ, ನಾನು ಈ ಕ್ರಮವನ್ನು ಅಭಿನಂದಿಸುತ್ತಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್ : ರಾಜ್ಯಾಂಗದ ಪ್ರಕಾರ ನಡೆಯದ ಒಂದು ಇನ್‌ಸ್ಟೆನ್ಸ್ ತೋರಿಸಿ.

ಶ್ರೀ ಬಿ. ಸೋಮಶೇಖರ್ : ಸುಪ್ರೀಂಕೋರ್ಟಿನವರು ಅಂತೂ ಬಹಳ ಕೇಸ್‌ಗಳಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಬಹಳ ವಿಚಾರಗಳಲ್ಲಿ ಸುಪ್ರಿಂಕೋರ್ಟಿನವರು ನಿಮಗೆ ಪ್ಯಾಟ್ ಮಾಡಿದ್ದಾರೆ. ಸಂವಿಧಾನಾತ್ಮಕವಾಗಿ ನಡೆದುಕೊಂಡಿದ್ದೀರಿ. ಅದರಿಂದ ಬಹಳ ಅಭಿನಂದನೆಗಳು. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಮಾನ್ಯ ಸೋಮಶೇಖರ್‌ರವರು ವಿಷಯಕ್ಕೆ ಬನ್ನಿ.

ಶ್ರೀ ಬಿ. ಸೋಮಶೇಖರ್ : ಇದನ್ನು ಜನರಿಗೆ ಬಿಡೋಣ, ಸಂವಿಧಾನವನ್ನು ವಯಲೇಟ್ ಮಾಡಿದಿರಿ ಎಂದು ನಾನು ಹೇಳಿಲ್ಲ, ನಾನು ಹೇಳಿರತಕ್ಕಂಥದ್ದು the people have got a right to know ಏಕೆಂದರೆ ಎರಡು ವರ್ಷಗಳಿಂದ ಒಬ್ಬ ಮಂತ್ರಿಯ ಮೇಲೆ ಆರೋಪದ ಮೇಲೆ ಆರೋಪ ಬರುತ್ತಿದೆ, ಅವರ ಮೇಲೆ ದೋಷಾರೋಪ ಬಂದಿವೆ, ನೀವು ಹೇಳಿಕೊಂಡೇ ಬಂದಿರಿ, ಅವರು ಏನೂಮಾಡಿಲ್ಲ ಅವರೇನೂ ತಪ್ಪಿತಸ್ಥರಲ್ಲ, ಒಂದು ನಿಮಿಷ ಸಾರ್ ತಾವು ಸ್ವಲ್ಪ ಕುಳಿತುಕೊಳ್ಳಿ, ತಾವು ಏಕೆ ಈ ರೀತಿ ಮಾಡುತ್ತೀರಿ? ತಾವು ಹಿರಿಯರು ಏಕೆ ಇಷ್ಟು upset ಆಗುತ್ತೀರಿ?

ಶ್ರೀ ಹೆಚ್. ಕೆ. ರಂಗನಾಥ್ : ಇಲ್ಲಿ ಹಿರಿಯರು ಕಿರಿಯರು ಎನ್ನುವ ಪ್ರಶ್ನೆಯಲ್ಲ, ಆಪಾದನೆ conclusive proof ಅದಕ್ಕೆ ನಾನು ಬೆಳಿಗ್ಗೆ ಹೇಳಿದ್ದು, ಈಗ Fernandes ಅವರದ್ದು conclusive proof ಆಗಿದೆಯೇ Bofors ದ್ದು conclusive proof ಇವತ್ತಿನವರೆಗೂ ಆಗಿದೆಯೇ? ಅದರ ಉಪಯೋಗ ತೆಗೆದುಕೊಂಡು ಕೇಂದ್ರದಲ್ಲಿ ಸರ್ಕಾರ ನೇಮಕ ಮಾಡಿದಿರಿ; ಎಷ್ಟು ದಿವಸ ಇತ್ತು ಅದು? ಏಕೆ ಸುಮ್ಮನೆ ಮಾತನಾಡುವುದು? ಅದರಿಂದ ಏನು ಪ್ರಯೋಜನ ಬರುತ್ತದೆ? Let us try to lay down good precedents.

ಶ್ರೀ ಬಿ. ಸೋಮಶೇಖರ್ : ನಾವು ರಾಜಕಾರಣಿಗಳು ದೇಶ ಆಳುವವರಿಗೆ ನೈತಿಕ ಮೌಲ್ಯಗಳು, ಪ್ರಜಾಪ್ರಭುತ್ವದ ಮೌಲ್ಯಗಳು ಸ್ವಲ್ಪವೂ ಬೇಡವೇ? ಬಹಳ ಸಂತೋಷ. ತಾವು ಇಂಥ ಒಂದು ವಾದ ಮಾಡಿದರೆ, ಬಹಳ ಸಂತೋಷ ಒಪ್ಪಿಕೊಳ್ಳುತ್ತೇನೆ.. ಇದರಲ್ಲಿ ಇನ್ನೊಂದು ಹೇಳಿದ್ದಾರೆ,

(ನಗೂ) ನಮ್ಮ ರಾಜ್ಯ ದಲ್ಲಿ ಇಂಥ ಒಂದು ಇತಿಹಾಸ ಕ್ರಿಯೇಟ್ ಮಾಡಿದ್ದಾರೆ ಅಲ್ಲವೇ? ಹೌದು ಏಕೆಂದರೆ ನಾನು ರೆವಿನ್ಯೂ ಮಿನಿಸ್ಟರ್ ಆಗಿರುವಾಗ ಬಹಳ ಸಲ ನನ್ನನ್ನು ಭೇಟಿ ಮಾಡಿದ್ದರೆ.... ನೀವು ತೋರಿಸಿ ನನ್ನನ್ನು ಎಷ್ಟು ಸಲ ಅವರು ಭೇಟಿ ಮಾಡಿದ್ದಾರೆ, ಎಷ್ಟು ನಕಲಿ ಸ್ಟ್ಯಾಂಪ್ ಪೇಪರ್ ಮಾರಾಟ ಮಾಡಲಿಕ್ಕೆ ಎಷ್ಟು ಸಾರಿ ಲೈಸೆನ್ಸ್ ತೆಗೆದುಕೊಂಡಿದ್ದಾರೆ, ಎಂದು ಹೇಳಿ, ತಾವು ಹೇಳಿದರೆ ಅದಕ್ಕೆ ನಾನು ಉತ್ತರ ಕೊಡುತ್ತೇನೆ. ನಾನು ಮಂತ್ರಿಯಾಗಿರುವಾಗ ಅವರು ಎಷ್ಟು ಸಲ ಭೇಟಿ ಮಾಡಿದ್ದಾರೆ, ಎಷ್ಟು ಲೈಸೆನ್ಸ್ ನಕಲಿ ಸ್ಟ್ಯಾಂಪ್ ಪೇಪರ್‌ಗೆ ತೆಗೆದುಕೊಂಡಿದ್ದಾರೆಂದು ಅವರು ಹೇಳಲಿ. ನಾನು ಅದಕ್ಕೆ ಉತ್ತರಿಸುತ್ತೇನೆ. ಅವರು ಕೋರ್ಟಿನಲ್ಲಿ ಹೇಳಿದ್ದಾರೆ, ನನ್ನ ಜೀವನಕ್ಕೆ ಭಯ ಇದೆ, ಪೊಲೀಸ್ ಥ್ರೆಟ್‌ನಿಂದ ಕಾಲ್ ಬರುತ್ತಿದೆ, ಅನ್ನುವ ಭಯವನ್ನು ವ್ಯಕ್ತ ಮಾಡಿದ್ದಾರೆ. ಅದೇ ಸಂದರ್ಭದಲ್ಲಿ ಒಂದು ಕಡೆ ಇವರೇನು ಹೇಳಿದ್ದಾರೆ, ಬಹಳ ತಡವಾಗಿ ಇವರಿಗೆ ಹೆಚ್.ಐ.ವಿ. ಇನ್‌ಫೆಕ್ಷನ್ ಆಗಿದೆ, ಅಂತ ಇವರ ಲಾಯರ್ ಹೇಳಿರತಕ್ಕಂಥದ್ದು ಇವರು ಎರಡು –ಮೂರುವರ್ಷಗಳ ಹಿಂದೆ ಅರೆಸ್ಟ್ ಮಾಡಿದಾಗ ಇದೇ ಸ್ಟೇಟ್‌ಮೆಂಟ್‌ನ್ನು ಈ ಪೊಲೀಸ್ ಇಲಾಖೆಯವರು ಏಕೆ ಹೇಳಲಿಲ್ಲ? ಹೊಸದಾಗಿ ಇದನ್ನು ಏಕೆ ಹುಡುಕಿದರು? ಇದರ ಹುನ್ನಾರ ಏನು ಇದೆ? ಕರೀಂಲಾಲ್ ತೆಲಗಿ ಕೆಲವು ಅಧಿಕಾರಿಗಳಿಂದ ನನಗೆ ಬೆದರಿಕೆ ಬರುತ್ತಿದೆ, ಪ್ರಾಣಕ್ಕೆ ಭಯ ಇದೆ ಎಂದು ಕೋರ್ಟಿಗೆ ಸ್ಟೇಟ್‌ಮೆಂಟ್ ಕೊಟ್ಟಿರುವುದು ಇದೆ. ಏನು ಭಯ ಇದೆ? ಇವತ್ತು ನನಗೆ ಅನ್ನಿಸುತ್ತದೆ, ಅದು ಒಂದು, ಸಿಬಿಐ ಎನ್‌ಕ್ವಾಯರಿ ಮಾಡುತ್ತೇವೆಂದು ಇಲ್ಲಿ ತೀರ್ಮಾನ ತೆಗೆದುಕೊಳ್ಳುತ್ತೀರಿ, ಅಲ್ಲಿ ಹೋಗಿ ಪಿರಿಯಾಪಟ್ಟಣದಲ್ಲಿ ಅದೇ ಮುಖ್ಯಮಂತ್ರಿಗಳು, ಸಿಬಿಐ ಯ ಮೇಲೆ ನನಗೆ ವಿಶ್ವಾಸ ಇಲ್ಲವೆಂದು ಹೇಳಿದ್ದಾರೆ ಕೇಳಿ ಸಿಬಿಐ ಸಂಸ್ಥೆಯ ಮೇಲೆ ವಿಶ್ವಾಸವಿಲ್ಲ ಎಂದು ಹೇಳಿದ್ದಾರೆ. ಇಲ್ಲಿ ತೀರ್ಮಾನ ತೆಗೆದುಕೊಂಡಿದ್ದರಿ. ಇದರ ಅರ್ಥ ಏನು? ಮತ್ತೆ ತೀರ್ಮಾನ ತೆಗೆದುಕೊಂಡ ಮೇಲೆ ಸುಮಾರು 8–10 ದಿನಗಳ ಕಾಲ ಇನ್ನೂ ಕಮ್ಯುನಿಕೇಷನ್ ಕೊಡದೇ ಇರುವುದಕ್ಕೆ ಇದರ ಉದ್ದೇಶ ಏನು? ನಾವು ಏನು ಅನುಮಾನಪಡಬೇಕು? ಒಂದು ಕಡೆ ಹೆಚ್.ಐ.ವಿ. ಎಂದು ಇವತ್ತು ಹೇಳುತ್ತೀರಿ, ಇನ್ನೊಂದು ಕಡೆ ಅವನು ನನಗೆ ಪ್ರಾಣಭಯ ಇದೆ ಪೊಲೀಸರಿಂದ ಥ್ರೆಟನಿಂಗ್ ಕಾಲ್ ಬರುತ್ತಿದೆ ಎಂದು ಹೇಳುತ್ತಾನೆ. ಇನ್ನೊಂದು ಕಡೆ ನೀವು ಸಿಬಿಐ ಯ ಮೇಲೆ ವಿಶ್ವಾಸವಿಲ್ಲವೆಂದು ಹೇಳುತ್ತೀರಿ, ಮತ್ತೆ ಇನ್ನೊಂದು ಕಡೆ ತಮ್ಮ ಡಿಸಿಷನ್ ಅನ್ನು ಸಿಬಿಐಗೆ ಇನ್ನೂ ಕಳುಹಿಸಿಲ್ಲ. ಈ ಮಧ್ಯೆದಲ್ಲಿ ಏನಾಗುತ್ತದೆ ಎಂದರೆ ಸಿಬಿಐ ಜವಾಬ್ದಾರಿ ತೆಗೆದುಕೊಳ್ಳುವ ಮೊದಲೇ ಕರೀಂಲಾಲ್ ಏನಾಗುತ್ತಾನೋ ಎನ್ನುವ ಭಯ ನಮಗಿದೆ. ಎಲ್ಲಿ ಮುಚ್ಚಿ ಹಾಕಿಬಿಡುತ್ತೀರೋ ಎಲ್ಲಿ ಅವನ ಪ್ರಾಣಕ್ಕೆ ಏನಾಗುತ್ತದೋ? ಯಾರ್‍ಯಾರಿಂದ ಏನಾಗುತ್ತದೋ? ಇವೆಲ್ಲವೂ ಬಹಳ ಸಂದೇಹದ ವಿಚಾರಗಳು. ಇದಕ್ಕೆ ಸರ್ಕಾರದವರು ಯಾವ ರೀತಿ ಸ್ಪಂದಿಸುತ್ತೀರಿ? ಇದೆಲ್ಲವೂ ನನಗೆ ಅನುಮಾನವಾಗಿದೆ. ನಮ್ಮ ಇಡೀ ರಾಜ್ಯಕ್ಕೆ ಅನುಮಾನವಾಗಿದೆ, ನೀವು ನಡೆದುಕೊಂಡಂಥ ರೀತಿ, ಎಲ್ಲಾ ಜನತೆಗೂ ಗೊತ್ತಾಗಿದೆ, ಈ ಒಂದು ವಿಚಾರದಲ್ಲಿ ಜನರು ತಮ್ಮ ಸರ್ಕಾರವನ್ನು ಯಾವತ್ತಿಗೂ ಸಹ ನಂಬುವುದಿಲ್ಲ, ಈಗಾಗಲೇ ವಿಶ್ವಾಸವನ್ನು ಕಳೆದು ಕೊಂಡಿದ್ದೀರಿ, ಚುನಾವಣೆಗೆ ಬಂದಾಗ ಅದೇನು ತೋರಿಸುತ್ತಾರೋ ತೋರಿಸಲಿ. ಆ ಚುನಾವಣೆ captive voters ಇಟ್ಟುಕೊಂಡು ಆ ಚುನಾವಣೆಗಳಿಗೆ ಎಷ್ಟೆಷ್ಟು ಖರ್ಚು ಆಗಿದೆ ಗೊತ್ತಲ್ಲವೇ?

ಅಧ್ಯಕ್ಷರು : ಇಲ್ಲಿ ರಾಜಕೀಯ ಬೇಡ ದಯವಿಟ್ಟು.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ರಾಜಕೀಯ ಇಲ್ಲದೇ ಈ ಅಸೆಂಬ್ಲಿಯಲ್ಲಿ ಚರ್ಚೆ ಹೇಗೆ ಆಗುತ್ತದೆ ರಾಜಕೀಯ ಇದ್ದರೆನೇ ಎಲ್ಲಾ ಆಗುವುದು.

ಅಧ್ಯಕ್ಷರು : ಆಚೆ ರಾಜಕೀಯ ಮಾಡಿಕೊಂಡು ಇಲ್ಲಿಗೆ ಬರುತ್ತೀರಷ್ಟೇ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಇಲ್ಲಿನೂ ರಾಜಕೀಯನೇ ಮಾತನಾಡಬೇಕು, ಅವರು ರೂಲಿಂಗ್ ಪಾರ್ಟಿಯವರು ಏನೇನು ತೊಂದರೆ ಮಾಡಿದ್ದಾರೆ ಅದನ್ನು ಇಲ್ಲಿ ಹೇಳುವುದು, ಇನ್ನೇನು ಇದೆ? ಇದೇ ರಾಜಕೀಯ...

ಅಧ್ಯಕ್ಷರು : ಸ್ವಾಮಿ, ನಾನು ಹೇಳುತ್ತಿರುವುದು ಏನು ಎಂದರೆ, ಸಬ್ಜೆಕ್ಟ್ ಮ್ಯಾಟರ್‌ಗೆ ಬನ್ನಿ ಚುನಾವಣೆ ವಿಷಯ ಮಾತನಾಡಬೇಡಿ ಎಂದೆ.

ಶ್ರೀ ಆರಗ ಜ್ಞಾನೇಂದ್ರ : ಇಲ್ಲಿ ಒಂದೇ ಒಂದು ಸ್ಥಾನ ಎಂದರೆ, ರಾಜಕೀಯ ಇಲ್ಲದಿರುವುದು ತಮ್ಮ ಸ್ಥಾನ. ಮತ್ತೆಲ್ಲಾ ರಾಜಕೀಯವೇ.

ಶ್ರೀ ಬಿ. ಸೋಮಶೇಖರ್ : ಈಗ ನನ್ನ ಆಗ್ರಹ ಏನೆಂದರೆ, ಈಗಾಗಲೇ ಕರೀಂಲಾಲ್ ಅವನು ಏನು ಹೇಳಿಕೆ ಕೊಟ್ಟಿದ್ದಾನೆ, ಅದಕ್ಕೆ ನಿಮ್ಮ ಪುಷ್ಠಿ ಏನು ಇದೆ ಎನ್ನುವ ರೀತಿಯಲ್ಲಿ ನಡೆದುಕೊಂಡಿದ್ದೀರಿ. ಮತ್ತೆ ಅವನು ನಾರ್ಕೋ ಅನಾಲೀಸಸ್ ಟೆಸ್ಟ್‌ನಲ್ಲಿ ಏನೇನು ಬಹಿರಂಗ ಮಾಡಿದ್ದಾನೆ, ಅದನ್ನು ನೀವು ಬಹಿರಂಗ ಮಾಡಬೇಕು. ಏಕೆಂದರೆ ನೀವು ಟ್ರಾನ್ಸ್‌ಫರೆನ್ಸಿ ಆ್ಯಕ್ಟ್ ತಂದಿದ್ದೀರಿ, ಮಾಹಿತಿ ಸಿಂಧೂ ಮತ್ತೆ ಸಾರ್ವಜನಿಕರೆಲ್ಲರಿಗೂ ಮುಕ್ತವಾದ ಪಾರದರ್ಶಕ ಗೌರ್ನಮೆಂಟ್ ಎಂದು ಹೇಳುತ್ತಿದ್ದೀರಿ, ಅದನ್ನು ಬಹಿರಂಗ ಮಾಡಿ, ಯಾರು ಇದ್ದಾರೋ, ನಾವು ಇದ್ದೇವೆಯೋ, ಪತ್ರಿಕೆಯವರು ಇದ್ದಾರೋ ಮಂತ್ರಿಗಳು ಇದ್ದಾರೋ, ಇನ್ನು ಯಾರ‍್ಯಾರು ಇದ್ದಾರೋ, ಪೊಲೀಸ್ ಅಧಿಕಾರಿಗಳು ಇದ್ದಾರೊ? ಯಾರಾದರೂ ಬರಲಿ, ಅದರ ಮೇಲೆ ವಿಚಾರಣೆ ನಡೆಯಲಿ. 1999ರಲ್ಲಿ ಬದ್ರುದ್ದೀನ್ ಜಮಾದಿ ಉಪ್ಪಾರ ಪೇಟೆ ಪೊಲೀಸ್ ಠಾಣೆಯಲ್ಲಿ ಹೇಳಿಕೆ ಕೊಟ್ಟಿರುವ ಪ್ರಕಾರ, ಒಂದು ದಿನಕ್ಕೆ 40 ಸಾವಿರದಿಂದ 4 ಲಕ್ಷ ರೂಪಾಯಿವರೆಗೆ ಆದಾಯ ಆಗುತ್ತಿತ್ತು ಎಂದು ಹೇಳಿದರಲ್ಲಾ, ಎಷ್ಟು ಕೋಟಿ ರೂಪಾಯಿ ಇವತ್ತು ಸಂಗ್ರಹ ಆಗಿದೆ? ಬ್ಯಾಂಕ್ ಅಕೌಂಟನ್ನು ಇವತ್ತು ನೀವು ಸೀಜ್ ಮಾಡಿದ್ದಿರಾ? ಇದರಲ್ಲಿ ಯಾರ‍್ಯಾರು ಯಾವ್ಯಾವ ಕೇಸ್‌ನಲ್ಲಿ ಏನೇನು ಮಾಡಿದಿರಿ, ಅದರ ಬಗ್ಗೆ ಕ್ರಮ ಏನು ತೆಗೆದುಕೊಂಡಿದ್ದೀರಿ ಎಂಬುದನ್ನು ಹೇಳಬೇಕು ಕೆಲವು ಮಂತ್ರಿಗಳು ಇದ್ದಾರೆ ಎನ್ನುವ ಆರೋಪ ಇದೆ, ಪೊಲೀಸ್ ಅಧಿಕಾರಿಗಳು ಇದ್ದಾರೆ ಎನ್ನುವ ಆರೋಪ ಇದೆ, ಅದನ್ನೆಲ್ಲಾ ಬಹಿರಂಗಪಡಿಸಬೇಕು ಒಟ್ಟಿನಲ್ಲಿ ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ, ಅವರು ನಾನು ಒಬ್ಬನೇ ಅಲ್ಲ ಎಂದು ಹೇಳಿದ್ದಾರೆ. ಒಬ್ಬ ಮಂತ್ರಿ ರಾಜೀನಾಮೆ ಕೊಟ್ಟ ತಕ್ಷಣ ಈ ಒಂದು ವಿವಾದದಲ್ಲಿ ಈ ಒಂದು ಆರೋಪ ಸಾಬೀತಾಗಿದೆ ಎಂಬುದು ನನ್ನ ಒಂದು ಅನಿಸಿಕೆ. ಇಲ್ಲವೆಂದರೆ ಅವರು ರಾಜೀನಾಮೆ ಕೊಡುವ ಪ್ರಮೇಯ ಇರಲಿಲ್ಲ. ಎರಡು ವರ್ಷಗಳಿಂದ ಇಲ್ಲದೇ ಇರುವ ರಾಜೀನಾಮೆಯನ್ನು ಇವತ್ತು ಕೊಟ್ಟಿದ್ದರಿಂದ ಇದು ಸಾಬೀತಾಗಿದೆ, ನೈತಿಕವಾಗಿ ಈ ಸರ್ಕಾರ, ಅವರೊಬ್ಬರು ಅಲ್ಲ, ನೀವು ಎಲ್ಲರೂ ರಾಜೀನಾಮೆ ಕೊಡಬೇಕು. ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಏನಾದರೂ ಗೌರವ ಇದ್ದರೆ, ಅದನ್ನು ನೀವು ಕೊಟ್ಟರೆ ಬಹುಶಃ ಗೌರವ ಉಳಿಯುತ್ತದೆ. ಏಕೆಂದರೆ ನಾನು ಹೇಳಿದೆ ಅಲ್ಲವೆ? ಸರ್ಕಾರ ಅಂದರೆ ಅವರೇ ತಾನೆ? ನಮ್ಮ ಮುಖ್ಯಮಂತ್ರಿಗಳಿಗೆ ಕಾನ್‌ಸ್ಟಿಟ್ಯೂಶನ್ ಏನು ಎಂದು ಗೊತ್ತಲ್ಲವೆ? ಏಕೆಂದರೆ ಅವರು ಕಾನ್‌ಸ್ಟಿಟ್ಯೂಶನ್ ಎಕ್ಸ್‌ಪರ್ಟ್

ಅಲ್ಲವೆ? ಮುಖ್ಯಮಂತ್ರಿಗಳ ಪ್ರಿರೋಗೆಟಿವ್ ತಾನೇ? ಸರ್ಕಾರ ಅಂದರೆ ಯಾರೆಂದು ತಿಳಿದುಕೊಳ್ಳಲಿ. ರಾಜೀನಾಮೆ ಕೊಟ್ಟರೆ ಸ್ವಲ್ಪ ಮರ್ಯಾದೆಯಿಂದ ಫೇಸ್ ಮಾಡಬಹುದು. ಇಷ್ಟನ್ನು ನಾವು ಡಿಮ್ಯಾಂಡ್‌ನ್ನು ಇಡುತ್ತೇವೆ, ಇಲ್ಲವೆಂದರೆ, ಇವತ್ತು ನಮ್ಮ ಹೋರಾಟ ಇಷ್ಟೇ ಅಲ್ಲ ಇದೆಲ್ಲಾ ಬಯಲಿಗೆ ಎಳೆಯುತ್ತೇವೆ, ಏನೇನು ಯಾವ್ಯಾವ ರೀತಿ ಜನಗಳಿಗೆ ನೀವು ಮೋಸ ಮಾಡಿದಿರಿ, ನಕಲಿ ಛಾಪಾ ಕಾಗದ ಮರಾಟಕ್ಕೆ ಯಾವ ರೀತಿ ಕುಮ್ಮಕ್ಕು ಕೊಟ್ಟಿದ್ದೀರಿ, ಹೊಸ ವ್ಯವಸ್ಥೆ ಇದ್ದರೂ, ಅದು ಜಾರಿಗೆ ಬಂದಿದ್ದರೂ, ನೀವು ಅದನ್ನು ಮುಚ್ಚಿಟ್ಟು ಈಗೆಲ್ಲಾ ಲೂಟಿ ಮಾಡಿ ನಂತರ ಕೋಟೆ ಬಾಗಿಲು ಹಾಕಿದ ಹಾಗೆ, ಹೀಗೆ ಮಾಡಿ ನಂತರ ನೀವೇ ಕ್ರೆಡಿಟ್ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಲ್ಲಾ This attitude of your government cannot be forgiven. ಇದರ ಬಗ್ಗೆನೂ ಸಾರ್ವಜನಿಕರಿಗೆ ಹೇಳಬೇಕಾಗುತ್ತದೆ, ಈ ಎಲ್ಲಾ ದೃಷ್ಟಿಯಿಂದ ರಾಜೀನಾಮೆ ಕೊಡುವುದು ಬಹಳ ಒಳ್ಳೆಯದೆಂದು ನಾನು ಆಗ್ರಹವನ್ನು ಮಾಡಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಈ ನಕಲಿ ಛಾಪಾ ಕಾಗದದ ಹಗರಣ ಇಡೀ ದೇಶದ ಉದ್ದಗಲಕ್ಕೆ ಇವತ್ತು ಹರಡಿಕೊಂಡಿರುತಕ್ಕಂಥದ್ದು ನಮೆಗೆಲ್ಲರಿಗೂ ಗೊತ್ತಿರತಕ್ಕಂಥ ಒಂದು ಸತ್ಯ ಸಂಗತಿ. ಈ ಹಗರಣದ ಬಗ್ಗೆ ವಿವಿಧ ರಾಜ್ಯ ಸರ್ಕಾರಗಳು, ಕೇಂದ್ರ ಸರ್ಕಾರಗಳು, ಈ ಒಂದು ಮೆನೇಸ್ ಅನ್ನು ನಿಗ್ರಹ ಮಾಡಲಿಕ್ಕೆ ಕೈಗೊಂಡಿರತಕ್ಕಂಥ ಕ್ರಮಗಳೇನು? ವಿವಿಧ ಸರ್ಕಾರಗಳು ಯಾವ ರೀತಿ ಪ್ರಾಮಾಣಿಕವಾಗಿ ಕೆಲಸ ಮಾಡಿವೆ ಎನ್ನುವ ವಿಚಾರವನ್ನು ನಾವು ಇವತ್ತು ನಿಷ್ಪಕ್ಷವಾಗಿ ಚರ್ಚೆ ಮಾಡಬೇಕೆನ್ನುವುದು ನಮ್ಮ ಮುಂದಿರುವ ಪ್ರಶ್ನೆ. ಈ ಹಗರಣವನ್ನು ನಿಗ್ರಹ ಮಾಡಲಿಕ್ಕೆ ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳೇನು? ಈ ಹಗರಣವನ್ನು ನಿಗ್ರಹ ಮಾಡಲಿಕ್ಕೆ ಕೇಂದ್ರ ಸರ್ಕಾರದ ಜವಾಬ್ದಾರಿ ಇಲ್ಲವೆ? ಜವಾಬ್ದಾರಿ ಇದ್ದಲ್ಲಿ ಅವರು ಅದನ್ನು ಎಷ್ಟರಮಟ್ಟಿಗೆ ನಿರ್ವಹಿಸಿದ್ದಾರೆ? ರಾಜ್ಯ ಸರ್ಕಾರದವರು ಇದನ್ನು ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿ ನಿರ್ವಹಿಸಿದ್ದಾರೆ, ಇವೆಲ್ಲವನ್ನೂ ಕೂಡ ನಾವು ನಿಷ್ಪಕ್ಷಪಾತವಾಗಿ ಚರ್ಚೆ ಮಾಡತಕ್ಕಂಥದ್ದು ಅತ್ಯವಶ್ಯಕವಿದೆ ಹಾಗೂ ಇದು ನಮ್ಮ ಜವಾಬ್ದಾರಿ ಕೂಡ. ಈ ಹಗರಣ ಯಾವಾಗ ಪ್ರಾರಂಭವಾಯಿತು? ನಾನು ಬಹಳ ಸ್ಪಷ್ಟವಾದ ಪ್ರಶ್ನೆಯನ್ನು ಇವತ್ತು ನಮ್ಮ ಸ್ನೇಹಿತರ ಮುಂದೆ ಇಡಲಿಕ್ಕೆ ಇಷ್ಟಪಡುತ್ತೇನೆ. ಈ ಹಗರಣ ಪ್ರಾರಂಭವಾಗಿದ್ದು ಯಾವಾಗ? 1999ನೇ ಇಸವಿಗಿಂತ ಮುಂಚೆಯೇ ಈ ಹಗರಣ ಇತ್ತು ಎನ್ನತಕ್ಕಂಥದ್ದನ್ನು ನಮ್ಮ ಸರ್ಕಾರ ಈಗ ತನಿಖೆಯನ್ನು ಪ್ರಾರಂಭ ಮಾಡಿದ ಮೇಲೆ ಗೊತ್ತಾಗಿದ್ದು, ಈ ಸತ್ಯಾಂಶವನ್ನು ತಾವೆಲ್ಲರೂ ಒಪ್ಪಿಕೊಳ್ಳುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ನೀವು ಹಿಂದೆ ಇದ್ದಂಥ ಸಂದರ್ಭದಲ್ಲಿ ಏನು ಮಾಡಿದ್ದೀರಿ ಮತ್ತು ಏಕೆ ಮಾಡಲಿಲ್ಲ ಎನ್ನತಕ್ಕಂಥ ಪ್ರಶ್ನೆಗೆ ಆನಂತರ ಬರುತ್ತೇನೆ. ಆದರೆ, 1999ರಲ್ಲಿ ಸನ್ಮಾನ್ಯ ಕೃಷ್ಣರವರ ಸರ್ಕಾರ ಈ ರಾಜ್ಯದಲ್ಲಿ

(ಈ ಹಂತದಲ್ಲಿ ಶ್ರೀ ಬಿ.ಬಿ. ಶಿವಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧಿಕಾರಕ್ಕೆ ಬಂದ ಮೇಲೆ ಈ ಹಗರಣ ಬಯಲಿಗೆ ಬಂದಿದ್ದಾದರೂ ಹೇಗೆ ಮತ್ತೆ ಈ ಹಗರಣದ ಬಗ್ಗೆ ಈ ಸರ್ಕಾರ ತೆಗೆದುಕೊಂಡಿರತಕ್ಕಂಥ ಪ್ರಾಮಾಣಿಕ ಪ್ರಯತ್ನಗಳಾದರೂ ಏನು ಎನ್ನತಕ್ಕಂಥದ್ದರಗಳ ಬಗ್ಗೆ ತಿಳಿದುಕೊಳ್ಳತಕ್ಕಂಥದ್ದು ನಮ್ಮ ಹಕ್ಕು. ಇದರ ಬಗ್ಗೆ ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರ ಹೇಳತಕ್ಕಂಥ ಮಾಹಿತಿಗಳನ್ನು ಈ ಸದನದ ಸದಸ್ಯರಾಗಿ ಮತ್ತು ಈ ರಾಷ್ಟ್ರದ ಪ್ರಜೆಗಳಾಗಿ ಮಾಹಿತಿಗಳನ್ನು ಪಡೆಯತಕ್ಕಂಥ ಹಕ್ಕಿದೆ. ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಮತ್ತು ರಾಜ್ಯದ ಆರ್ಥಿಕ

ವ್ಯವಸ್ಥೆಯನ್ನು ಬುಡಮೇಲು ಮಾಡಿದಂಥ ಈ ಶಕ್ತಿಯುಕ್ತವಾದ ಹಗರಣ ಪ್ರಾರಂಭವಾಗಿದ್ದು ಯಾವಾಗ? ಇದರ ಬಗ್ಗೆ ಇಷ್ಟೊಂದು ದಾಖಲೆಗಳನ್ನು ಮತ್ತು ಮಾಹಿತಿಗಳನ್ನು ತಾವು ಸಂಗ್ರಹ ಮಾಡಿ ಮಾತನಾಡಿದ್ದೀರಿ. ಆದರೆ, ಇದರ ಬಗ್ಗೆ ಸ್ಪಷ್ಟವಾದ ಚಿತ್ರಣವನ್ನು ಕೊಡುತ್ತೀರೆಂದು ನಾನು ಬೆಳಿಗ್ಗೆಯಿಂದ ಇಲ್ಲಿ ಕಾಯುತ್ತಾ ಕುಳಿತುಕೊಂಡಿದ್ದೇನೆ. ಆದರೆ, ಇದರ ಬಗ್ಗೆ ನಿಮ್ಮ ಪ್ರಾಮಾಣಿಕ ಪ್ರಯತ್ನ ಆಗಲಿಲ್ಲ. ಈ ರಾಷ್ಟ್ರದ ಆರ್ಥಿಕ ವ್ಯವಸ್ಥೆ ಮೇಲೆ ಆಗಿರತಕ್ಕಂಥ ದುಷ್ಪರಿಣಾಮಗಳ ಬಗ್ಗೆ ನಿಮಗೆ ನಿಜವಾಗಿಯೂ ಕಾಳಜಿ ಇದ್ದಿದ್ದರೆ ಈ ಹಗರಣ ಪ್ರಾರಂಭವಾಗಿದ್ದು ಯಾವಾಗ ಎನ್ನತಕ್ಕಂಥ ಸ್ಪಷ್ಟವಾದ ಚಿತ್ರಣವನ್ನು ಕೊಡಬೇಕಾಗಿತ್ತು. ಇದರ ಬಗ್ಗೆ ತಮ್ಮಿಂದ ಉತ್ತರ ಬರಲಿಲ್ಲ. 1998ರಲ್ಲಿ ಇಂಥ ಒಂದು ಹಗರಣ ನಮ್ಮ ಗಮನಕ್ಕೆ ಬಂತು ಎಂದು ಅಂದಿನ ಕಂದಾಯ ಸಚಿವರು ಆಗಿದ್ದಂಥ ಮತ್ತು ನಮ್ಮ ಮುಂದೆ ಇರತಕ್ಕಂಥ ಮಾನ್ಯ ವಿರೋಧ ಪಕ್ಷದ ಮುಖಂಡರು ಆಗಿರತಕ್ಕಂಥ ಶ್ರೀ ಸೋಮಶೇಖರ್‌ರವರು ಇಲ್ಲಿ ಹೇಳಿಕೆಯನ್ನು ಈಗಾಗಲೇ ಕೊಟ್ಟಿದ್ದಾರೆ. 1998ರಲ್ಲಿ ತಾವು ಸಚಿವರಾಗಿದ್ದಂಥ ಇಂಥ ಒಂದು ಪ್ರಕರಣ ಕೊಡಗು ಅಥವಾ ಇನ್ನೊಂದು ಕಡೆ ತಮ್ಮ ಗಮನಕ್ಕೆ ಬಂತೆಂದು ತಾವು ಹೇಳಿದ್ದೀರಿ. ನಕಲಿ ಛಾಪಾ ಕಾಗದದ ಒಂದು ಸಣ್ಣ ಪ್ರಕರಣ ತಮ್ಮ ಗಮನಕ್ಕೆ ಬಂದ ವಿಚಾರವನ್ನು ತಾವು ಸದನದ ಮುಂದಿಟ್ಟಿದ್ದೀರಿ. 1998ರಲ್ಲಿ ತಮ್ಮ ಸರ್ಕಾರ ಇದ್ದಾಗ ಏನೇನು ಮಾಡಿದ್ದೀರಿ ಮತ್ತು ಈ ಹಗರಣವನ್ನು ಬಯಲಿಗೆ ಎಳೆಯುವುದಕ್ಕೆ ನೀವು ಮಾಡಿದಂಥ ಪ್ರಾಮಾಣಿಕ ಪ್ರಯತ್ನ ಏನು? ಮತ್ತೆ ಈ ಹಗರಣವನ್ನು ಯಾವ ರೀತಿಯಾಗಿ ನಿಗ್ರಹಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ ಎನ್ನತಕ್ಕಂಥದರ ಬಗ್ಗೆ ನಾನು ಪ್ರಶ್ನೆ ಕೇಳುವುದಕ್ಕೆ ಹೋಗುವುದಿಲ್ಲ. It is not my concern ಇದಕ್ಕೆ ಸ್ಪಷ್ಟವಾದ ಉತ್ತರವನ್ನು ತಾವು ಕೊಡುತ್ತೀರಿ ಎಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ತಾವು ಉತ್ತರ ಕೊಡಲಿಲ್ಲ. 1998ರಲ್ಲಿ ಈ ಹಗರಣ ನಿಮ್ಮ ಗಮನಕ್ಕೆ ಬಂದಿದೆ. ಬಹುಶಃ ಅದರ ಹಿಂದಿನಿಂದಲೂ ಈ ಹಗರಣ ನಡೆದಿರಬಹುದೆಂದು ನಾನು ಭಾವನೆ ಮಾಡುತ್ತೇನೆ. ಏಕೆಂದರೆ, ಇಷ್ಟೊಂದು ರಾಷ್ಟ್ರವ್ಯಾಪ್ತಿಯಾಗಿರತಕ್ಕಂಥ ಈ ಹಗರಣ...

ಶ್ರೀ ಬಿ. ಸೋಮಶೇಖರ್ : ಮಾನ್ಯ ಮುದ್ದಹನುಮೇಗೌಡರೆ, ಒಂದು ನಿಮಿಷ ನಾನು ಮಾತನಾಡುತ್ತೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ತಾವು ಮಧ್ಯ ಪ್ರವೇಶ ಮಾಡಿದರೆ ನಾನು ಮಾತನಾಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಆ ಸಂದರ್ಭದಲ್ಲಿ ಕರೀಂಲಾಲ್‌ನ ಪ್ರಕರಣ ಬಂದಿರಲಿಲ್ಲ. ಬೇರೆ ಯಾವುದೋ ಒಂದು ಸಣ್ಣ ಪ್ರಮಾಣದ ಪ್ರಕರಣ ನಮ್ಮ ಗಮನಕ್ಕೆ ಬಂದ ತಕ್ಷಣವೇ ಅದರ ಬಗ್ಗೆ ಸಿ.ಓ.ಡಿ. ಯಿಂದ ತನಿಖೆ ಮಾಡಿಸಿ ಸಂಬಂಧಪಟ್ಟವರ ಮೇಲೆ ಚಾರ್ಜ್ ಶೀಟ್ ಫೈಲ್ ಮಾಡಬೇಕೆಂದು ತೀರ್ಮಾನ ಮಾಡಿ ಪರ್ಯಾಯ ವ್ಯವಸ್ಥೆಗೆ ತಕ್ಷಣವೇ ಅಮೆಂಡ್‌ಮೆಂಟ್ ತಂದೆವು. ಇದನ್ನು ನಿಲ್ಲಿಸಬೇಕೆಂದು ಈ ತೀರ್ಮಾನ ತೆಗೆದುಕೊಂಡೆವು.

ಶ್ರೀ ಕಾಗೋಡು ತಿಮ್ಮಪ್ಪ : ಆ ಸಂದರ್ಭದಲ್ಲಿ ಸಂಬಂಧಪಟ್ಟವರನ್ನು ಏಕೆ ಹಿಡಿಯಲಿಲ್ಲ.

ಶ್ರೀ ಬಿ. ಸೋಮಶೇಖರ್ : ಇದರ ಬಗ್ಗೆ ಸಿ.ಓ.ಡಿ. ರವರು ತನಿಖೆ ಮಾಡಿ ನೀಡಿದಂಥ ವರದಿಯನ್ನು ಸರ್ಕಾರ ಮುಚ್ಚಿಟ್ಟಿದೆ. ಇದನ್ನು ನೀವೇ ಹೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ : ನೀವೇಕೆ ಹಿಡಿಯಲಿಲ್ಲವೆಂದು ಕೇಳುತ್ತಿದ್ದೇನೆ. ಆಗ ನೀವೇನು ಮಾಡುತ್ತಿದ್ದೀರಿ?

ಶ್ರೀ ಎಸ್. ಸಂಪಂಗಿ : ಆ ಸಂದರ್ಭದಲ್ಲಿ ನೀವೇಕೆ ಸಿ.ಬಿ.ಐ. ಗೆ ಕೊಡಲಿಲ್ಲ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಛೇರ್ಮನ್‌ರವರೆ, ನಕಲಿ ಛಾಪಾ ಕಾಗದದ ಹಗರಣದಲ್ಲಿ ಕರೀಂಲಾಲ ಒಬ್ಬ ಪ್ರಮುಖ ಆರೋಪಿ. ಆದರೆ ಕರೀಂಲಾಲ್ ಒಬ್ಬನಿಂದ ಈ ದೇಶದ ಉದ್ದಗಲಕ್ಕೂ ಈ ಹಗರಣ ನಡೆದಿಲ್ಲ. ಇದು ನಮಗೂ ಮತ್ತು ನಿಮಗೂ ಕೂಡ ಗೊತ್ತಿದೆ. ಕರೀಂಲಾಲನ ಜೊತೆಯಲ್ಲಿ ನೂರಾರು ಜನರು ಸಹಚರರು ಇದ್ದಾರೆ ಎನ್ನತಕ್ಕಂಥದ್ದು ಸತ್ಯ. Karim Lala is a Kingpin in this scam. 1998 ರಲ್ಲಿ ಕರೀಂಲಾಲ್ ಅಥವಾ ಆತನ ಅಣ್ಣ–ತಮ್ಮ ಅಥವಾ ಇನ್ನೊಬ್ಬ ಮಾಡಿದಂಥ ಹಗರಣ ನಿಮ್ಮ ಗಮನಕ್ಕೆ ಬಂತು. ನಮ್ಮ ರಾಜ್ಯದಲ್ಲಿ ಚಾಲ್ತಿಯಲ್ಲಿರತಕ್ಕಂಥ ಛಾಪಾ ಕಾಗದವನ್ನು ನಕಲು ಮಾಡಿ ಅದರ ಉಪಯೋಗವಾಗುತ್ತಿರುವುದರಿಂದ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರುತ್ತಿದೆ ಎನ್ನತಕ್ಕಂಥದ್ದರ ಬಗ್ಗೆ ನಿಮ್ಮ ಸರ್ಕಾರ ಆಗ ಮಾಡಿದಂಥ ಪ್ರಾಮಾಣಿಕ ಪ್ರಯತ್ನ ಏನು? ಆ ಸಂದರ್ಭದಲ್ಲಿ ನಾವೂ ಕೂಡ ಈ ಸದನದ ಸದಸ್ಯರಾಗಿದ್ದೆವು. ಆದರೆ, ನೀವು ಸರ್ಕಾರ ಬಿಡುವವರೆಗೂ ಕೂಡ ಇದರ ಬಗ್ಗೆ ನಮಗೂ ಕೂಡ ಮಾಹಿತಿ ಕೊಡಲಿಲ್ಲ. ಇದರ ಬಗ್ಗೆ ನೀವು ಪ್ರಯತ್ನ ಮಾಡಲಿಲ್ಲ. ನಿಮ್ಮಲ್ಲಿ ನಿಜವಾದ ಪ್ರಾಮಾಣಿಕತನ ಇದ್ದಿದ್ದರೆ, ಈ ಹಗರಣದ ಬಗ್ಗೆ ತನಿಖೆ ಮಾಡಿಸಿ ಸತ್ಯಾಸತ್ಯತೆಗಳನ್ನು ತಿಳಿದುಕೊಳ್ಳತಕ್ಕಂಥ ಕಾಳಜಿ ಇದ್ದಿದ್ದರೆ ಇದರ ಬಗ್ಗೆ ಕೂಲಂಕಷವಾಗಿ ವಿಚಾರಣೆ ಮಾಡಿಸಬೇಕಾಗಿತ್ತು. ಆದರೆ ತಾವು ಇದನ್ನು ಮಾಡಲಿಲ್ಲ. ಇದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಛೇರ್ಮನ್‌ರವರೇ ನನ್ನ ಪ್ರಶ್ನೆ ಬಹಳ ಸ್ಪಷ್ಟವಾಗಿದೆ. ಅದೇನೆಂದರೆ, ಈ ಹಗರಣ ಪ್ರಾರಂಭವಾಗಿದ್ದು ಯಾವಾಗ ಎಂಬುದರ ಬಗ್ಗೆ ನಮ್ಮ ವಿರೋಧಪಕ್ಷದ ನಾಯಕರಲ್ಲಿ ಸ್ಪಷ್ಟವಾದ ಉತ್ತರ ಇಲ್ಲದೇ ಇರುವುದರಿಂದ ಇದರ ಬಗ್ಗೆ ಅವರ ಹತ್ತಿರ ಸರಿಯಾದಂಥ ಮಾಹಿತಿ ಇಲ್ಲ ಎನ್ನತಕ್ಕಂಥ ಸತ್ಯವನ್ನು ನಾವೆಲ್ಲರೂ ಕೂಡ ಒಪ್ಪಿಕೊಂಡು ಒಂದು ಪ್ರಶ್ನೆಯನ್ನು ನಾನು ಅವರಿಗೆ ಕೇಳುತ್ತೇನೆ. The undisputed truth is that Karim Lala is a kingpin in this scam. He is a kingpin in this scam. I think we will accept that. ಕರೀಂಲಾಲನ್ನು ಹೊರತುಪಡಿಸಿ ಇನ್ನೊಬ್ಬ ದೊಡ್ಡ ಖದೀಮ ಇದರಲ್ಲಿ ಇಲ್ಲ. ಇದರಲ್ಲಿ ಕರೀಂಲಾಲನೆ ದೊಡ್ಡ ಖದೀಮ. ಈತನನ್ನು ಯಾರು ಅರೆಸ್ಟ್ ಮಾಡಿದ್ದು? ಏಕೆಂದರೆ, ನಿಮ್ಮ ಸರ್ಕಾರ ಇದ್ದಾಗ ಕರೀಂಲಾಲ ಬದುಕಿರಲಿಲ್ಲವೆ ಅಥವಾ ಕರೀಂಲಾಲ ಬದುಕಿದ್ದು ಕೇಂದ್ರ ಸರ್ಕಾರಕ್ಕೆ ಗೊತ್ತಿರಲಿಲ್ಲವೆ? ನಿಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಈ ರಾಜ್ಯದಲ್ಲಿ ರಾಷ್ಟ್ರದಲ್ಲಿ ಈ ರೀತಿಯಾದ ಹಗರಣವನ್ನು ಮಾಡಲಿಲ್ಲವೆ? ಇದು ನಿಮಗೆ ಏಕೆ ಗೊತ್ತಾಗಲಿಲ್ಲ? ನೀವ್ಯಾಕೆ ಆತನನ್ನು ಹಿಡಿಯಲಿಲ್ಲ? Why you miserably failed to arrest him? Why you miserably failed to take him to custody ನೀವು ಇಂಥ ಒಬ್ಬ ದುಷ್ಟನನ್ನು ಕಂಡು ಹಿಡಿಯುವುದಕ್ಕೂ ನಿಮ್ಮ ಕೈಯಲ್ಲಿ ಆಗಲಿಲ್ಲ. ಆತನನ್ನು ಹಿಡಿಯುವುದು ಹೋಗಲಿ, ಇಂಥ ಒಬ್ಬ ದುಷ್ಟ ಈ ಒಂದು ಹಗರಣದ ಹಿಂದೆ ಇದ್ದಾನೆ ಎನ್ನತಕ್ಕಂಥ ವಿಚಾರವನ್ನು ಕಂಡುಹಿಡಿಯುವುದಕ್ಕೂ ನಿಮ್ಮ ಕೈಯಿಂದ ಆಗಲಿಲ್ಲ. ಇದು ರಾಷ್ಟ್ರ ವ್ಯಾಪ್ತಿ ವಿಚಾರಣೆಯಾಗಿರುವುದರಿಂದ ಇದರ ಬಗ್ಗೆ ಕೇಂದ್ರ ಸರ್ಕಾರದ ಜವಾಬ್ದಾರಿ ಕೂಡ ಇಲ್ಲವೆ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರವರೆ, ನನ್ನ ಮೇಲೆ....

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ತಾವು ದಯವಿಟ್ಟು ಸ್ವಲ್ಪ ಸುಮ್ಮನಿರಿ ಆನಂತರ ತಾವು ಕೂಡ ಮಾತನಾಡಿ.

(ಗೊಂದಲ)

ಶ್ರೀ ಎ. ರಾಮದಾಸ್ : ಕೇಂದ್ರ ಸರ್ಕಾರದ ಜವಾಬ್ದಾರಿ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡುತ್ತಿದ್ದಾರೆ. ಇದರ ಬಗ್ಗೆ ಉತ್ತರ ಕೊಡುವವರು ಇಲ್ಲಿ ಯಾರಿದ್ದಾರೆ?

(ಗೊಂದಲ)

ಛೇರ್ಮನ್ : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಇದರ ಬಗ್ಗೆ ನಾನು ಹೇಳುತ್ತೇನೆ.

ಶ್ರೀ ಸಿ. ಸೋಮಶೇಖರ್ : ಏಕೆಂದರೆ, ಅವರು ನನ್ನ ಮೇಲೆ....

ಛೇರ್ಮನ್ : ನಿಮ್ಮ ಮೇಲೆ ಮಾತನಾಡಿರತಕ್ಕಂಥದ್ದರ ಬಗ್ಗೆಯೇ ನಾನು ಹೇಳುತ್ತೇನೆ. ನಾನು ಹೇಳಿದ ಮೇಲೆ ತಾವು ಮಾತನಾಡಿ. ನಮ್ಮ ಪ್ರೊಸೀಜರ್ ಪ್ರಕಾರ ಒಬ್ಬರು ಮಾತನಾಡುತ್ತಿದ್ದಾಗ ಅವರು ಈಲ್ಡ್ ಆದಾಗ ಮಾತ್ರ ನಾವು ಮಾತನಾಡಬೇಕು. ಆದ್ದರಿಂದ ಮೊದಲು ತಾವು ಅವರನ್ನು ಕೇಳಿ. ಅವರು ಈಲ್ಡ್ ಆದ ನಂತರ ತಾವು ಮಾತನಾಡಿ. ಎಲ್ಲರೂ ಒಂದೇ ಸಾರಿ ಎದ್ದು ನಿಂತುಕೊಂಡರೆ ಮಾತನಾಡುವವರೆಗೆ ಸಮಯ ಕೊಡಬೇಕೆ? ಅಥವಾ ಎಲ್ಲರಿಗೋ ಸಮಯ ಕೊಡಬೇಕೋ? ಪ್ರೊಸೀಜರ್ ಏನು ಹೇಳುತ್ತದೆ ಎಂದರೆ, ಒಬ್ಬ ಮಾತನಾಡುತ್ತಿರುವಾಗ ಮತ್ತೊಬ್ಬ ಮಾತನಾಡಬೇಕಾದರೆ ಅವರ ಪರ್ಮಿಷನ್ ತೆಗೆದುಕೊಂಡು ಅವರು ಈಲ್ಡ್ ಆದರೆ ತಾವು ಎಷ್ಟು ಹೊತ್ತಿನವರೆಗೆ ಆದರೂ ಮಾತನಾಡಬಹುದು. ಅವರು ಈಲ್ಡ್ ಆದರೆ ತಾವು ಮಾತನಾಡಿ. ಇಲ್ಲದಿದ್ದರೆ ತಮ್ಮ ಕಡೆಯಿಂದ ಇನ್ನೂ ಮಾತನಾಡುವುದಕ್ಕೆ ಸಾಕಷ್ಟು ಜನರಿಗೆ ಅವಕಾಶ ಇದೆ. ತಮ್ಮ ಕಡೆಯಿಂದ ಏನು ಆಪಾದನೆ ಎನ್ನುವುದನ್ನು ನಿಮ್ಮ ಕಡೆಯವರು ಮಾತನಾಡುವಾಗ ಮಾತನಾಡಲಿ.

SRI B. SOMASHEKHAR : I request him to yield.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ತಾವು ಕೊನೆಯಲ್ಲಿ ಉತ್ತರ ಹೇಳಿ. We will hear him afterwards. Please allow me to speak.

SRI B. SOMASHEKHAR : I will request you to yield. Thank you very much. ಯಾವುದೋ ಒಂದು ರೂಪದಲ್ಲಿ ಅವರು ತಮ್ಮ ಸರ್ಕಾರವನ್ನು ಡಿಫೆಂಡ್ ಮಾಡಿಕೊಳ್ಳುತ್ತಿದ್ದಾರೆ.

SRI S.P. MUDDAHANUME GOWDA : I will make it clear. I am not here to defend any government or any individual. I am not filing Vakalath on behalf of anybody. I am here to ascertain the truth. I want the truth. I will make it clear. I am not here to defend any body. I will further make it clear that I am not filing Vakalath for anybody else. It is not my concern. It is the duty of the State Government or the Union Government to defend themselves as a Member of the House, I would like to know the truth regarding this scam.

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರವರೇ, ಕರೀಂಲಾಲ್‌ನ ಮೇಲೆ ನೀವೇನು ಕ್ರಮ ತೆಗೆದುಕೊಂಡಿದ್ದೀರೆಂದು ಅವರು ಕೇಳುತ್ತಿದ್ದಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಛೇರ್ಮನ್‌ರವರೆ, ಆನ್ ಇಂಟ್ರೆಸ್ಟೆಡ್ ಆಗಿ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟರೆ ನಾನು ಅರ್ಧ ಗಂಟೆಯಲ್ಲಿ ನನ್ನ ಮಾತನ್ನು

ಮುಗಿಸುತ್ತೇನೆ. I cannot answer to my friends. It is the duty of the government to ansewer them. As a Member, I would like to place my argument before this House. Kindly allow me.

ಶ್ರೀ ಬಿ. ಸೋಮಶೇಖರ್ : ತಾವು ಒಂದು ನಿಮಿಷ ಈಲ್ಡ್ ಆಗಿ. ನಾನು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಕರೀಂಲಾಲ್‌ನ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಕರೀಂಲಾಲ್ ನಮ್ಮ ಕಡೆಯಿಂದ ಲೈಸೆನ್ಸ್ ತೆಗೆದುಕೊಂಡಿಲ್ಲ. ಅವನು ಪಿಕ್ಚರ್‌ಗೆ ಬಂದದ್ದು ನಮ್ಮ ಸರ್ಕಾರ ಇದ್ದಾಗ ಅಲ್ಲ ಈ ಅಮೆಂಡ್‌ಮೆಂಟ್ ತಂದಾಗ ಎರಡು ತಿಂಗಳು ಮಾತ್ರ ನಮ್ಮ ಸರ್ಕಾರ ಅಧಿಕಾರದಲ್ಲಿ ಇತ್ತು. ಆನಂತರ ಚುನಾವಣೆ ಸನ್ನಿವೇಶ ಇತ್ತು ಈ ಸಂದರ್ಭದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆಗಸ್ಟ್ ತಿಂಗಳಲ್ಲಿ ನಾವು ಅಮೆಂಡ್‌ಮೆಂಟ್ ತಂದೆವು ಮತ್ತೆ ಸೆಪ್ಟೆಂಬರ್ ತಿಂಗಳಲ್ಲಿ ನಾವು ಚುನಾವಣೆಗೆ ಹೋದೆವು. There was no time. ಒಂದು ತಿಂಗಳ ಅವಧಿಯಲ್ಲಿ ಚುನಾವಣೆಯ ಪ್ರಚಾರಕ್ಕಾಗಿ ಹೋಗಬೇಕಾಗಿತ್ತು. ಆಗಸ್ಟ್ ತಿಂಗಳಲ್ಲಿ ಅಮೆಂಡ್‌ಮೆಂಟ್ ತಂದು ಸೆಪ್ಟೆಂಬರ್ ತಿಂಗಳಲ್ಲಿ ಚುನಾವಣೆಗೆ ಹೋದಂಥ ಸಂದರ್ಭದಲ್ಲಿ ನನ್ನ ಮೇಲೆ ಒಂದು ಆರೋಪ ಬಂತು ಮತ್ತೆ ಆ ಸಂದರ್ಭದಲ್ಲಿ ಬಹಳಷ್ಟು ಟೀಕೆಗಳು ಬಂದು. ನಾನು ರೆವಿನ್ಯೂ ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಹಾಗೆ ಮಾಡಿದರು, ಹೀಗೆ ಮಾಡಿದರೆಂದು ನನ್ನ ಮೇಲೆ ಒಬ್ಬ ಅಡ್ವೊಕೇಟ್ ಹೈಕೋರ್ಟ್‌ನಲ್ಲಿ ಐ.ಐ.ಎಲ್ ಕೂಡ ಹಾಕಿದ್ದರು.

4.20 ಪಿ.ಎಂ.

Then I had to fight the case also in the High Court, in the midst of elections. I think it was for the first time in the histroty of Karnataka, a minister challenged that and got 20,000 wards damages from the advocate. ಚಾಲೆಂಜ್ ಮಾಡಿರತಕ್ಕಂಥದ್ದು ತಪ್ಪು ಎಂದು ಅವರಿಂದ 20 ಸಾವಿರ ಡ್ಯಾಮೇಜ್ ಕಟ್ಟಿಸಿಕೊಂಡಿರುವ ನಿದರ್ಶನ ಕರ್ನಾಟಕದಲ್ಲಿದ್ದರೆ ಅದು ನಾನು.

ಮಾನ್ಯ ಸದಸ್ಯರು : ಆಗ ತಮ್ಮ ಸರ್ಕಾರವೇ ಇತ್ತಲ್ಲಾ?

ಶ್ರೀ ಬಿ. ಸೋಮಶೇಖರ್ : ಆಗ ಕರೀಂಲಾಲ ಪಿಕ್ಚರ್‌ನಲ್ಲೇ ಇರಲಿಲ್ಲ ನಮ್ಮ ಸರ್ಕಾರ ಒಂದೇ ತಿಂಗಳು ಇದ್ದದ್ದು ಅಷ್ಟರಲ್ಲಿ ಏನು ಮಾಡುತ್ತೀರಿ?

ಶ್ರೀ ಬಿ.ಆರ್. ಯಾವಗಲ್ : ಒಂದು ತಿಂಗಳು ನಿಮ್ಮ ಸರ್ಕಾರ ಇತ್ತು ಎಂದು ಹೇಳುತ್ತೀರಲ್ಲಾ ಅಷ್ಟು ಸಮಯ ತಮಗೆ ಸಾಕಾಗಲಿಲ್ಲವೇ? ತಮ್ಮ ಸರ್ಕಾರ ಒಂದು ತಿಂಗಳು ಇತ್ತು ಎಂದು ಹೇಳುವ ತಾವು ಏಕೆ ಮಾಡಲಿಲ್ಲ? ತಮ್ಮ ಸರ್ಕಾರವೇ ಇದ್ದಾಗ ಏಕೆ ಮಾಡಲಿಲ್ಲ.

(ಗೊಂದಲ)

ಛೇರ್ಮನ್: ಮಾನ್ಯ ಮುದ್ದಹನುಮೇಗೌಡರೆ, ನಮಗೆ ಸಮಯವನ್ನು ನಿಗದಿ ಮಾಡಿದ್ದಾರೆ, ಆ ಸಮಯದೊಳಗೆಯೇ ಮಾತನಾಡಬೇಕು, ಇವತ್ತು ಸಂಜೆ ಆರು ಗಂಟೆಯ ಒಳಗಾಗಿ ಚರ್ಚೆ ಪೂರ್ಣವಾಗಬೇಕು, ಅಪೂರ್ಣವಾದರೆ ಸರ್ಕಾರ ಜವಾಬ್ದಾರಿಯಾಗುವುದಿಲ್ಲ ಚರ್ಚೆ ಆರು ಗಂಟೆಯೊಳಗೆ ಪೂರ್ಣವಾಗಬೇಕು, ಅಪೂರ್ಣವಾಗಬಾರದು. ನಾಳೆ ರಿಪ್ಲೈಯಾಗುತ್ತದೆ.

ಮಾತನಾಡುವವರು ತುಂಬಾ ಜನರಿದ್ದಾರೆ, ತಾವು ತಮ್ಮ ವಿಚಾರಗಳು ಏನೇನಿದೆ ಅದನ್ನು ಮಂಡಿಸಿಬಿಡಿ, ಚರ್ಚೆಗೆ ಅವಕಾಶ ಬೇಡ. ಮಾತನಾಡುವವರು ತುಂಬಾ ಜನರಿದ್ದಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಅಧ್ಯಕ್ಷರೆ, ನಾನು as a member of this House, as a citizen of this country, I would like to know, who arrested this kingpin? You have to accept that it is the Karnataka Government during November 2001 arrested this kingpin. ಇಂಥ ಒಬ್ಬ ದೊಡ್ಡ ಖದೀಮ, ರಾಷ್ಟ್ರದ ಹಣಕಾಸು ವ್ಯವಸ್ಥೆಯನ್ನೇ ಬುಡಮೇಲು ಮಾಡತಕ್ಕಂಥ ದೊಡ್ಡ ಹಗರಣದಲ್ಲಿರತಕ್ಕಂಥ ಪ್ರಮುಖ ಆರೋಪಿಯನ್ನು ಕರ್ನಾಟಕ ರಾಜ್ಯದ ಪೊಲೀಸ್‌ನವರು 2001 ರಲ್ಲಿ ರಾಜಾಸ್ತಾನಕ್ಕೆ ಹೋಗಿ ಅವನನ್ನು ಅರೆಸ್ಟ್ ಮಾಡಿ ಹಿಡಿದುಕೊಂಡು ಬರುತ್ತಾರೆಂದರೆ is it not a credit to this government? ನೀವು ಇಂಥ ಖದೀಮನನ್ನು ಹಿಡಿದಿದ್ದೀರಿ ಎಂದು ಒಂದು ಒಳ್ಳೆಯ ಮಾತನ್ನು ಹೇಳಿ.

ಶ್ರೀ ಎಸ್. ಸುರೇಶ್‌ಕುಮಾರ್ : ಹೇಳುವುದಕ್ಕೆ ಬಿಡುವುದೇ ಇಲ್ಲವಲ್ಲಾ ತಾವು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ನಿಮ್ಮ ನಾಯಕರು ಮಾತನಾಡಿದಾಗ ಹೇಳಲೇ ಇಲ್ಲವಲ್ಲಾ?

ಶ್ರೀ ಕೆ. ಶ್ರೀನಿವಾಸಗೌಡ (ಕುಡುವನಹಳ್ಳಿ) : ಈಲ್ಡ್ ಆದರೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಇಲ್ಲ ನಾನು ಈಲ್ಡ್ ಆಗುವುದಿಲ್ಲ. ಇದನ್ನು ದೊಡ್ಡ ಕಿರೀಟವೆಂದು ನಾನು ಹೇಳಲು ಹೋಗುವುದಿಲ್ಲ. ಯಾವುದೇ ಒಂದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿರುವಂಥ ಸರ್ಕಾರ ತನ್ನ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿದೆ ಎಂದು ಮಾತ್ರ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆದರೆ I still blame the Central Government. They have miserably failed to unearth this scam till 2001, the day on which Karim Lala was arrested. Is it not the duty of the Central Government? Are they not responsible? ಇದನ್ನು ನಾನು ಮತ್ತೊಮ್ಮೆ ಸ್ಪಷ್ಟಪಡಿಸಲು ಬಯಸುತ್ತೇನೆ. ಇದು ಕೇವಲ ಕರ್ನಾಟಕ ರಾಜ್ಯದ ಅವ್ಯವಹಾರವಲ್ಲ, ಇದು ಇಡೀ ದೇಶವ್ಯಾಪ್ತಿಯಲ್ಲಿ ನಡೆದಿರತಕ್ಕಂಥ ಒಬ್ಬ ವ್ಯಕ್ತಿ ಮಾಡಿರತಕ್ಕಂಥ ಅವ್ಯವಹಾರ, ಅವನ ಹಿಂದೆ ನೂರಾರು, ಸಾವಿರಾರು ಜನರಿದ್ದಾರೆ. ಆದರೆ ಕರ್ನಾಟಕ ಸರ್ಕಾರ ಇಂಥ ಒಬ್ಬ ಖದೀಮನ ಮೇಲೆ ಕೇಸನ್ನು ಹಾಕಿ ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ಅವನನ್ನು ಬೇರೆ ರಾಜ್ಯದಲ್ಲಿ it is not that he was arrested some where here or in the house of somebody else. He was arrested at Ajmir in Rajastan. ಅವನನ್ನು ಅಲ್ಲಿಗೆ ಹೋಗಿ ಹಿಡಿದುಕೊಂಡು ಬಂದು ಅಂಥ ಒಬ್ಬ ದೊಡ್ಡ ಕುಳವನ್ನು ಹಿಡಿದುಕೊಂಡು ಬಂದು, ಈ ಖದೀಮನನ್ನು ಅರೆಸ್ಟ್ ಮಾಡತಕ್ಕಂಥ ಕ್ರೆಡಿಟ್ ನಮ್ಮ ಕರ್ನಾಟಕದ ಪೊಲೀಸರಿಗೆ ಹೋಗಬೇಕು. Sri Srikumar, an honest police officer, efficient police officer. This has been acknowledged and accepted by the police officers....

ಶ್ರೀ ಆರಗ ಜ್ಞಾನೇಂದ್ರ : ವೀರಪ್ಪನನ್ನೂ ಹೀಗೆ ಮಾಡಬಹುದಿತ್ತಲ್ಲಾ ಇನ್ನೂ ಹೆಮ್ಮೆಪಟ್ಟುಕೊಳ್ಳಬಹುದಿತ್ತು.

ಛೇರ್ಮನ್ : ಬೇಡ, ಅವನನ್ನು ಇಲ್ಲಿಗೆ ಕರೆದುಕೊಂಡು ಬರಬೇಡಿ!

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ನಾವು ಏನೇ ಹೇಳಿದರೂ ನಿಮಗೆ ತಡೆದುಕೊಳ್ಳಲು ಆಗುವುದಿಲ್ಲ. ನೀವು ಹೇಳಿದ ಪುರಾಣಗಳನ್ನೆಲ್ಲಾ ನಾವು ಕೇಳಬೇಕು. ನಾವು ಏನಾದರೂ ಒಂದು ವಿಷಯವನ್ನು ಹೇಳಿದರೆ ತಾವು ಎದ್ದು ನಿಂತುಕೊಂಡುಬಿಡುತ್ತೀರಿ This is very bad. ನಾನೇನಾದರೂ ಅಸತ್ಯವಾದುದನ್ನು ಹೇಳುತ್ತಿದ್ದೇನೆಯೇ? ಅನ್‌ಪಾರ್ಲಿಮೆಂಟರಿ ವರ್ಡ್ಸ್‌ನ್ನು ಹೇಳುತ್ತಿದ್ದೇನೆಯೇ ಅಥವಾ ಬೇರೆ ಯಾವುದಾದರೂ ಕತೆಯನ್ನು ಹೇಳುತ್ತಿದ್ದೇನೆಯೇ? ನನಗೆ ಗೊತ್ತಿರುವ ಮಾಹಿತಿಯನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. It is for you to accept it or not Mr. Srikumar, an efficient officer who worked in CBI for more than 11 years holding a responsible position in the Karnataka police rightly has been selected to head this stampit. ನಮ್ಮ ಸ್ನೇಹಿತರುಗಳೂ ಕೂಡ ಇದನ್ನು ಒಪ್ಪಿಕೊಂಡಿದ್ದಾರೆ. ಶ್ರೀಕುಮಾರ್‌ರವರ ದಕ್ಷತೆಯ ಬಗ್ಗೆ ಮೆಚ್ಚುಗೆಯ ಮಾತನ್ನು ವಿರೋಧ ಪಕ್ಷದ ನಾಯಕರೂ, ಮತ್ತೊಬ್ಬ ನಾಯಕರಾದ ಸೋಮಶೇಖರ್‌ರವರೂ ಹೇಳಿದ್ದಾರೆ. ನಾವು ಕೇಳಿದಂಥ ಭಾಷಣದಲ್ಲಿ ಶ್ರೀಕುಮಾರ್ ಅವರು ಒಬ್ಬ ದಕ್ಷ ಅಧಿಕಾರಿ, ಪ್ರಾಮಾಣಿಕ ಅಧಿಕಾರಿ ಎಂಬುದನ್ನು ಮಾತ್ರ ಅವರುಗಳು ಪ್ರಾಮಾಣಿಕವಾಗಿ ಒಪ್ಪಿಕೊಂಡರು. ಅಂಥ ಪ್ರಾಮಾಣಿಕ ದಕ್ಷ ಅಧಿಕಾರಿಯ ನೇತೃತ್ವದಲ್ಲಿ ಒಂದು ದಳವನ್ನು ರಚನೆ ಮಾಡಿ ನಮ್ಮ ಕರ್ನಾಟಕ ಪೊಲೀಸ್‌ನವರೂ ಕೂಡ ಸಿಬಿಐ ಗಿಂತಲೂ ದಕ್ಷರಾಗಿದ್ದಾರೆ, ಬೇರೆ ಯಾವುದೇ ರಾಜ್ಯದ ಪೊಲೀಸರಿಗಿಂತ ಕಡಿಮೆಯೇನಿಲ್ಲ, ಕರ್ನಾಟಕ ಪೊಲೀಸರೂ ಕೂಡ ಇಂಥ ದೊಡ್ಡ ಪ್ರಕರಣವನ್ನು ತನಿಖೆ ಮಾಡಬಹುದಲ್ಲ ಎಂಬುದಕ್ಕೆ ಇದುವರೆಗೆ ಅವರು ಏನು ತನಿಖೆಯನ್ನು ಮಾಡಿದ್ದಾರೆ ಅದನ್ನು ನೋಡಿದರೆ ನಮಗೆ ಅರ್ಥವಾಗುತ್ತದೆ. It is under the leadership of Srikumar, an honest and efficient officer the team is constituted. 1999–2000ನೇ ಇಸವಿಯಲ್ಲಿ ಏನು ಮೊಟ್ಟ ಮೊದಲ ಪ್ರಕರಣ ಉಪ್ಪಾರ್‌ಪೇಟೆ ಪೊಲೀಸ್ ಠಾಣೆಯಲ್ಲಾಗಿದೆ, ಅಲ್ಲಿಂದ ಇಲ್ಲಿಯವರೆಗೆ ಇದರ ಬಗ್ಗೆ ಸಾಕಷ್ಟು ತನಿಖೆಯನ್ನು ಮಾಡಿರುವುದರ ಬಗ್ಗೆ ಕರ್ನಾಟಕ ಪೊಲೀಸರ ಸ್ಟಾಪಿಂಟ್ ಏನಿದೆ ಅವರ ಸಾಧನೆಯನ್ನು ಸುಪ್ರೀಮ್ ಕೋರ್ಟ್‌ನಲ್ಲಿ ಒಂದು ಪ್ರಮಾಣ ಪತ್ರವನ್ನು ಸಲ್ಲಿಸುವುದರ ಮೂಲಕ ಈ ದೇಶಕ್ಕೆ ನ್ಯಯಾಂಗಕ್ಕೆ ನಮ್ಮ ಸರ್ಕಾರ ತಿಳಿಸತಕ್ಕ ಕೆಲಸವನ್ನು ಮಾಡಿದ್ದಾರೆ. ಅದೂ ಕೂಡ ಮೆಚ್ಚುಗೆಯ ಮಾತು ಕರೀಮ್‌ಲಾಲ ಯಾರು? ಎಲ್ಲಿಯವನು? ಇವನು ಯಾವ ರಾಜ್ಯದ ಮೂಲನಿವಾಸಿ? ಇವರ ವಾಸಸ್ಥಳ ಯಾವುದು? ಇವನ ಕಾರ್ಯವ್ಯಾಪ್ತಿ ಯಾವುದು? Where exactly he was registered, he got his registration as stamp vender? ಇದು ಬಹಳ ಮುಖ್ಯ ಏಕೆಂದರೆ, ನಮ್ಮ ವಿರೋಧಿ ಸ್ನೇಹಿತರುಗಳು ಇವರ ಭಾಷಣದ ವೈಖರಿಯಲ್ಲಿ ರಾಜ್ಯದ ಮುಗ್ಧ ಜನತೆಗೆ ಏನೋ ಕರ್ನಾಟಕ ಸರ್ಕಾರದವರು ಈ ಕರೀಂಲಾಲನನ್ನು ಉಳಿಸಲು ಭಾರಿ ಪ್ರಯತ್ನ ಮಾಡುತ್ತಿದ್ದಾರೆ ಎನ್ನತಕ್ಕ ರೀತಿಯಲ್ಲಿ ಬಿಂಬಿಸಿಬಿಟ್ಟಿದ್ದಾರೆ. It is not correct ನಿಜವಾಗಿಯೂ ಈ ರಾಜ್ಯ ಮತ್ತು ರಾಷ್ಟ್ರದ ಹಿತವನ್ನು ಕಾಪಾಡತಕ್ಕ ಕಾಳಜಿ ಇದ್ದಿದ್ದರೆ. ಸತ್ಯಾಸತ್ಯತೆಗಳನ್ನು ಜನತೆಗೆ

ಮೊದಲು ತಿಳಿಸಬೇಕು. Karim Lala is from Maharastra. He is a resident of Mumbai. He registered as stamp vender in Mumbai only. This is my information. I am not the part of investigating agency. This is only I am placing the information and material which is available for me. That is subject to corrections. If you have got anything else, if you can counter my statement, I have no objection. Please sit down. You can answer afterwards.

ಶ್ರೀ ಎಸ್.ಕೆ. ಬೆಳ್ಳುಬ್ಬಿ : ಕರೀಂಲಾಲ ನನ್ನ ಕ್ಷೇತ್ರದವನು.

SRI S.P. Muddahanumegowda : It is alright, you can answer afterwards.

ಶ್ರೀ ಆರಗ ಜ್ಞಾನೇಂದ್ರ : ಅವನು ಯಾವ ಊರಿನವನು ಎಂಬ ಬಗ್ಗೆ ರೆಕಾರ್ಡ್ಸ್‌ನಲ್ಲಿ ಸರಿಯಾಗಬೇಕು.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಅವನು ಕನ್ನಡ ನಾಡಿನ ಹೆಮ್ಮೆಯ ಪುತ್ರ!

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಇವರನ್ನು ಡಿಫೆಂಡ್ ಮಾಡುತ್ತಿಲ್ಲ. ಅವರು ಎಲ್ಲಿ ಲೈಸೆನ್ಸ್ ತೆಗೆದುಕೊಂಡರು, ಯಾವ ಊರಿನಲ್ಲಿ ತೆಗೆದುಕೊಂಡರು ಅದನ್ನು ಅವರು ಹೇಳುತ್ತಿದ್ದಾರೆ. ಅವನು ಬೆಳ್ಳುಬ್ಬಿಯ ತಾಲ್ಲೂಕಿನಲ್ಲಿ ಹುಟ್ಟಿದರೂ ಕೂಡ ಅವನು ಬೆಳೆದಿದ್ದು ಖಾನಾಪುರದಲ್ಲಿ, ಕೆಲಸವನ್ನು ಚಾಲನೆ ಮಾಡಿದ್ದು ಬೊಂಬಾಯಿಯಲ್ಲಿ, ಪ್ರಾರಂಭ ಮಾಡಿದ್ದು ಬೊಂಬಾಯಿಂದ ಹೊರತಾಗಿ ಹುಟ್ಟಿದ ಜಾಗದಿಂದ ಅಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಹಾಗಯೇ ಅವರು ಆ ಲೈಸೆನ್ಸ್ ಕೊಟ್ಟಿದ್ದು ಯಾರು ಎಂದು ಹೇಳಿಬಿಡಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದರ ಬಗ್ಗೆ ಬೆಳ್ಳುಬ್ಬಿಯವರಿಗೇ ಬಹಳ ಚೆನ್ನಾಗಿ ಗೊತ್ತಿರಬೇಕು. ಏಕೆಂದರೆ ಅವರು ಹುಟ್ಟಿದ್ದು ಅವರ ತಾಲ್ಲೂಕಿನಲ್ಲಿ. ಆದ್ದರಿಂದ ಅವರಿಗೆ ಗೊತ್ತಿರಬೇಕು!

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮುದ್ದಹನುಮೇಗೌಡರು ಈ ರಾಜ್ಯದ ಪೊಲೀಸರು ಬಹಳ ದಕ್ಷರು ಎಂದು ಹೇಳಿದರು. ಅಂದರೆ ನಿಮ್ಮ ಸರ್ಕಾರ ಇದ್ದಾಗ ದಕ್ಷವಾಗಿತ್ತು, ಹಿಂದೆ ಇದ್ದ ಸರ್ಕಾರದಲ್ಲಿ ದಕ್ಷವಾಗಿರಲಿಲ್ಲವೆಂದು ಅಲ್ಲ. ನಿಮ್ಮ ನಾಯಕರು ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಡಿಸಿಸಿ ಬ್ಯಾಂಕ್‌ನ ಮಿಸ್‌ಅಪ್ರೋಪ್ರಿಯೇಷನ್‌ನ ಪ್ರಕರಣದಲ್ಲಿ ನನ್ನನ್ನು ಕರೆದುಕೊಂಡು ಬಂದು ಸಿಬಿಐಗೆ ಕೊಡಿಸಿದರು. ಅವತ್ತೂ ಸಹ ದಕ್ಷರು ಇದ್ದರು. ಆವತ್ತು ಏಕೆ ಸಿಬಿಐಗೆ ರೆಫರ್ ಮಾಡಿದೆವು? ಸುಮ್ಮನೆ ಇವೆಲ್ಲಾ ಮಾತನ್ನು ಹೇಳಬಾರದು. ಸಿಬಿಐಗೆ ಕೊಡುತ್ತೇವೆಂದು ಕೊಡುತ್ತಿದ್ದೀರಷ್ಟೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಛೇರ್ಮನ್‌ರವರೆ, ಜಾಲಪ್ಪನವರು ಹಿಂದೆ ಮಂತ್ರಿಗಳಾಗಿದ್ದಾಗ, ನೀವು ನೀವೇ ಮಂತ್ರಿಗಳು ಜಗಳವಾಡಿಕೊಂಡಿರಿ ಗುಪ್ತವಾದ ಕೆಲವು ಮಾಹಿತಿಗಳನ್ನು ನಿಮ್ಮಲ್ಲಿಯೇ ಇಟ್ಟುಕೊಂಡರೆ ಒಳ್ಳೆಯದು. ಪುನಃ ಅದನ್ನು ಹೇಳಿದರೆ ನಿಮಗೇ ಲುಕ್ಸಾನ್ ಆಗುತ್ತದೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಛೇರ್ಮನ್‌ರವರೆ, ಕರೀಂಲಾಲ ತೆಲಗಿಯ ಬಗ್ಗೆ ಇನ್ನು ಹೆಚ್ಚಿನ ಮಾಹಿತಿ ಮಾನ್ಯ ಪಾಟೀಲ್‌ರಿಗೆ ಗೊತ್ತಿರುವ ಹಾಗೆ ಇದೆ. ಅವರು ನಂತರ ಹೇಳಲಿ. ನನಗೆ ಗೊತ್ತಿರುವ ಹಾಗೆ ಪೇಪರ್ ಮತ್ತು ಇತರ ದಾಖಲೆಗಳ ಮೇಲೆ ಹೇಳುತ್ತಿದ್ದೇನೆ. ಅವರಿಗೆ ಬಹುಶ: ಬಹಳ ಹತ್ತಿರದಲ್ಲಿ ಬಲ್ಲವರೆಂದು ಅವರು ಕಾಣಿಸುತ್ತಾರೆ, ಅವರು ಬೇಕಾದರೆ ಆಮೇಲೆ ಪ್ರಸ್ತಾಪ ಮಾಡಲಿ. I cannot understand why our friends are suspecting the bonafidies of our police. They are really efficiant. They are doing good job. ನೀವು ನಮ್ಮ ಕರ್ನಾಟಕದ ಪೊಲೀಸರ ಇತಿಹಾಸವನ್ನು ತೆಗೆದುಕೊಂಡಾಗ ಅನೇಕ ದೊಡ್ಡ ದೊಡ್ಡ ಕೇಸುಗಳನ್ನು ಇನ್‌ವೆಸ್ಟಿಗೇಷನ್ ಮಾಡಿ ಚಾರ್ಜ್‌ಶೀಟ್‌ನ್ನು ಹಾಕಿ ಅದರಲ್ಲಿ ಶಿಕ್ಷೆಯನ್ನು ಕೊಡಿಸಿರುವಂತಹ ಇತಿಹಾಸವಿದೆ. ಕರ್ನಾಟಕದ ಪೊಲೀಸ್‌ನವರು, ನೀವು ಬೇರೆ ಯಾವುದೇ ರಾಜ್ಯದ ಪೊಲೀಸರಿಗೆ ಇವರನ್ನು ಹೋಲಿಕೆ ಮಾಡಿ ನೋಡಿದಾಗ, ಕರ್ನಾಟಕದ ಪೊಲೀಸರು ಉತ್ತಮ ಸ್ಥಾನದಲ್ಲಿದ್ದಾರೆ, ಮೇಲ್ಪಂಕ್ತಿಯಲ್ಲಿದ್ದಾರೆ, ಕರ್ನಾಟಕದ ಪೊಲೀಸರ ದಕ್ಷತೆಯನ್ನು ಅರ್ಥ ಮಾಡಿಕೊಂಡು, ಇವರು 2001ರಲ್ಲಿ ಇಂತಹ ಒಬ್ಬ ದೊಡ್ಡ ಖದೀಮನನ್ನು ಬೇರೆ ರಾಜ್ಯಕ್ಕೆ ಹೋಗಿ ದಸ್ತಗಿರಿ ಮಾಡಿಕೊಂಡು ಬಂದ ಮೇಲೆ ಯಾರು ತಾನೇ ಅವರ ಎಫಿಷಿಯೆನ್ಸಿಯ ಬಗ್ಗೆ ಅನುಮಾನಪಡುವುದಕ್ಕೆ ಸಾಧ್ಯ? That is why it is under the leadership of Srikumar a team was constituted and the responsibility of investingating all these cases and the scam was fixed on them. They have been efficiently doing it. They have been honestly discharging their responsibilities and duties. ಇವತ್ತು 11 ಪ್ರಕರಣಗಳಲ್ಲಿ ಚಾರ್ಜ್‌ಶೀಟ್‌ನ್ನು ಹಾಕಿರುವುದನ್ನು ನಾವು ನೋಡಿದಾಗ we can just imagine the amount of interest they have taken in investigating these cases. We must appreciate them. ಈ ಕರೀಂಲಾಲ ತೆಲಗಿ ಇದ್ದಾನಲ್ಲಾ. ಆತನು ಸ್ಟಾಂಪ್‌ಪೇಪರ್‌ಗಳನ್ನು ಎಲ್ಲಿ ಪ್ರಿಂಟ್ ಮಾಡುತ್ತಿದ್ದ? ಕರ್ನಾಟಕದಲ್ಲಂತೂ ಅಲ್ಲ, ಆತನು ಕರ್ನಾಟಕದಲ್ಲಿ ಸ್ಟ್ಯಾಂಪ್‌ಪೇಪರ್ ಪ್ರಿಂಟ್ ಮಾಡಲಿಲ್ಲ. ಈ ಸ್ಟ್ಯಾಂಪ್‌ಪೇಪರ್‌ಗಳನ್ನು ಪ್ರಿಂಟ್ ಮಾಡಿದ್ದಾದರೂ ಎಲ್ಲಿ? ನಾಸಿಕ್‌ನಲ್ಲಿ ಪ್ರಿಂಟ್ ಮಾಡಿಸಿಕೊಂಡು ತರಿಸಿಕೊಂಡಿರಬೇಕು, ಇಲ್ಲಾ ಅವನು ಎಲ್ಲೋ ಮಾಡಿರಬೇಕು. But the invesigation so far conducted discloses that he had his printing press at Bombay. The investigation conducted so far discloses that he had links with the press at Nasik. What is that press called? India Security press at Nasik. The investigation discloses officers who were working at the India Security Press, they had links with Karim Lala Telagi. That is an undisputed fact. The same fact is made known to both Union Finance Minister and also the Home Minister, who is also the Deputy Prime Minister of this country. What is that the action they have taken? What is that the action they have initiated? What were they doing so far? As long back in the year 2002 Hon'ble Chief Minister

of Karnataka wrote to Mr. Jaswanth Singhji about the Scandal. About the involvement of the officers of that Nasik printing press. 2000ನೇ ಇಸವಿಯಲ್ಲಿ ಮಾನ್ಯ ಕೆ.ಬಿ. ಮಲ್ಲಿಕಾರ್ಜುನ್‌ರವರು ದಯವಿಟ್ಟು ನಾನು ಹೇಳುವುದನ್ನು ತಾವು ಆಲಿಸಬೇಕು. ದಿನಾಂಕ : 11-7-2002ರಲ್ಲಿ ಈ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕೇಂದ್ರದ ಹಣಕಾಸಿನ ಸಚಿವರಿಗೆ ಪತ್ರವನ್ನು ಬರೆಯುತ್ತಾರೆ. ನಮ್ಮ ರಾಜ್ಯದಲ್ಲಿ ಇಂತಹ ಒಬ್ಬ ಆರೋಪಿಯನ್ನು ಹಿಡಿದಿದ್ದೇವೆ. The investigation discloses about the links with the people at Nasik. The investigation discloses that some machineries from that institute was sold to this man. The investigation discloses that he has got his own printing press in Maharastra at Bombay. ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವಂತಹ ಇಂತಹ ಒಂದು ಹಗರಣ ನಡೆಯುತ್ತಿರುವುದರಿಂದ ದಯಮಾಡಿ ಕೇಂದ್ರ ಸರ್ಕಾರ ತಮ್ಮ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ಇದರ ಬಗ್ಗೆ ಮಧ್ಯ ಪ್ರವೇಶ ಮಾಡಬೇಕೆಂಬ ಕೋರಿಕೆಯ ಮನವಿ ಪತ್ರವನ್ನು ಸನ್ಮಾನ್ಯ ಎಸ್.ಎಂ. ಕೃಷ್ಣ ರವರು ಈ ರಾಷ್ಟ್ರದ ಅರ್ಥ ಸಚಿವರಾದಂತಹ ಜಸ್ವಂತಸಿಂಗ್ ರವರಿಗೆ ಪತ್ರವನ್ನು ಬರೆಯುತ್ತಾರೆ. ದಿನಾಂಕ 11-7-2002 ಎಂದರೆ ಹೆಚ್ಚುಕಡಿಮೆ ಒಂದು ಮುಕ್ಕಾಲು ವರ್ಷ ವಾಯಿತು. ಅವರು ಏನು ಮಾಡುತ್ತಿದ್ದರು ಸ್ವಾಮಿ? ಏಕೆ ನಿಮಗೆ ಜವಾಬ್ದಾರಿ ಇಲ್ಲವೇ? ಹೇಳಿಬಿಡಿ ನೀವು ಈ ಸದನದ ಮುಂದೆ ಹೇಳಿಬಿಡಿ ಇದು ಕೇಂದ್ರಸರ್ಕಾರದ ಜವಾಬ್ದಾರಿ ಅಲ್ಲವೆಂದು ಹೇಳಿಬಿಡಿ. ನಾವು ಒಂದು ಫೆಡರಲ್ ಸಿಸ್ಟಮ್‌ನಲ್ಲಿದ್ದೇವೆ. ನಾವು ಒಂದು ಡೆಮಾಕ್ರೆಸಿನಲ್ಲಿದ್ದೇವೆ We are all working under the Constitution. We have got the Constitutional obligations.We have got Constitutional responsibilities. The Constitution has clearly bifurcated what are the duties and responsibilities of the Union Government and what are the duties and responsibilities of the State Government. ಇಂತಹ ಒಂದು ಹಗರಣ ರಾಷ್ಟ್ರದ ಎಲ್ಲಾ ಕಡೆಯೂ ನಡೆಯುತ್ತಿದೆ ಎಂದರೆ, ಒಂದು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಗಮನಕ್ಕೆ ಇಂತಹ ಒಂದು ದುರ್ವ್ಯವಹಾರವನ್ನು ಗಮನಕ್ಕೆ ತಂದರೆ the Union Government has simply give their deaf ear to this scam. ಏಕೇ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ವಿಫಲರಾದಂತಹ ಕೇಂದ್ರಸರ್ಕಾರದ ಈ ನಡತೆಯನ್ನು ನಾವೆಲ್ಲರೂ ಈ ಸಂದರ್ಭದಲ್ಲಿ ಖಂಡಿಸಬೇಕಾಗುತ್ತದೆ ಎಂದು ನಾನು ಹೇಳುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಸದಸ್ಯರಿಗೆ ಅರ್ಥವಾಗುವುದಿಲ್ಲ. ಈಗ ಅವರು ಹೇಳಿದರು, ಪತ್ರ ಏನು? ಅದಕ್ಕೆ ಸಂಬಂಧಪಟ್ಟ ಹಾಗೆ ಅವರ ಜವಾಬ್ದಾರಿ ಏನು, ರಾಜ್ಯ ಸರ್ಕಾರದ ಜವಾಬ್ದಾರಿ ಏನು? ಇದರ ಬಗ್ಗೆ ಯಾರು ಹೇಳಬೇಕು? who has to answer? ಇಲ್ಲಿ ಯಾರು ಬಂದು ಉತ್ತರವನ್ನು ಹೇಳಬೇಕಾಗಿದೆ. I cant't understand. ಅವರದೇ ಆದಂತಹ ಪಕ್ಷದ ನಾಯಕರು, ವಿರೋಧಪಕ್ಷದ ನಾಯಕರು ಇದ್ದಾರೆ, 100ಜನ ಎಂಪಿಗಳು ಕಾಂಗ್ರೆಸಿನಿಂದ ಗೆದ್ದು ಅಲ್ಲಿಗೆ ಹೋಗಿದ್ದಾರೆ. ಅವರು ಏನು ಮಾಡಿದ್ದಾರೆಂದು ಸಮಾಜ ಕೇಳುತ್ತದೆ. ಇಲ್ಲಿ ಯಾರು ಆನ್ಸರ್ ಮಾಡಬೇಕು? Who has to answer? who is defending?

ಶ್ರೀ ಬಿ.ಎಲ್. ಯಾವಗಲ್ : ಅವರು ಹೇಳುವವರಿದ್ದಾರೆ. ಹೇಳಲಿ ಬಿಡಿ.

SRI A. RAMADAS: Who has to answer? who is defending?

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ರಾಮದಾಸ್‌ರವರೆ, ಕರೀಂಲಾಲನ ಜೊತೆಗೆ ವಾಜಪೇಯಿಯವರು ಗೌರ್ನ್ಮೆಂಟ್ ಒಳಗಡೆ ಕ್ಯಾಬಿನೆಟ್ ಸಚಿವರಾದಂತಹ ರಾಮ್‌ಜೇಠ್ಮಲಾನಿಯವರು ಸಂಬಂಧ ಇತ್ತು ಎಂಬುದನ್ನು ಸಮಾಜ ಕೇಳುತ್ತದೆ.

(ಗೊಂದಲ)

ಶ್ರೀ ಬಿ. ಆರ್. ಯಾವಗಲ್ : ಚರ್ಚೆ ಇಲ್ಲಿ ಆಗುತ್ತದೆ. ಇಲ್ಲಿ ನಾವು ಕೇಳುತ್ತೇವೆ.

ಶ್ರೀ ಕರಿಯಣ್ಣ : ಮಾನ್ಯ ಛೇರ್ಮನ್‌ರವರೆ,....

ಶ್ರೀ ಎ. ರಾಮದಾಸ್ : ಇಲ್ಲಿ ಯಾರು ಉತ್ತರವನ್ನು ಕೊಡಬೇಕು?

ಶ್ರೀ ಕರಿಯಣ್ಣ : ಅವರಿಗೆ ಪತ್ರ ಬರೆದಿರುವಂತಹ ಇನ್‌ಫರ್ಮೇಷನ್ ಸಿಕ್ಕಿದೆ. ಅವರಿಗೆ ಸಿಕ್ಕಿರುವಂತಹ ಇನ್‌ಫರ್ಮೇಷನ್‌ನ್ನು ಅವರು ಹೇಳುತ್ತಿದ್ದಾರೆ. ಇವರು ಮಾತನಾಡುತ್ತಿದ್ದಾಗ ನಾವು ಯಾರೂ ಮಾತನಾಡಲಿಲ್ಲ. ಇವರು ಗಂಭೀರವಾಗಿ ಆಪಾದನೆಗಳನ್ನೂ ಕೂಡ ಮಾಡಿದರು, ಅದನ್ನು ನಾವು ಕೇಳಿದ್ದೇವೆ. ನಮಗೆ ತಿಳಿದಿರುವಂತಹ ವಿಷಯವನ್ನು ಈ ಸದನದಲ್ಲಿ ಹೇಳುವುದಕ್ಕೆ ಹೋದರೆ ಪಾರ್ಲಿಮೆಂಟ್‌ನಲ್ಲಿ ಕೇಳಲಿ, ಸೋನಿಯಾಗಾಂಧಿಯವರು ಹೋಗಿ ಕೇಳಲಿ, ಎಂದು ಹೆಳುತ್ತಾರೆ. ಆ ಮಾತನ್ನು ಇವರು ಯಾರು ಸ್ವಾಮಿ ಹೇಳುವುದಕ್ಕೆ? ನಮ್ಮ ಹಕ್ಕು ಇದೆ ನಾವು ಹೇಳುತ್ತೇವೆ. ಇವರಿಗೆ ಏನು ಅಧಿಕಾರವಿದೆ ನಮ್ಮನ್ನು ಕೆಳುವುದಕ್ಕೆ? ಪಾರ್ಲಿಮೆಂಟ್‌ನ ಬಗ್ಗೆ ಇಲ್ಲಿ ಹೇಳುವುದಕ್ಕೆ ನಿಮಗೇನು ಅಧಿಕಾರವಿದೆ. ನಮ್ಮ ವಿಚಾರವನ್ನು ನಾವು ಮಾತನಾಡುತ್ತಿದ್ದೇವೆ. ನಮಗೆ ಏನು ತಿಳಿದಿದೆಯೋ ಅದನ್ನು ನಾವು ಹೇಳುತ್ತಿದ್ದೇವೆ. ನೀವು ಕೇಳಿ ನೀವು ಬೇಕಾದರೆ ಇಲ್ಲಾ ಎಂದು ಡಿನೈ ಮಾಡಿ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ : ಈ ರಾಷ್ಟ್ರದ ಪ್ರಜೆಯಾಗಿ ಲೋಕಸಭೆ, ನಮ್ಮ ವಿಧಾನಸಭೆ ಇರಬಹುದು. we are all answerable to the people of this country. ಅಲ್ಲಿ ಎಂಪಿನೇ ಕೇಳಬೇಕಾಗಿಲ್ಲ. ಇಲ್ಲಿ ಎಂಎಲ್‌ಎನೇ ಕೇಳಬೇಕಾಗಿಲ್ಲ, ನಮ್ಮನ್ನು ಇಲ್ಲಿ ಆಯ್ಕೆ ಮಾಡಿ ಕಳುಹಿಸಿರುವಂತಹ ಒಬ್ಬ ಶ್ರೀ ಸಮಾನ್ಯನೂ ಕೂಡ ಈ ಹಗರಣದ ಬಗ್ಗೆ ನಮ್ಮನ್ನು ಕೇಳತಕ್ಕಂತಹ ಅಧಿಕಾರವಿದೆ. ಅದೇ ರೀತಿಯಾಗಿ ನಾನೂ ಕೂಡ ಒಬ್ಬ ಸಾಮಾನ್ಯ ಪ್ರಜೆಯಾಗಿ ಕೇಂದ್ರ ಸರ್ಕಾರ ಇಂತಹ ಹಗರಣಗಳಲ್ಲಿ ಯಾವುದೇ ಕ್ರಮ ಜರುಗಿಸದೆ ಇವರು ಈ ಹಗರಣದಲ್ಲಿ ಶಾಮೀಲಾಗಿದ್ದಾರೆ ಎನ್ನುವಂತಹ ಆರೋಪವನ್ನು ಮಾಡುವುದಕ್ಕೆ ನನಗೆ ಅಧಿಕಾರವಿದೆ. ಅದನ್ನು ಯಾರು ಕೇಳಲಿಲ್ಲವೋ ಬಿಡಲಿಲ್ಲವೋ I am not concerned. But here, I am here to ask that. I am here to question it. I have got every right. ನಾನು ಏನು ಹೇಳುತ್ತಿದ್ದೇನೆಂದರೆ...

ಶ್ರೀ ಎಸ್.ಶಿವಣ್ಣ : ಮಾನ್ಯ ಛೇರ್ಮನ್‌ರವರೆ, ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಛೇರ್ಮನ್ : ಮಾನ್ಯ ಶಿವಣ್ಣನವರೇ ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಮಾತನಾಡುವವರು ತುಂಬಾ ಜನರಿದ್ದಾರೆ.

ಶ್ರೀ ಎಸ್. ಶಿವಣ್ಣ : ಪತ್ರ ಈ ಸರ್ಕಾರಕ್ಕೆ ಬಂದಿದ್ದಾರೆ. ಅದಕ್ಕೆ ಒಂದೂ ಉತ್ತರವಿರಲಿಲ್ಲ. ಹಾಗೇ ಹೇಳಿದಂತಾಗುತ್ತದೆ.

ಛೇರ್ಮನ್ : ನೀವು ಮಾತನಾಡಿದ ನಂತರ ಮಾನ್ಯ ಸುರೇಶ್‌ಕುಮಾರ್‌ರವರು ಮಾತನಾಡುತ್ತಾರೆ.

ಶ್ರೀ ಎಸ್. ಶಿವಣ್ಣ : ಬಿಪಿಎಲ್ ಕಾರ್ಡ್‌ಗೆ....

ಛೇರ್ಮನ್ : ಸುರೇಶ್ ಕುಮಾರ್‌ರವರು ನೋಟ್‌ಡೌನ್ ಮಾಡಿಕೊಂಡು ಅವರ ಮಾತನಾಡುವಾಗ ಹೇಳಲಿ ಬಿಡಿ, ಅವರು ಮಾತನಾಡುವುದನ್ನು ಕೇಳಿ, ಅವರು ಮಾತನಾಡುವುದಕ್ಕೆ ಬಿಡಿ, ನೀವು ಬೆಳಿಗ್ಗೆ ಮಾತನಾಡುವಾಗ ಅವರು ಕುಳಿತಿದ್ದರೂ ತಾನೇ? ನೀವು ಏನು ಹೇಳಿದ್ದಿರೋ ಅದನ್ನೆಲ್ಲವನ್ನೂ ಅವರು ಕೇಳಿದ್ದಾರಲ್ಲಾ? ಅವರ ನಂತರ ಇನ್ನೊಬ್ಬರು ಮಾತನಾಡುತ್ತಾರೆ, ಅವರು ಎಲ್ಲವನ್ನೂ ಗುರುತು ಹಾಕಿಕೊಳ್ಳಲಿ, ಅನಂತರ ಅವರು ಪ್ರಾರಂಭ ಮಾಡಲಿ. ಸದನದಲ್ಲಿ ಮಾತನಾಡುವವರು ನಿಮ್ಮ ಕಡೆಯಿಂದ ಇದ್ದಾರೆ, ಅವರು ಏನು ಆಪಾದನೆಯನ್ನು ಮಾಡುತ್ತಾರೆ. ಅದಕ್ಕೆ ನೀವು ಮಾತನಾಡುವಾಗ ಹೇಳಬಹುದಲ್ಲವೇ? ಅದಕ್ಕೆ ಅವಕಾಶವಿದೆಯಲ್ಲಾ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಛೇರ್ಮನ್‌ರವರೆ, ಕರ್ನಾಟಕ ಸರ್ಕಾರ ನಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದೆ. ಅವರಿಗೆ ಅವರ ಪೊಲೀಸರ ಪ್ರಾಮಾಣಿಕತೆ, ದಕ್ಷತೆಯ ಬಗ್ಗೆ ನಂಬಿಕೆ, ವಿಶ್ವಾಸವಿದೆ. That is why they entrusted the matter to the police. Even the police officers discharged their duties effectively, sincerely and honestly. ಇವತ್ತು 11 ಪ್ರಕರಣಗಳಲ್ಲಿ ಆರೋಪ ಪಟ್ಟಿಯನ್ನು ಸಲ್ಲಿಸಿರತಕ್ಕಂತಹ ಕೀರ್ತಿ ಈ ರಾಜ್ಯಕ್ಕೆ ಸೇರಬೇಕು. ಈ ತೀರಿ ಯಾವ ರಾಜ್ಯದಲ್ಲಿ ಮಾಡಿದ್ದಾರೆ ಸ್ವಾಮಿ? ರಾಷ್ಟದ ಉದ್ದಗಲಕ್ಕೂ ಸ್ಕ್ಯಾಮ್ ನಡೆದಿದೆ. ಆಂಧ್ರಪ್ರದೇಶ ತಮಿಳುನಾಡು ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಇವರ ಸರ್ಕಾರ ಇರತಕ್ಕಂಥ ಗುಜರಾತ್‌ನಲ್ಲಿ ನಡೆದಿದೆ. ಯಾವ್ಯಾವ ರಾಜ್ಯದವರು ಆರೋಪಪಟ್ಟಿಯನ್ನು ಸಲ್ಲಿಸಿದರು? ಯಾವ್ಯಾವ ರಾಜ್ಯದವರು ಈ ಕರೀಂಲಾಲ ತೆಲಗಿಯನ್ನು ದಸ್ತಗಿರಿ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದರು? ಇದು ಕರ್ನಾಟಕದಲ್ಲಿ ಈ ಹಗರಣ ಪ್ರಾರಂಭವಾಯಿತು ಎಂಬ ಪ್ರಶ್ನೆ ಇದ್ದರೆ I can understand there is some force in their argument. It is not that the scam was initiated in Karnataka. ಹೀಗೆ ಇಡೀ ರಾಷ್ಟದ ಉದ್ದಗಲಕ್ಕೂ ಇರತಕ್ಕಂತಹ ಹಗರಣವನ್ನು ಕರ್ನಾಟಕ ಸರ್ಕಾರದವರು ಎಷ್ಟೊಂದು ಕಾಳಜಿ ಹಾಗೂ ಆಸಕ್ತಿ ವಹಿಸಿ ತಮ್ಮ ಕರ್ತವ್ಯವೆಂದು ಅರ್ಥ ಮಾಡಿಕೊಂಡು It is their responsibility or duty. ಎಂದು ತಿಳಿದುಕೊಂಡು ಮಾಡಿದ್ದಾರೆ. ಪ್ರಮುಖ ಆರೋಪಿಯಾದ ಕರೀಂಲಾಲನ ಜೊತೆ ಇವತ್ತು ನಮಗೆ ಸಿಕ್ಕಿರುವ ಮಾಹಿತಿ ಪ್ರಕಾರ ಸುಮಾರು 50–60 ಜನ ಬೇರೆ ಆರೋಪಿಗಳನ್ನೂ ಕರ್ನಾಟಕ ರಾಜ್ಯದವರು ದಸ್ತಗಿರಿ ಮಾಡಿದ್ದಾರೆ. Rehan Baig is also arrested in connection of this scam. ಪ್ರಾಮಾಣಿಕವಾದ, ನಿಷ್ಪಕ್ಷಪಾತವಾದ ತನಿಖೆಯನ್ನು ನಮ್ಮ ಕರ್ನಾಟಕ ಸರ್ಕಾರದವರು ಇವತ್ತು ಮಾಡುತ್ತಿದ್ದಾರೆ. ಬೇರೆ ಬೇರೆ ರಾಜ್ಯಗಳಿಗೆ ಈ ಹಗರಣದ ಬಗ್ಗೆ ಮಾಹಿತಿಯನ್ನು ಕರ್ನಾಟಕದ ಪೊಲೀಸರು ಕೊಟ್ಟಿದ್ದಾರೆ. ಚಂಡೀಗಡ್‌ನಲ್ಲಿ ಛಾಪಾ ಕಾಗದವನ್ನು ಸೀಜ್ ಮಾಡಿರುವ ಬಗ್ಗೆ ಕರ್ನಾಟಕದ ಪೊಲೀಸರು ಮಾಹಿತಿ ಕೊಡುತ್ತಾರೆ. ದೆಹಲಿಯಲ್ಲಿರುವ ಪೊಲೀಸರಿಗೆ ಕರ್ನಾಟಕದವರು ಮಾಹಿತಿ ಕೊಡುತ್ತಿದ್ದಾರೆ. ವೆಸ್ಟ್ ಬೆಂಗಾಲ್‌ನಲ್ಲಿರತಕ್ಕಂತಹ ಪೊಲೀಸ್ ಅಧಿಕಾರಿಗಳಿಗೆ ಕರ್ನಾಟಕದವರು ಮಾಹಿತಿ ಕೊಡುತ್ತಾರೆ. ಅಲ್ಲದೆ ತಮಿಳನಾಡಿನಲ್ಲಿರತಕ್ಕಂತಹ ಪೊಲೀಸ್

ಅಧಿಕಾರಿಗಳಿಗೆ ಕರ್ನಾಟಕದ ಪೊಲೀಸರು ಮಾಹಿತಿ ಕೊಡುತ್ತಾರೆ. Just we can appreciate the amount of interest they have shown in this matter. They have taken the interest of the Nation into consideration. It is not the question of only the interest of the State. They have taken the interest of the Nation into consideration. ಆದ್ದರಿಂದ ಕರ್ನಾಟಕ ಸರ್ಕಾರ ಇದುವರೆಗೆ ಮಾಡಿರತಕ್ಕಂತಹ ತಮ್ಮ ಜವಾಬ್ದಾರಿ ನಿರ್ವಹಣೆಯನ್ನು ವಿರೋಧಪಕ್ಷದವರು ಮೆಚ್ಚಬೇಕಾಗಿತ್ತು. ಆದರೆ ಹಾಗೆ ಇವರು ಮಾಡಲಿಲ್ಲ, ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಇದರಿಂದ ಜನಕ್ಕೆ ಏನು ನಡೆಯುತ್ತಿದೆಂಬುದು ಅರ್ಥವಾಗಿದೆ. ಕರ್ನಾಟಕ ಸರ್ಕಾರ ಏನು ಮಾಡುತ್ತಿದೆ ಅಂತ ಗೊತ್ತಾಗಿದೆ. ಇಂಥ ಒಬ್ಬ ದುಷ್ಟನನ್ನು ದಸ್ತಗಿರಿ ಮಾಡುವ ಧೈರ್ಯವನ್ನು ನಮ್ಮ ಕರ್ನಾಟಕದ ಪೊಲೀಸರು ಎಂತಹ ಕೆಲಸವನ್ನು ಮಾಡಿದ್ದಾರೆಂಬುದು ನಮ್ಮ ಇಡೀ ರಾಜ್ಯದ ಜನತೆಗೆ ಗೊತ್ತಿದೆ. ವಿಶೇಷ ನ್ಯಾಯಾಲಯವನ್ನು ಸರ್ಕಾರ ಸ್ಥಾಪನೆ ಮಾಡಿದೆ. Another milestone resolving this scam. ಬೇರೆ ಬೇರೆ ಕೋರ್ಟ್‌ಗಳಿದ್ದವು, ಒಂದು ಚಾರ್ಜ್‌ಶೀಟ್ ಹಾಕಿದ್ದರೆ ಬಿಟ್ಟು ಬಿಡಬಹುದಾಗಿತ್ತು. ವಿಶೇಷ ನ್ಯಾಯಾಲಯ ಸ್ಥಾಪನೆ ಮಾಡಿ ಯೆಂದು ವಿರೋಧ ಪಕ್ಷದವರು ಕೇಳಲಿಲ್ಲ. ಆದರೆ ಕರ್ನಾಟಕ ಸರ್ಕಾರ on its own, understanding the gravity of the offence. ಇವತ್ತು ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡತಕ್ಕಂತಹ ಕೆಲಸವನ್ನು ಮಾಡಿದೆ. The Special judge has been appointed by the Hon'ble High Court of Karnataka at the request of the Government of Karnatka. Staff Members are also provided. ಮಾನ್ಯ ವಿರೋಧ ಪಕ್ಷದ ನಾಯಕರು ಬೇರೆ ಯಾವುದೋ ಇಲಾಖೆಯಲ್ಲಿ ಕೊಟ್ಟಿದ್ದಾರೆ ಎನ್ನುವುದನ್ನು ಓದುತ್ತಿದ್ದರು ಅನ್ನುವುದನ್ನು ನಾನು ಕೇಳಿದೆ. The Government has written to the judiciary to make arrangements. It is their responsibility and duty. ಎಸ್ಟಾಬ್ಲಿಷ್‌ಮೆಂಟ್‌ಗೆ ಏನು ಬೇಕೋ ಅದನ್ನು ಮಾಡತಕ್ಕದ್ದು ರಾಜ್ಯಸರ್ಕಾರದ ಕರ್ತವ್ಯ, ಆದರೆ ಯಾವ ಜಡ್ಜ್ ಬೇಕು, ಯಾರನ್ನು ಅಲ್ಲಿ ನೇಮಕ ಮಾಡಬೇಕು ಎನ್ನುವ ಜವಾಬ್ದಾರಿ ನ್ಯಾಯಾಂಗ ಇಲಾಖೆಯದು. The Government cannot have its hand in that ಫೆಸಿಲಿಟೀಸ್ ಮಾಡತಕ್ಕಂಥದ್ದನ್ನು, ಆ ಜವಾಬ್ದಾರಿಯನ್ನು ರಾಜ್ಯಸರ್ಕಾರ ನಿರ್ವಹಿಸಿದೆ. ವಿಶೇಷ ಪ್ರಕರಣಗಳ ಬಗ್ಗೆ ವಿಶೇಷ ನ್ಯಾಯಾಲಯಗಳಲ್ಲಿ ವಿಚಾರಣೆ ಪ್ರಾರಂಭವಾಗುವುದನ್ನು ನಾವು ನೋಡುತ್ತಿದ್ದೇವೆ. ಈ ಹಂತದಲ್ಲಿ after nearly lapse of 1, 1/2 years the Union Government opened its eyes. They understood the gravity of the offience. ಈಗ ಮಾನ್ಯ ಜಸ್ವಂತ್‌ಸಿಂಗ್ ಅವರು ಪಾರ್ಲಿಮೆಂಟ್‌ನಲ್ಲಿ ಒಂದು ಹೇಳಿಕೆಯನ್ನು ನೀಡಿದರು, ಏನೆಂದರೆ ಇದು ರಾಜ್ಯ, ರಾಷ್ಟ್ರವ್ಯಾಪಿ ಸಮಸ್ಯೆಯಾಗಿರುವ ಕಾರಣ, ರಾಷ್ಟ್ರದ ಆರ್ಥಿಕ ವ್ಯವಸ್ಥೆಗೆ ಪೆಟ್ಟನ್ನು ಕೊಡತಕ್ಕಂತಹ ಒಂದು ದೊಡ್ಡ ಹಗರಣವಾಗಿರುವುದರಿಂದ ರಾಷ್ಟ್ರದ ಬಹುತೇಕ ರಾಜ್ಯಗಳಲ್ಲಿರತಕ್ಕಂತಹ ಸ್ಕ್ಯಾಮ್ ಆಗಿರುವುದರಿಂದ, ಎಲ್ಲಾ ರಾಜ್ಯಗಳ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಈ ಹಗರಣವನ್ನು They suggested for centralised investigation and prosecution agency. Ofcourse, their thinking may be right. We

don't dispute it. But the Government of Karnataka so far, till a decision is taken by the Union Government. They cannot simply keep quiet.ಕೇಂದ್ರ ಸರ್ಕಾರ ತನ್ನ ಕಣ್ಣನ್ನು ಬಿಟ್ಟು ಏನು ಮಾಡಬೇಕೆಂಬ ತೀರ್ಮಾನಕ್ಕೆ ಬರುವವರೆಗೆ ಕರ್ನಾಟಕ ಸರ್ಕಾರ ಸುಮ್ಮನೆ ಕೈಕಟ್ಟಿಕೊಂಡು ಕುಳಿತಿರಲಿಕ್ಕೆ ಆಗುವುದಿಲ್ಲ. Because, they are not hepless. They have got their own machinery. They have got their own police effective and they are doing good work. ಅವರು ಎಲ್ಲಿಯವರೆಗೆ ಈ ಹಗರಣವನ್ನು ತನಿಖೆ ಮಾಡಬಹುದು, ಚಾರ್ಜಶೀಟ್ ಹಾಕಬಹುದು, ಅರೆಸ್ಟ್ ಮಾಡಬಹುದು ಸೀಜರ್ ಮಾಡಬಹುದು, ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡಬಹುದು ಅಷ್ಟರವರೆಗೆ ಕರ್ನಾಟಕ ರಾಜ್ಯ ತನ್ನ ಪ್ರಾಮಾಣಿಕ ಕೆಲಸವನ್ನು ಮಾಡಿದೆ. Now the Central Government wants the centralised investigating agency and also prosecution agency to take it up. no objection. The Government of Kannataka is generous in declaring that they have no objection to hand-over the entire proceedings before the Central Government either to entrust to CBI or to do something. ನಮಗೆ ಮಾಹಿತಿ ಬಂದಿದ್ದು, ಪತ್ರಿಕೆಗಳಲ್ಲಿ ಓದಿದ್ದು, ಇಲ್ಲಿ ರಾಜ್ಯ ಸಚಿವ ಸಂಪುಟ ಕೂಡ ಆ ಕಡೆ ತೀರ್ಮಾನ ಮಾಡಿದೆ. I have got a copy of the Notification issued by the Government of Karnataka, exercising their powers u/s 6 of the Delhi Special Police Establishment Act. u/s 6, you are aware that the Government of Karnataka has to give its consent to hand-over the case to CBI. In pursuance of the decision taken by them by the cabinet, it is the bounded duty of the State Govt. of issue a Notification u/s 6 of the Act. Accordingly, I have got a copy of the Notification stating that, they have given their consent u/s 6 of the Act. What more we can expect from the Government of Karnataka? see, it is only after the Government of India, i.e. Union Government opened its eyes. Then only they started exercising their rights. ನೀವು ಮಾಹಿತಿಯನ್ನು ತೆಗೆದುಕೊಂಡು ಬನ್ನಿ, ನಾವು ಸೆಂಟ್ರಲೈಸ್ ವ್ಯವಸ್ಥೆಯಲ್ಲಿ ಒಂದು ತನಿಖೆಯನ್ನು ಮಾಡಿಸೋಣ. ಒಂದೇ ಒಂದು ಸೆಂಟ್ರಲ್ ಪ್ರಾಸಿಕ್ಯೂಷನ್ ಏಜೆನ್ಸಿ ಇರಲಿ, ಆಗ ಏನಾಗುತ್ತದೆಯೆಂದರೆ There cannot be any double jeopardy of the proceedings ಅಂತ ಒಂದು ತೀರ್ಮಾನಕ್ಕೆ ಬಂದ ಮೇಲೆ The Government of Karnataka readily agreed to hand-over the matter to the CBI and to act to the order of the Union Government. Accordingly notification is also issued.ಸರ್ಕಾರದ ಆದೇಶದ ಪ್ರತಿಯನ್ನು ಕೊಡುತ್ತೇನೆ.

4.50 ಪಿ ಎಂ

This shows the real concern of the Government of Karnataka in dealing with this matter. This shows the bonafides of the Government

of Karnataka. ಈ ಒಂದು ರಾಷ್ಟ್ರವ್ಯಾಪ್ತಿ ಇರತಕ್ಕಂಥ ಒಂದು ಹಗರಣದ ಬಗ್ಗೆ ಬೇರೆ ಯಾವುದೇ ರಾಜ್ಯವೂ ಕೂಡ ತನ್ನ ಕಣ್ಣನ್ನು ತೆರೆಯುವುದಕ್ಕೆ ಮುಂಚೆ ಕರ್ನಾಟಕ ರಾಜ್ಯ ಕಣ್ಣುತೆರೆದು ಈಹಗರಣದ ಬಗ್ಗೆ ಕೂಲಂಕಷವಾಗಿ ವಿಚಾರಣೆ ಮಾಡಿ ಅದರ ಪ್ರಮುಖ ಆರೋಪಿಯನ್ನು ದಸ್ತಗಿರಿ ಮಾಡಿ ಈ ಹಗರಣದ ಬಗ್ಗೆ ತನಿಖೆ ನಡೆಸಿ ಆರೋಪ ಪಟ್ಟಿಯನ್ನು ಸಲ್ಲಿಸಿ ಈ ಹಗರಣದ ವಿಚಾರಣೆಗಾಗಿ ವಿಶೇಷ ನ್ಯಾಯಾಲಯವನ್ನು ಸ್ಥಾಪನೆ ಮಾಡಿ ಇವತ್ತು ಕೇಂದ್ರ ಸರ್ಕಾರದ ಕೋರಿಕೆ ಮೇರೆಗೆ ಈ ಪ್ರಕರಣವನ್ನು ಕೇಂದ್ರಸರ್ಕಾರದ ವ್ಯಾಪ್ತಿಯಲ್ಲಿ ಬರತಕ್ಕಂಥ ಸಿ.ಬಿ.ಐ.ಗೆ ಒಪ್ಪಿಸತಕ್ಕಂಥ ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿರತಕ್ಕಂಥ ಕರ್ನಾಟಕ ರಾಜ್ಯ ಸರ್ಕಾರ ನಿಜವಾಗಿಯೂ ಅಭಿನಂದನಾರ್ಹ ಮತ್ತು ಇದಕ್ಕಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ಇದು ನೈಜ ಸಂಗತಿ. ನೀವು ಬರೇ ಪೇಪರ್‌ನಲ್ಲಿ ಯಾವ ಸೀರಿಯಲ್, ಪೇಪರ್, ಪ್ರೆಸ್ ಅಂತ ಹೇಳಿ ಇದರಲ್ಲಿ ಜನಗಳನ್ನು ಮೋಸ ಮಾಡುವುದಕ್ಕೆ ಆಗುವುದಿಲ್ಲ. ಸತ್ಯಾಸತ್ಯತೆಗಳನ್ನು ಜನರ ಮುಂದಿಟ್ಟು ನಿಮ್ಮ ಕರ್ತವ್ಯಗಳೇನು ಎಂಬುದನ್ನು ಹೇಳಬೇಕಾಗುತ್ತದೆ. what are the duties and responsibilities of the opposition? What is the role played by you? How you have convinced the Union Government to intervene in this matter? How you have questioned the Union Government as to why they have kept over the matter for more than 1 1/2 years even after they have made known about this scam by the Government of Karnataka? ಇದೆಲ್ಲಾ ನೀವು ಮಾಡದೇಹೋದರೆ ಇಲ್ಲಿ ಕುಳಿತುಕೊಂಡು ಏನೋ ಒಂದು ಹೀಗೆ ಮಾಡಿದಿರಿ, ಯಾರನ್ನೋ ಉಳಿಸುವುದಕ್ಕೆ ಹೋಗಿದ್ದೀರಿ ಎಂದರೆ ಯಾರನ್ನು ಉಳಿಸಿದ್ದಾರೆ ಸ್ವಾಮಿ? ಯಾರನ್ನು ಉಳಿಸಿದ್ದಾರೆಂದು ಹೇಳಿ ನೋಡೋಣ. ಕರೀಂಲಾಲ್‌ನಂಥ ಕಿಂಗ್‌ಪಿನ್‌ನನ್ನು ಅರೆಸ್ಟ್ ಮಾಡಿದ್ದಾರೆ. ಒಬ್ಬ ಇನ್ನ್ಯಾವನೋ ಕಾಂಜಿಪಿಂಜಿಯನ್ನು ಅರೆಸ್ಟ್ ಮಾಡಿಕೊಂಡು ಅರೆರೆ, ನಾವು ಒಂದು ಹಗರಣದ ಇನ್ವೆಸ್ಟಿಗೇಶನ್ ಮಾಡಿದ್ದೇವೆ, ಅರೆಸ್ಟ್ ಮಾಡಿದ್ದೇವೆ ಎಂದು ಹೇಳಿಲ್ಲ. ಇವತ್ತು ಅವನ ಜೊತೆಯಲ್ಲಿ ಎಂತಿಂಥವರು ಬೇರೆಬೇರೆ ರಾಜ್ಯಗಳವರು ಲಿಂಕ್ ಆಗಿದ್ದಾರೆ ಎಂಬುದನ್ನು ನೋಡುವಾಗ ಇಂತಹ ಒಬ್ಬ ಕಿಂಗ್‌ಪಿನ್‌ನನ್ನು ಅರೆಸ್ಟ್ ಮಾಡತಕ್ಕಂಥ ಧೈರ್ಯವನ್ನು ಇವತ್ತು ನಮ್ಮ ಕರ್ನಾಟಕ ಪೊಲೀಸರು ಮಾಡಿದ್ದಾರೆ. ಇದನ್ನು ನಾವು ಮೆಚ್ಚಬೇಕಾಗುತ್ತದೆ. People connected to this India security press they are arrested. The General Manager of another press which the Union Government is holding at Hyderabad was also arrested. How they were all arrested? Who gave the information? Who is responsible for their arrest? Who gave the materials for their arrest? It is the Karnataka Police.ಕರ್ನಾಟಕ ಪೊಲೀಸರು ಕೊಟ್ಟು ಮಾಹಿತಿಯ ಆಧಾರದ ಮೇಲೆ ನಾಸಿಕ್‌ನಲ್ಲಿ ಇರತಕ್ಕಂಥ ಪ್ರಿಂಟಿಂಗ್ ಪ್ರೆಸ್‌ನ ಅಧಿಕಾರಿಗಳು ಏನಿದ್ದಾರೆ, ಅವರ ದಸ್ತಗಿರಿ ಆಯಿತು. ಕರ್ನಾಟಕ ಪೊಲೀಸಿನವರು ಕೊಟ್ಟ ಮಾಹಿತಿಯ ಆಧಾರದಮೇಲೆ ಬೇರೆಬೇರೆ ರಾಜ್ಯಗಳಲ್ಲಿ ಇರತಕ್ಕಂಥ ಖದೀಮರ ಅರೆಸ್ಟ್ ಆಯಿತು. ಮತ್ತು ಫೇಕ್ ಸ್ಟಾಂಪ್ ಪೇಪರ್ಸ್ ಸೀಜ್ ಆಯಿತು. ಇಷ್ಟೆಲ್ಲಾ ಈ ಹಗರಣದ ಸಂಪೂರ್ಣವಾದಂಥ ಮಾಹಿತಿಯನ್ನು ಕೊಡತಕ್ಕಂಥಾದ್ದಕ್ಕೆ ಕರ್ನಾಟಕದ ಪೊಲೀಸರು

ಕರೀಂಲಾಲ್ ತೇಲಗಿಯನ್ನು ದಸ್ತಗಿರಿ ಮಾಡಿದ್ದರಿಂದ ಈ ಎಲ್ಲಾ ಮಾಹಿತಿಗಳನ್ನು ಕೂಡ ಬೇರೆಬೇರೆ ರಾಜ್ಯಗಳಲ್ಲಿ ಪಡೆಯುವುದಕ್ಕೆ ಅವಕಾಶ ಆಯಿತು.

ಛೇರ್ಮನ್ : ಮಾನ್ಯ ಮುದ್ದಹನುಮೇಗೌಡರೇ, ಇನ್ನು ಎಷ್ಟು ಹೊತ್ತಿನವರೆಗೆ ಮಾತನಾಡುತ್ತೀರಿ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ತಾವು ಎಷ್ಟು ಹೊತ್ತು ಕೊಡುತ್ತೀರಿ ಅಷ್ಟು ಹೊತ್ತು ನಾನು ಮಾತನಾಡುತ್ತೇನೆ.

ಛೇರ್ಮನ್ : ನಿಮಗೆ ಟೈಮ್ ಅಲಾಟ್ ಮಾಡಿದ್ದಾರೆ. ನೀವು ನಿಮ್ಮ ಟೈಮ ಮೀರಿ ಹೋಗುತ್ತಿದ್ದೀರಿ. ಇನ್ನೂ ತುಂಬಾ ಜನ ಮಾತನಾಡುವವರು ಇದ್ದಾರೆ. ಇವತ್ತು ಚರ್ಚೆ ಆರುಗಂಟೆಯವರೆಗೆ ನಿಗದಿಪಡಿಸಿದ್ದೇವೆ. ನಾಳೆಗೆ ಚರ್ಚೆ ಇಲ್ಲವೇ ಇಲ್ಲ. ಇವತ್ತು ಆರುಗಂಟೆಗೆ ಮುಕ್ತಾಯವಾಗಬೇಕು. ಟೈಮ್ ಬಗ್ಗೆ ಮಾತನಾಡುವವರು ನೀವೇ ಸ್ವಲ್ಪ ಕಡಿವಾಣ ಹಾಕಿಕೊಂಡರೆ ಒಳ್ಳೆಯದು; ಈಗ ತಾವು ಹೇಗಿದ್ದರೂ ಹೇಳುವಂತಹ ಎಲ್ಲಾ ಪಾಯಿಂಟ್ಸ್‌ನ್ನು ಹೊರಹಾಕಿದ್ದೀರಿ.

ಶ್ರೀ ಶಿವಾನಂದ ಎಸ್. ಪಾಟೀಲ್ : ಒಂದು ನಿಮಿಷ. I am on point of order. Since you have already placed that statement, letter of the Chief Minister, which has been written to Central Finance Minister, it has become a property of House. Let us know the fact what he has written in that?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ನ್ಯಾಯಾಲಯದ ಮುಂದೆಯೇ ಇಟ್ಟಿದ್ದಾರೆ.

SRI SHIVANANDA S.PATIL : It has become a property of House.

SRI S.P. MUDDAHANUME GOWDA : It is already filed before the Hon'ble Supreme Court in the form of affidavit.

SRI SHIVANANDA S. PATIL : It is available to the Members of the House...

SRI S.P. MUDDAHANUME GOWDA : It is a public document. I am prepared to give the copy of that letter to you. It is not a confidential letter. It is a public document. ರಾಷ್ಟ್ರದ ಸೆಕ್ಯುರಿಟಿ ಬಗ್ಗೆ ಒಂದು ಸರ್ಕಾರ ನಿಮಗೆ ಬರೆದು ಸ್ವಾಮಿ, ಸ್ವಲ್ಪ ಕಣ್ಣುಬಿಟ್ಟು ನೋಡಿ; ಹೀಗೆಲ್ಲಾ ಆಗುತ್ತಾ ಇದೆ ಅಂತ ಹೇಳಿದರೆ, ಕಣ್ಣುಮುಚ್ಚಿ ಕುಳಿತುಕೊಂಡು ಈಗ ಈ ಕಾಪಿ ಕೊಡಿ, ಆ ಕಾಪಿ ಕೊಡಿ ಅಂತ ಕೇಳಿದರೆ ಇದಕ್ಕೆ ಏನು ಹೇಳಬೇಕು? what bonafides you have got?

ಶ್ರೀ ಶಿವಾನಂದ ಎಸ್. ಪಾಟೀಲ್ : ನಾನು ಅಕಾಡೆಮಿಕ್ ಇಂಟರೆಸ್ಟ್‌ನಿಂದ ಕೇಳಿದ್ದು ಅಷ್ಟೆ. ಯಾರು ಸುಮ್ಮನೆ ಕೊತಿದ್ದಾರೋ, ಕೆಲಸ ಮಾಡಿದ್ದಾರೋ ಅದು ಬೇಡ; ಈಗಾಗಲೇ ನೀವು ಹೌಸ್ ಮುಂದೆ ಪ್ಲೇಸ್ ಮಾಡಿದ್ದೀರಿ. Just let us know the fact in that letter.

SRI S.P. MUDDAHANAUME GOWDA : Definitely I will give copy. ಮಾನ್ಯ ಅಧ್ಯಕ್ಷರೇ, one serious allegation was made by the opposition

that there is some delay in handinf over the matter to the CBI. ಇದೊಂದು ಗಂಭೀರವಾದ ಆಪಾದನೆ ಇದ್ದು, ಇದಕ್ಕೆ ನನ್ನದು ಉತ್ತರ ಎರಡು ಕಾರಣಗಳಿಂದ. ಇದು ಡಿಲೇ ಅಲ್ಲ. It is not delay. The Government of Karnataka is justified in taking decision now to hand-over the matter to CBI on two grounds. ಒಂದು, ಉಪ್ಪಾರಪೇಟೆಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಆದಾಗ ಇದರ ಬಗ್ಗೆ ಇನ್ವೆಸ್ಟಿಗೇಷನ್ ಪ್ರಾರಂಭ ಮಾಡಿ, ಆರೋಪಿಯನ್ನು ದಸ್ತಗಿರಿ ಮಾಡಿ ಅವರಿಗೆ ಸಿಕ್ಕಿದಂಥ ಮಾಹಿತಿಗಳ ಆಧಾರದ ಮೇಲೆ ಇನ್ವೆಸ್ಟಿಗೇಷನ್ ಮಾಡತಕ್ಕಂಥ ಅಧಿಕಾರ ನಮ್ಮ ಪೊಲೀಸರಿಗೆ ಇದೆ. and they have sincerely and effectively done it.ಇದು ಒಂದು All along right from the date of registration of the case at Upparpet till a decision is taken by the Cabinet to hand-over the matter to CBI, our Police did not keep quite. All along, they have been very active. They have collected lot of information. They have transmitted lot of information to the Union Government, various departments and various police people

ಶ್ರೀ ಎಸ್.ಎಸ್. ಪಾಟೀಲ್ : ಇವರನ್ನು ಮಂತ್ರಿಗಳಾಗಿ ಯಾವಾಗ ಮಾಡಿದ್ದಾರೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಪಾಟೀಲರೇ, ತಾವು ಹಿರಿಯ ಸದಸ್ಯರು. ಇಲ್ಲಿ ಭಾಷಣ ಮಾಡುವವರೆಲ್ಲಾ ಮಂತ್ರಿಗಳು ಆಗಬೇಕು ಅಂತಾನಾ?

ಶ್ರೀ ಎಸ್. ಎಸ್. ಪಾಟೀಲ್ : ಸರ್ಕಾರ ಏನು ಉತ್ತರ ಕೊಡಬೇಕೋ ಅದನ್ನು ಕೊಡುವುದಕ್ಕೆ ನೀವು ಶುರು ಮಾಡಿದ್ದೀರಿ. ನೀವು ಮಾತನಾಡಿ, ನಾನು ಬೇಡ ಅನ್ನುವುದಿಲ್ಲ. ಆದರೆ ಉತ್ತರವನ್ನೇ ಶುರುಮಾಡಿಬಿಟ್ಟಿದ್ದೀರಲ್ಲಾ?

(ಗೊಂದಲ)

ಛೇರ್ಮನ್ : ನೀವು ಐದು ಗಂಟೆಗೆ ನಿಲ್ಲಿಸುತ್ತೀರಾ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೇ, ಏನು ಒಂದೂವರೆ ವರ್ಷ–ಎರಡು ವರ್ಷ ಕಾಲದಿಂದ ಇದು ಸಿ.ಬಿ.ಐ.ಗೆ ವಹಿಸಬೇಕು ಎನ್ನುವವರೆಗೆ ನಮ್ಮ ಸ್ಥಳೀಯ ಪೊಲೀಸರು – under the leadership of Srikumar, all along they were very active and they have collected lot of information that I do not want to repeat it. ಇದು ಒಂದು. ಎರಡನೆಯದು..Similar request was made before the Hon'ble High Court of Karnataka and aslo Hon'ble High Court of Maharashtra. Before the matter was raised before the Supreme Court, such requests were made before the Hon,ble High Court of Karnataka and also hon'ble High Court of Maharashta. But these two High Courts, they rejected the request to hand-over the matter to the CBI. It is not at the instance of the Government of Karnatka or at the Government of Maharashtra. It is judiciary that turned down the request. ಈವೊಂದು ಪ್ರಕರಣ

ಬಹಳ ಅತ್ಯಂತ ಪರಿಣಾಮಕಾರಿಯಾಗಿ ತನಿಖೆಯಾಗುತ್ತಾ ಇರುವುದರಿಂದ ಇದರ ತನಿಖೆಯನ್ನು ಸಿ.ಬಿ.ಐ.ಗೆ ವಹಿಸಿತಕ್ಕಂಥ ಅಗತ್ಯತೆ ಇಲ್ಲವೆಂದು ಮಹಾರಾಷ್ಟ್ರದ ಉಚ್ಚನ್ಯಾಯಾಲಯ ಹೇಳುತ್ತದೆ. ಅದೇ ರೀತಿ ಕರ್ನಾಟಕದ ಉಚ್ಚನ್ಯಾಯಾಲಯ ಕೂಡ ಹೇಳಿದೆ. But that is not the base for us to refuse the matter to the CBI. ಹಾಗಾದರೂ ಇವತ್ತು ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರದಿಂದ ಈ ಒಂದು entire issueವನ್ನು ರಾಷ್ಟ್ರದ ಹಿತದೃಷ್ಟಿಯಿಂದ Centralised Investigating Agency and Centralised Prosecution Agencyಯ ವ್ಯಾಪ್ತಿಯಲ್ಲಿ ತರಬೇಕು ಎನ್ನುವಂಥ ನಿರ್ಧಾರವನ್ನು ಮಾಡಿದಾಗ ಇವತ್ತು ರಾಜ್ಯಸರ್ಕಾರ ಒಪ್ಪಿಕೊಂಡಿರತಕ್ಕಂಥಾದ್ದು ಮತ್ತು ಇದುವರೆಗೂ ನಡೆದಿರತಕ್ಕಂಥ ಪ್ರಾಮಾಣಿಕವಾದ ಅವರ ನಡತೆಯನ್ನು ನೋಡಿದಾಗ ಬಹುಶ: ಈ ರಾಷ್ಟ್ರದಲ್ಲಿ ಯಾವ ಸರ್ಕಾರ ಕೂಡ ಮಾಡದೇ ಇರತಕ್ಕಂಥ ಒಂದು ಮುಕ್ತವಾದಂಥ ಕೆಲಸವನ್ನು ಪ್ರಪ್ರಥಮಬಾರಿಗೆ ಇಂತಹ ಒಂದು ಬೃಹತ್ ಮಟ್ಟದ ಹಗರಣವನ್ನು ಯಶಸ್ವಿಯಾಗಿ ಭೇದಿಸುವಲ್ಲಿ ಕರ್ನಾಟಕ ಸರ್ಕಾರ ಯಶಸ್ಸನ್ನು ಕಂಡಿದೆ ಎನ್ನುವ ಮಾತನ್ನು ಹೇಳುತ್ತಾ ಮಾನ್ಯ ಸೋಮಶೇಖರ್ ಅವರು ಇಲ್ಲ ಆದರೂ ಕೂಡ ಅವರು ಹೇಳಿರುವ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ಸ್ಟ್ಯಾಂಪ್ ಆಕ್ಟ್‌ನಲ್ಲಿ ನಾವು ಸುಧಾರಣೆಯನ್ನು ತರುತ್ತಿದ್ದೇವೆಂದು ಅವರು ಹೇಳಿಕೊಂಡರು. It is not so, ಕರ್ನಾಟಕ ಸ್ಟ್ಯಾಂಪ್ ಆಕ್ಟ್‌ನಲ್ಲಿ ಯಾವ ಸುಧಾರಣೆಯನ್ನೂ ಅವರು ತರಲಿಲ್ಲ. ಇಂತಹ ಒಂದು ನಕಲಿ ಛಾಪಾ ಕಾಗದಗಳು ಪ್ರಾರಂಭವಾಗಿದೆ ಎನ್ನುವ ಒಂದು ಮಾಹಿತಿ ಅವರಿಗೆ ಬಂದ ಮೇಲೆ ಇನ್‌ವೆಸ್ಟಿಗೇಷನ್‌ನ್ನು ಸಿಓಡಿ ಯಿಂದಲೋ ಏನೋ ಮಾಡಿಸಿ ಕೈತೊಳೆದುಕೊಳ್ಳುವ ಪ್ರಯತ್ನವನ್ನು ಮಾಡಿದರೇ ವಿನಹ: ಇದಕ್ಕೆ ಪರ್ಯಾಯವಾಗಿ ಈ ನಕಲಿ ಛಾಪಾ ಕಾಗದದ ಹಾವಳಿಯನ್ನು ತಪ್ಪಿಸತಕ್ಕಂಥ ಪರ್ಯಾಯವಾದ ಒಂದು ವ್ಯವಸ್ಥೆಯನ್ನು ಮಾಡತಕ್ಕಂಥ ಪ್ರಾಮಾಣಿಕವಾದ ಚಿಂತನೆಯನ್ನು ಹಿಂದಿನ ಸರ್ಕಾರ ಮಾಡಲಿಲ್ಲ. ಆದರೆ ಇವತ್ತು ನಮ್ಮ ಸರ್ಕಾರ ಬಂದಮೇಲೆ ಕರ್ನಾಟಕ ಸ್ಟ್ಯಾಂಪ್ ಆಕ್ಟ್ ಸುಧಾರಣೆಯನ್ನು ತರುವುದರ ಜೊತೆಗೆ ಸಂಪೂರ್ಣವಾಗಿ ಛಾಪಾ ಕಾಗದವನ್ನು ಬ್ಯಾನ್ ಮಾಡಿರತಕ್ಕಂಥದ್ದು, ಅದು ಏನಾಗಿದೆ ಎಂದರೆ, ಈಗ ನಕಲಿ ಛಾಪಾ ಕಾಗದಗಳು ಹಾಗೂ ಸ್ಟ್ಯಾಂಪ್‌ಗಳಿದ್ದರೆ ಆಗ ನಕಲಿ ಛಾಪಾ ಕಾಗದಗಳ ಪ್ರಶ್ನೆ ಬರುತ್ತದೆ. ಸಂಪೂರ್ಣವಾಗಿ ಸ್ಟ್ಯಾಂಪ್‌ಗಳನ್ನು ಅದನ್ನು ಬ್ಯಾನ್ ಮಾಡಿದ್ದರಿಂದ ಈ ನಕಲಿ ಛಾಪಾ ಕಾಗದಗಳ ಪ್ರಶ್ನೆಯೇ ಇಲ್ಲ. ಹೀಗಾಗಿ ಇವತ್ತು ಏನಾಗಿದೆ ನಮ್ಮ ಸರ್ಕಾರ ಸಂಪೂರ್ಣವಾಗಿ ನಕಲಿ ಛಾಪಾ ಕಾಗದವನ್ನು ನಿಗ್ರಹಿಸುವಲ್ಲಿ ಈ ಛಾಪಾ ಕಾಗದದ ವ್ಯವಸ್ಥೆಯನ್ನು ಅಳಿಸಿ ಇವತ್ತು ಸ್ಟ್ಯಾಂಪ್ ಆಕ್ಟ್‌ನಲ್ಲಿ ಒಂದು ಸುಧಾರಣೆಯನ್ನು ತಂದಿರತಕ್ಕಂಥದ್ದು ಈ ಸರ್ಕಾರದ ಕೀರ್ತಿಯಾಗಿದೆ. Just I wanted to know, I got the information from the concerned departments. ಈ ಒಂದು ನಕಲಿ ಛಾಪಾ ಕಾಗದವನ್ನು ನಿಗ್ರಹಿಸುವಲ್ಲಿ ಕರ್ನಾಟಕ ಸರ್ಕಾರ ಈ ಒಂದು ಸ್ಟ್ಯಾಂಪ್ ಪೇಪರ್ ಇರತಕ್ಕಂಥ ವ್ಯವಸ್ಥೆಯನ್ನು ಬದಲು ಮಾಡಿ ಅದರ ಹಣವನ್ನು ಬ್ಯಾಂಕಿನಲ್ಲಿ ಕಟ್ಟತಕ್ಕಂಥ ಅಥವಾ ಕೋರ್ಟಿಗೆ ಡಿಪಾಸಿಟ್ ಮಾಡತಕ್ಕಂಥ ಒಂದು ವ್ಯವಸ್ಥೆಯನ್ನು ತಂದಿರುವುದರಿಂದ ನಮ್ಮ ರಾಜ್ಯದ ಆರ್ಥಿಕ ವ್ಯವಸ್ಥೆಯ ಮೇಲೆ ಯಾವುದಾದರೂ ದುಷ್ಪರಿಣಾಮ ವಾಗಿದೆಯೇ ಅಥವಾ ನಮಗೆ ಬರತಕ್ಕಂಥ ರೆವಿನ್ಯೂ ಏನಾದರೂ ಕಡಿಮೆಯಾಗಿದೆಯೇ ಎನ್ನುವುದರ ಬಗ್ಗೆ ನಾನು ಮಾಹಿತಿಯನ್ನು ಕಲೆಕ್ಟ್ ಮಾಡಿಕೊಂಡಾಗ, I am happy to say you Sir, that there is

considerable increase of revenue even after the Government of Karnataka banned this stamp paper system. ಈ ಒಂದು ಸ್ಟ್ಯಾಂಪ್ ಆಕ್ಟ್‌ಗೆ ಸುಧಾರಣೆಯನ್ನು ತಂದರೂ ಕೂಡ ನಮ್ಮ ರಾಜ್ಯದ ರಾಜಸ್ವದಲ್ಲಿ ಗಣನೀಯವಾದ ಒಂದು ಏರಿಕೆಯನ್ನು ನೋಡಿದಾಗ, ಇವತ್ತು ಸರ್ಕಾರ ಈ ಒಂದು ಹಗರಣವನ್ನು ನಿಗ್ರಹ ಮಾಡತಕ್ಕಂಥದ್ದು ಈ ಹಗರಣವನ್ನು ಕಂಡು ಹಿಡಿಯತಕ್ಕಂಥ ಪ್ರಯತ್ನ ಮತ್ತೆ ಈ ಒಂದು ಛಾಪಾ ಕಾಗದಕ್ಕೆ ಪರ್ಯಾಯವಾದ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಹೊರಟಿರುವುದು ಇವೆಲ್ಲವನ್ನು ನಾವು ನೋಡಿದಾಗ ಕರ್ನಾಟಕ ಸರ್ಕಾರ ನಿಜವಾಗಲೂ ಕೂಡ ಮೆಚ್ಚುಗೆಗೆ ಪಾತ್ರವಾಗತಕ್ಕಂಥದ್ದು, ಇವತ್ತು ಕೇಂದ್ರ ಸರ್ಕಾರ ಈ ಹಗರಣದ ಮಾಹಿತಿಯನ್ನು ಪಡೆದಾಗಲೂ ಕೂಡ ಕಿವುಡರಂತೆ ವರ್ತಿಸಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಈ ಒಂದು ವ್ಯವಸ್ಥೆ ಇಡೀ ರಾಷ್ಟ್ರದಲ್ಲಿ ಎಲ್ಲಾ ಕಡೆ ಹರಡಲಿಕ್ಕೆ ಇವತ್ತು ಕೇಂದ್ರ ಸರ್ಕಾರವೇ ಹೊಣೆ. ಅವರೇ ಇದಕ್ಕೆ ಕಾರಣ, ಅದರ ನೈತಿಕ ಜವಾಬ್ದಾರಿಯನ್ನು ಕೇಂದ್ರ ಸರ್ಕಾರವೇ ಹೊರಬೇಕೆಂದು ಹೇಳಿ, ಈ ಒಂದು ವಿಚಾರದಲ್ಲಿ ನನಗೆ ತಿಳಿದಿರತಕ್ಕಂಥ ಮಾತನ್ನು ಹೇಳುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಿರುವುದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಒಂದು ನಿಮಿಷ, ಜನತಾದಳ (ಎಸ್) ಮತ್ತು ಜನತಾದಳ (ಯು), ಅವರು ಯಾರಾದರೂ ಇಲ್ಲಿ ಇದ್ದಾರೆಯೇ? ಒಟ್ಟು 7 ಹೆಸರುಗಳು ಇವೆ. ಮಾನ್ಯ ಸದಸ್ಯರುಗಳಾದ ಪಿ.ಜಿ.ಆರ್. ಸಿಂಧ್ಯಾ, ಬಿ.ಎನ್. ಬಚ್ಚೇಗೌಡ, ಚಲುವರಾಯಸ್ವಾಮಿ, ಕೃಷ್ಣಮೂರ್ತಿಯವರು, ಅಮರೇಗೌಡ ಬಯ್ಯಾಪೂರ ರವರು ಚನ್ನಿಗಪ್ಪನವರು ಕೆ.ಎಂ. ಕೃಷ್ಣಮೂರ್ತಿಯವರು, ಮಾನ್ಯ ಸುರೇಶ್ ಕುಮಾರ್‌ರವರು ಈಗ ಮಾತನಾಡಬಹುದು.

†**ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ)** : ಮಾನ್ಯ ಛೇರ್ಮನ್‌ರವರೆ, ನಾವು ಇಷ್ಟು ಹೊತ್ತು ಇಡೀ ದೇಶದ ಗಮನ ಸೆಳೆದು, ಆ ಒಂದು ನಕಲಿ ಛಾಪಾ ಕಾಗದದ ಬಗ್ಗೆ ನನ್ನ ಹಿರಿಯ ಸ್ನೇಹಿತರಾದ ಶ್ರೀ ಎಸ್.ಪಿ. ಮುದ್ದಹನುಮೇಗೌಡರ ವಿಚಾರವನ್ನು ನಾವು ಇಲ್ಲಿ ಕೇಳಿದ್ದೇವೆ. ಅವರು ಬಹಳ ಭಾವನಾತ್ಮಕವಾಗಿ ಟೇಬಲ್‌ನ್ನು ಗುದ್ದಿಕೊಂಡು ಇವತ್ತು ಮಾತನಾಡಿದರು. ನಾನು ಇದುವರೆಗೂ ಕೇಳಿರಲಿಲ್ಲ ಮತ್ತು ನೋಡಿರಲಿಲ್ಲ. ಅವರು ಹಾಗೆ ಮಾತನಾಡುವಾಗ ನನಗೆ ನೆನಪಿಗೆ ಬಂದಿದ್ದು ಸುಪ್ರೀಂಕೋರ್ಟಿನಲ್ಲಿ ಒಂದು ಸಲ ಚೀಫ್ ಜಸ್ಟೀಸ್ ಚಂದ್ರಚೂಡ್‌ರವರು ಅವರ ಮುಂದೆ ಫ್ರಾಂಕ್ ಅಂಥೋನಿಯವರು ಹೀಗೆ ಮಾತನಾಡಿದರಂತೆ, ಆಗ ಚಂದ್ರಚೂಡರವರು ಹೇಳಿದರಂತೆ, Mr. Anthony, if you have facts you hammer the facts. As you are not having the facts, you are hammering the table before you.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಛೇರ್ಮನ್‌ರವರೆ ನನ್ನ ಮಾತಿಗೆ ನೀವು ಸಬ್‌ಸ್ಟ್ಯಾನ್ಸಿಯೇಟ್ ಮಾಡಿ, I have hammered the table with facts.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಛೇರ್ಮನ್ ರವರೆ, ನಾನು ಈಲ್ಡ್ ಆಗಿರುವುದಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಈಲ್ಡ್ ಆಗುವುದಕ್ಕೆ ದೊಡ್ಡತನ ಗೊತ್ತಿದ್ದರೆ, ತಾನೇ ನಿಮಗೆ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಛೇರ್ಮನ್ ರವರೆ ಮೊದಲನೆಯದಾಗಿ ಕರೀಂಲಾಲಾ ಮಹಾರಾಷ್ಟ್ರದವರು ಅಲ್ಲ, ಕರೀಂಲಾಲಾ ಕರ್ನಾಟಕ ರಾಜ್ಯದ ಬಿಜಾಪುರ ಜಿಲ್ಲೆಯ

ತೇಲಗಿ ಗ್ರಾಮದವನು, ಹೊಯಿತಾ ಸ್ವಾಮಿ, ಅವನು ವ್ಯಾಪಾರ ಮಾಡುತ್ತಿದ್ದದ್ದು ಬೆಳಗಾಂ ಜಿಲ್ಲೆಯ ಖಾನಾಪುರದಲ್ಲಿ ಎರಡನೆಯದು ಹೊಯಿತಾ, ಹಲಸಿನ ಹಣ್ಣಿನ ವ್ಯಾಪಾರ, ಮೂರನೆಯದು ಅವನಿಗೆ ಲೈಸೆನ್ಸ್ ಕೊಟ್ಟಿದ್ದೂ ಕೂಡ ನಮ್ಮ ನೆರೆ ರಾಜ್ಯದವರು. ಆ ಲೈಸೆನ್ಸ್‌ನ್ನು ಯಾರು ಕೊಟ್ಟಿರುವುದು ಎನ್ನುವುದರ ಬಗ್ಗೆ ಮುಂದೆ ಗೊತ್ತಾಗುತ್ತದೆ. ಒಂದು ರೀತಿ ಈ ನಕಲಿ ಛಾಪಾ ಕಾಗದ ಏನಿದೆ. ಇದೊಂದು ಅಕ್ಟೋಪಸ್ ತರಹ ಆಗುತ್ತಿದೆ. ಆ ಅಕ್ಟೋಪಸ್‌ದು ಟೆಂಟೆಕಲ್ಸ್, ಯಾವ್ಯಾವ ರಾಜಕಾರಣಿಯನ್ನು ಯಾವ್ಯಾವ ಅಧಿಕಾರಿಯನ್ನು, ನಾನು ಕೇಳಲ್ಪಟ್ಟೆ ಮಾನ್ಯ ಛೇರ್ಮನ್‌ರವರೆ, ಕೆಲವು ಪತ್ರಿಕಾ ಕರ್ತರನ್ನೂ ಕೂಡ ಆ ಟೆಂಟೆಕೆಲ್ಸ್ ಇಷ್ಟರಲ್ಲಿಯೇ ಹಿಡಿಯುತ್ತದೆ ಎಂದು. ಇದು ಬಹಳ ಆಶ್ಚರ್ಯ, ಒಂದು ರೀತಿಯಿಂದ ರಾಜಕಾರಣಿ, ಅಧಿಕಾರಿ ಮತ್ತು ಅಪರಾಧಿ ಇವರ ನಡುವಿನ ನೆಕ್ಸೆಸ್ ಏನು ಎನ್ನುವುದರ ಬಗ್ಗೆ ಈ ಪ್ರಕರಣ ನಮಗೆ ಈವತ್ತು ತೋರಿಸುತ್ತದೆ. ಈ ಪ್ರಕರಣದ ಬಗ್ಗೆ ನಾವು ಇಲ್ಲಿ ಮಾತನಾಡುವುದಕ್ಕೆ ತಾವು ಹೇಳಿದಿರಿ, ಖಂಡಿಸಿ, ನಿಂದಿಸಿ ಎಲ್ಲಾ ಭಾಷಣಗಳಾಗಿವೆ. ಅದರ ಬಗ್ಗೆ ನಿಜವಾಗಲೂ ಮಾತನಾಡುವಾಗ ನಮಗೇನೂ ಆನಂದ ತರುವುದಿಲ್ಲ. ಈ ರೀತಿಯಾದ ಒಂದು ಪ್ರಕರಣವಾಗಿ ದೇಶದ ಆರ್ಥಿಕ ವ್ಯವಸ್ಥೆಗೆ ಧಕ್ಕೆ ಬರುವಂಥ ಒಂದು ಪ್ರಸಂಗವಾಗಿರುವುದು ನಮ್ಮ ಕಣ್ಣಿದುರುಗಡೆಯೇ ಯಾರ‍್ಯಾರೋ ವ್ಯಕ್ತಿಗಳು ಸಿಲುಕುತ್ತಾ ಹೋಗುತ್ತಿರುವುದು, ಯಾರ‍್ಯಾರ ಮೇಲೋ ಗುಮಾನಿ ಬಂದಿರುವುದು. ಇದು ಒಂದು ದೇಶದ ಆರೋಗ್ಯಕ್ಕೆ ಒಳ್ಳೆಯದಲ್ಲ. ಇತ್ತೀಚೆಗೆ ಚೀಫ್ ಇಲೆಕ್ಷನ್ ಕಮಿಷನ್‌ರವರೂ ಕೂಡ ಬೇರೆ ಹೇಳಿದ್ದಾರೆ. ರಾಜಕಾರಣಿಗಳನ್ನು ಯಾವುದೋ ರೋಗಕ್ಕೆ ಹೋಲಿಸಿ ಬಿಟ್ಟಿದ್ದಾರೆ. ಇದೆಲ್ಲಾ ಇನ್ನು ಜಾಸ್ತಿಯಾಗುತ್ತಾ ಹೋದರೆ ಜನರಿಗೆ ಅನಿಸುತ್ತದೆ ಆ ರೋಗ ಕರೆಕ್ಟ್ ಏನೋ ಅಂತ. ಈ ಹಿನ್ನೆಲಿಯಲ್ಲಿ ಇವತ್ತು ನಾವು ಈ ಚರ್ಚೆಯನ್ನು ಮಾಡುತ್ತಿದ್ದೇವೆ. 5ನೇ ತಾರೀಖು ಮೊನ್ನೆ, ಈ ಸದನ ಇಲ್ಲಿ ಪ್ರಾರಂಭವಾಯಿತು. ಪ್ರಾರಂಭ ಮಾಡುವುದಕ್ಕೆ ಏಳು ದಿವಸಗಳು ಇರುವಾಗ ಕ್ಯಾಬಿನೆಟ್ ಮೀಟಿಂಗ್ ನಡೆಯಿತು. ನಾವು ಸುಮಾರು ಒಂದು ಒಂದೂವರೆ ವರ್ಷದಿಂದ ಕೇಳಿಕೊಂಡು ಬಂದಿರುತ್ತೇವೆ. ಇದನ್ನು ಸಿಬಿಐ ಗೆ ಕೊಟ್ಟುಬಿಡಿ. ಸಿಬಿಐ ಗೆ ಏಕೆ ಕೊಡಬೇಕು ಎನ್ನುವುದರ ಬಗ್ಗೆ ಕಾರಣವನ್ನೂ ಕೂಡ ಹೇಳಿಕೊಂಡು ಬಂದಿರುತ್ತೇವೆ. ಅದನ್ನು ಕೊಟ್ಟಿರಲಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು, ಹಾಗೆಯೇ ನಮ್ಮ ಬೇಡಿಕೆಯನ್ನು ಅವರು ತಳ್ಳಿ ಹಾಕಿಬಿಟ್ಟರು. ಸನ್ಮಾನ್ಯ ಖರ್ಗೆಯವರು ಒಂದುರೀತಿಯಲ್ಲಿ ಗುಡುಗಿ ಬಿಟ್ಟರು. ಏಕೆ ಸಿಬಿಐ ಗೆ ಕೊಡಬೇಕು, ಎಂದು ಗುಡಿಗಿಯೇ ಬಿಟ್ಟಿದ್ದರು. ನಾವು ಕಳೆದ ಒಂದು ವರ್ಷದಿಂದ ಏನು ಕೇಳಿಕೊಂಡು ಬಂದಿದ್ದೆವು. ಅದನ್ನು ಇವರು ಮೊನ್ನೆ 26ನೇ ತಾರೀಖು ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನವನ್ನು ತೆಗೆದುಕೊಂಡು ಸಿಬಿಐ ಗೆ ಕೊಡಲು ತೀರ್ಮಾನವನ್ನು ತೆಗೆದುಕೊಂಡರು. ಅದರ ಜೊತೆಗೆ ಮೊನ್ನೆ ಒಂದು ಅಫಿಡೆವಿಟ್‌ನ್ನು ಹಾಕಿದ್ದಾರೆ. ನಮ್ಮ ರಾಜ್ಯದವರು ಸುಪ್ರೀಂಕೋರ್ಟಿನಲ್ಲಿ ಅದೀಪ್ ಚೌದರಿ ಅಡಿಷನಲ್ ಚೀಫ್ ಸೆಕ್ರೆಟರಿಯವರ ಹೆಸರಿನಲ್ಲಿ ಒಂದು ಅಫಿಡೆವಿಟ್‌ನ್ನು ಹಾಕಿದ್ದಾರೆ. The fake stamp racket which has surfaced in many States in India had turned out to be one of the gravest development in recent times jeopardizing the safety of legal transactions & collection of revenue by the States ಇದನ್ನೇ ಸ್ವಾಮಿ ನಿಮಗೆ ನಾವು ಹೇಳಿಕೊಂಡು ಬಂದಿದ್ದು. ಇದೇ ವಿಚಾರದ ಬಗ್ಗೆ ಬೇರೆ ಬೇರೆ ರಾಜ್ಯಗಳಲ್ಲಿ ಹರಡಿದೆ ಬಹಳ ತೊಂದರೆಯಾಗುತ್ತದೆ, ಅದಕ್ಕಾಗಿಯೇ ಇದನ್ನು ಸಿಬಿಐ ಗೆ ಕೊಡಿ ಎಂದು ನಾವು ಹೇಳಿಕೊಂಡು ಬಂದಿದ್ದು. ಆದರೆ ತಾವು ಕೇಳಲಿಲ್ಲ, ಅದು ಆದಮೇಲೆ

9ನೇ ಪ್ಯಾರಾದಲ್ಲಿ, the Karnataka State cabinet in its meeting held on... having regard to the serious, prejudicial and economic consequences to this State ಈ ಮಾತನ್ನು ನಾವು ಹೇಳಿರಲಿಲ್ಲವೆ and the Union and to promote the efficiency of the investigation, ಇದೇ ಮಾತನ್ನು ನಾವು ಹೇಳಿರುವುದು. and securing full co-operation and co-ordination from all agencies concerned, this Hon'ble Court may be pleased to monitor all aspects of the operations relating to this serious economic threat which may jeoparadise the nation's fiscal interest.

ನಾವು ಏನು ಹೇಳಿದ್ದೆವೋ, ಅದನ್ನು ಇವತ್ತು ಮಾಡಿದ್ದೀರಿ. ಆದರೆ, ಬಹಳ ತಡವಾಗಿ ಮಾಡಿದ್ದೀರಿ. ಈ ಕೆಲಸವನ್ನು ಎರಡು ವರ್ಷಕ್ಕೆ ಮುಂಚೆಯೇ ಮಾಡಬಹುದಾಗಿತ್ತು. ಸನ್ಮಾನ್ಯ ಅಧ್ಯಕ್ಷರೇ, ಅಫಿಡೆವಿಟ್‌ನಲ್ಲಿ ಕೊನೆಯಲ್ಲಿ ಒಂದು ಭಾಗ ಇದೆ, ಇದು ಬಹಳ ಮುಖ್ಯ. 26–12–03 ರಲ್ಲಿ ಸಚಿವ ಸಂಪುಟದ ಸಭೆ ನಡೆಯಿತು. Although Karnataka has not been notified of the above petition, ಸುಪ್ರೀಂ ಕೋರ್ಟಿನಲ್ಲಿದ್ದ ಪಿಟಿಷನ್ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ನೋಟೀಸೇ ಸರ್ವ್ ಆಗಿರಲಿಲ್ಲ. ಇನ್ನು ನಿಮ್ಮ ಅಫಿಡೆವಿಟ್‌ದು ಒಂದು ಭಾಗ. Although Karnatka has not been notified of the above petition and other allied petitions, in view of the cabinet decision taken on 26.12.2003, it has entered its appeareance before this Hon'ble Court even before notice. So that this Hon'ble Court may take note of the stand of the State of Karnataka in dealing with the petitions. ನೋಟೀಸ್ ಬಂದಿಲ್ಲ, ನೋಟೀಸ್ ಸರ್ವ್ ಆಗಿಲ್ಲ. ಆದರೂ ಕೂಡ ನಮ್ಮ ಸರ್ಕಾರ ತುದಿಗಾಲಿನಲ್ಲಿ ಹೋಗಿ ನಿಂತುಕೊಂಡು ಅಫಿಡೆವಿಟ್ ಹಾಕಿ, ಸಿ.ಬಿ.ಐ.ಗೆ ಕೊಡಬಹುದೆಂಬ ಒಂದು ವರದಿಯನ್ನು ಕೊಟ್ಟರು. ಈ ಕೆಲಸವನ್ನು ಸರ್ಕಾರ ಎರಡು ವರ್ಷವಾದ ಮೇಲೆ ಏಕೆ ಮಾಡಿತು? ಇವತ್ತು ಸಭೆಯಲ್ಲಿ ಎರಡು ಹೆಸರುಗಳನ್ನು ನಾವು ಕೇಳುತ್ತಾ ಇದ್ದೇವೆ. ಆ ಎರಡು ಹೆಸರುಗಳನ್ನೂ ಕೇಳುತ್ತಾ ಇರುವಾಗ ನನಗೆ ಬೇವು ಬೆಲ್ಲದ ಜ್ಞಾಪಕ ಬರುತ್ತಾ ಇದೆ. ಕರೀಂಲಾಲ ಯಾರೋ, ಅವನ ಹೆಸರನ್ನು ಇವತ್ತು ಬೆಳಿಗ್ಗೆಯಿಂದ ಸುಮಾರು ನೂರು ಸಲ ಇಂತಹ ಸದನದಲ್ಲಿ ಹೇಳುತ್ತಾ ಇದ್ದೇವೆ. ಆ ವ್ಯಕ್ತಿಯ ಹೆಸರನ್ನು ಇಲ್ಲಿ ಹೇಳುವುದಕ್ಕೆ ಅವನ ಅರ್ಹತೆ ಇದೆಯಾ; ಆದರೆ ಹೇಳಲೇಬೇಕಾದ ಪ್ರಸಂಗ. ಇದು ಬೇವು. ಇನ್ನೊಂದು ಶ್ರೀಕುಮಾರ್. ಇವರು ಒಬ್ಬ upright ಆಫೀಸರ್ ಎಂದು ಸದನದಲ್ಲಿ ಎಲ್ಲರೂ ಹೇಳುತ್ತಿದ್ದಾರೆ. ಇವರು ಬೆಲ್ಲ. ದುರಾದೃಷ್ಟವಶಾತ್ ಇವರಿಬ್ಬರ ಹೆಸರನ್ನು ಇವತ್ತು ಒಟ್ಟೊಟ್ಟಿಗೆ ಹೇಳುವಂಥ ಪರಿಸ್ಥಿತಿ ಈ ಸದನಸಲ್ಲಿ ಬಂದಿದೆ. ಆದರೆ ಒಂದು ಕ್ಷಮತೆಗೆ ನಾವು ಗೌರವ ಕೊಟ್ಟರೂ ಕೂಡ, ಸಿ.ಬಿ.ಐ.ಗೆ ಕೊಡಬೇಕೆಂದು ನಾವು ಕೇಳುತ್ತಾ ಬಂದಾಗ, ಏತಕ್ಕೆ ನೀವು ನಮ್ಮ ಮಾತು ಕೇಳಲಿಲ್ಲ? ಏತಕ್ಕೆ ನೀವು ಈಗ ಕೊಡುವುದಕ್ಕೆ ಹೋದಿರಿ? ಈಗ ಕೊಡುವುದಕ್ಕೆ ನಿಮಗೆ ಏನು ಆತಂಕ ಇತ್ತು, ಏನು ಆತಂಕ ಬಂತು? ಅದನ್ನು ಕೂಡ ತಾವು ರಾಜ್ಯದ ಜನತೆಗೆ ತಿಳಿಸಬೇಕಾಗಿದೆ. ನಾವು ಅನೇಕ ದಿವಸಗಳಿಂದ ಏನು ಕೇಳುತ್ತಾ ಇದ್ದೆವು. ಈ ಪ್ರಕರಣವನ್ನು ದಯವಿಟ್ಟು ಸಿ.ಬಿ.ಐ.ಗೆ ಒಪ್ಪಿಸಿ ಎಂದು. ಆದರೆ, ನೀವು ನಿರಾಕರಿಸಿಬಿಟ್ಟಿರಿ.

ರೋಷನ್ ಬೇಗ್‌ರವರು ದಯವಿಟ್ಟು ರಾಜಿನಾಮೆ ಕೊಡಲಿ, needle of suspicion ಅವರ ಕಡೆ ಇದೆ. ಇದನ್ನು ನಾವು ಕೇಳುತ್ತಲೇ ಬಂದೆವು. ರಾಜಿನಾಮೆ ಕೊಡಿಸುವುದಿಲ್ಲವೆಂದರು, ಅವರು ಇಲ್ಲಿ ಬಂದು ರಾಜಿನಾಮೆ ಕೊಡುವುದಿಲ್ಲ ಎಂದರು. ಬೇಕಾದರೆ ಯಾರನ್ನಾದರೂ ನೇಣು ಹಾಕಿ ಎಂದರು. ಆಮೇಲೆ. ಮೊನ್ನೆ ರಾಜಿನಾಮೆ ಕೊಟ್ಟು ಹೊರಟು ಹೋದರು. ಇನ್ನು ಮೂರನೆಯದು, ನಾವು ಹೇಳುತ್ತಾ ಬಂದಿದ್ದು. ನೋಡಿ ಜೈಲಿನಲ್ಲಿ ಆ ಕರೀಂಲಾಲಾಗೆ ಒಳ್ಳೆಯದು ಆತಿಥ್ಯ ಸಿಗುತ್ತಾ ಇದೆ. ಅದನ್ನು ನೋಡಿದ ಬಹಳ ಜನಕ್ಕೆ ನಾವೂ ಜೈಲಿಗೆ ಹೋದರೆ ಒಳ್ಳೆಯದು ಎಂದು ಅನಿಸುತ್ತಾ ಇದೆ. ದಯವಿಟ್ಟು ಇದಕ್ಕೆ ಅವಕಾಶ ಕೊಡಬೇಡಿ ಎಂದು ನಾವು ಹೇಳುತ್ತಾ ಬಂದೆವು. ಆಗ ನೀವು ಕೇಳಲಿಲ್ಲ. ಈಗ ಜೈಲಿನಲ್ಲಿರುವ ಅಧಿಕಾರಿಗಳನ್ನು ಅರೆಸ್ಟ್ ಮಾಡಿದ್ದೀರಿ. ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಮುಖಾಂತರ ಮುಖ್ಯಮಂತ್ರಿಗಳಿಗೆ ಒಂದು ಪ್ರಸಂಗ ಹೇಳುತ್ತೇನೆ. ಹೀಗೆಯೆ ತಮ್ಮ ಯಾರೋ ಒಬ್ಬರು ಸಚಿವರ ಜೊತೆ ನಾನು ಮಾತನಾಡುತ್ತಾ ಇದ್ದೆ. ಏನು ಸ್ವಾಮಿ ಹೀಗೆ ಜೈಲಿನಲ್ಲೆಲ್ಲಾ ಮೊಬೈಲ್‌ನಲ್ಲಿ ಮಾತನಾಡುವುದಕ್ಕೆ ಶುರು ಮಾಡಿದೀರಲ್ಲಾ ಇದು ಏನು ಕತೆ ಎಂದೆ. ಸುರೇಶ್ ಕುಮಾರ್, ನಿಮಗೆ ಗೊತ್ತಿಲ್ಲ, ನಾವೇ ಮೊಬೈಲ್ ಕೊಟ್ಟಿದ್ದೆವು ಅಂದರು. ನಾವೇ ಕರೀಂಲಾಲಾಗೆ ಮೊಬೈಲ್ ಕೊಟ್ಟಿದ್ದೆವು. ಅವನು ಎಲ್ಲೆಲ್ಲಿ ಮಾತನಾಡುತ್ತಾನೆ, ಅದನ್ನು ತಿಳಿದುಕೊಳ್ಳುವುದಕ್ಕೆ ಮೊಬೈಲ್ ಕೊಟ್ಟಿದ್ದೆವು ಎಂದರು. ಹಾಗಾದರೆ, ಆ ಜೈಲಿನ ಅಧಿಕಾರಿಗಳನ್ನು ಏಕೆ ಹಿಡಿದಿರಿ, ಏಕೆ ಅರೆಸ್ಟ್ ಮಾಡಿದಿರಿ ಎಂದೆ. ಅದಕ್ಕೆ ಅವರು ಬಾಯಿಮುಚ್ಚಿಕೊಂಡು ಅತ್ತಲಾ ಕಡೆ ಹೋಗಿಬಿಟ್ಟರು. ಅಂದರೆ, ಒಂದು ವಿತಂಡವಾದ. ಏನು ಮಾಡಿದರೂ ಕೂಡ ಡಿಫೆನ್ಸ್ ಇದೆಯೆಂಬ ಪರಿಸ್ಥಿತಿಗೆ ತಂದುಬಿಟ್ಟಿದ್ದಾರೆ. ನಾವು ಕಳೆದ ಎರಡು ವರ್ಷಗಳಿಂದ ಏನೇನು ಹೇಳುತ್ತಾ ಇದ್ದೆವೋ ಅದೆಲ್ಲಾ ಇವತ್ತು ನಿಜವಾಗಿ ಆಗಿಬಿಟ್ಟಿದೆ. ತಾವು ಸಿ.ಬಿ.ಐ.ಗೆ ಕೊಟ್ಟಿರಿ. ರೋಷನ್ ಬೇಗ್‌ರವರು ರಾಜಿನಾಮೆ ಕೊಟ್ಟಿದ್ದಾರೆ. ಮೂರನೆಯದು ಜೈಲಿನಲ್ಲಿ ಆಗುತ್ತಿರುವ ಅನಾಹುತ ಇವತ್ತು ಎಲ್ಲರಿಗೂ ಗೊತ್ತಾಗಿ ಬಿಟ್ಟಿದೆ. ಜೈಲಿನಲ್ಲಿ ಈ ರೀತಿ ಆಗಬಾರದಾಗಿತ್ತು, ಆಗಿಬಿಟ್ಟಿದೆ. ಸನ್ಮಾನ್ಯ ಅಧ್ಯಕ್ಷರೇ, ನನ್ನ ಹತ್ತಿರ ಒಬ್ಬ ಸೆಕೆಂಡ್ ಅಡಿಷನಲ್ ಮ್ಯಾಜಿಸ್ಟ್ರೇಟ್ ಮುಂದೆ ಇಟ್ಟ, ಅಜಂ ಎಂಬ ವ್ಯಕ್ತಿಯ ಎವಿಡೆನ್ಸ್ ಇದೆ. ಅವನು ವಾಚ್‌ಮೆನ್. ಆ ವಾಚ್‌ಮೆನ್ ಎವಿಡೆನ್ಸ್ :

> 'ನಾನು ಗೌರಿಪಾಳ್ಯದಲ್ಲಿ ಐದು ವರ್ಷಗಳಿಂದ ವಾಸವಾಗಿರುತ್ತೇನೆ. ಅಲ್ಲಿ ಜಮೀರ್ ಮತ್ತು ಜಾವಿದ್ ಎಂಬ ಸ್ನೇಹಿತರು ನನಗೆ ಇದ್ದರು. ಜಮೀರ್ ಮತ್ತು ಜಾವಿದ್ ಅವರು ಕಳ್ಳತನವನ್ನು ಮಾಡಿ ನನ್ನನ್ನೂ ಕೂಡ ತಮ್ಮ ಜೊತೆಗೆ ಕರೆದುಕೊಂಡು ಹೋದರು. ಇದರ ವಿಷಯವಾಗಿ ಜೆ.ಜೆ. ನಗರದ ಪೊಲೀಸರು ನಮ್ಮ ಮೇಲೆ ಒಂದು ಕಳುವಿನ ಕೇಸನ್ನು ಹಾಕಿದ್ದರು. ಆ ನಂತರ ನಮ್ಮನ್ನು ಜೈಲಿಗೆ ಕರೆದುಕೊಂಡು ಹೋದರು.ಆ ಜೈಲಿನಲ್ಲಿದ್ದಾಗ ನನ್ನ ಕೈಗೆ ಗಾಯವಾಗಿತ್ತು. ನಾನು ಆ ಗಾಯದ ವಿಷಯವಾಗಿ ಆಸ್ಪತ್ರೆಗೆ ಆಡ್ಮಿಟ್ ಆಗಿದ್ದೆನು. ನಾನು ಆಸ್ಪತ್ರೆಯಲ್ಲಿ ಎರಡು ತಿಂಗಳ ಕಾಲ ಇದ್ದೆನು. ಆ ಸಮಯದಲ್ಲಿ ಕರೀಂಲಾಲಾ ಆ ಜೈಲಿಗೆ ಬಂದನು. ಅವನು ಚಿಕಿತ್ಸೆಗೆ ಅದೇ ಆಸ್ಪತ್ರೆಗೆ ಬರುತ್ತಿದ್ದನು. ಆ ಸಮಯದಲ್ಲಿ ಕರೀಂಲಾಲಾನು ನನಗೆ, ನೀನು ಎಲ್ಲಿ ಇರುತ್ತೀಯಾ ಎಂದು ಕೇಳಿದನು. ನಾನು ಗೌರಿಪಾಳ್ಯದಲ್ಲಿ ಇರುತ್ತೇನೆ ಎಂದು ಹೇಳಿದೆನು. ನಿನಗೆ ಪ್ರತಿ

ದಿನ ಇಷ್ಟು ರೂಪಾಯಿ ಕೊಡುವುದಾಗಿ ತಿಳಿಸಿದನು. ಕರೀಂಲಾಲಾನು ಜೈಲ್ ಸೂಪರಿಂಟೆಂಡೆಂಟ್‌ಗ್ ಹೇಳಿ ತಮ್ಮ ರೂಮಿನಲ್ಲಿಯೇ, ನನ್ನನ್ನು ಇಟ್ಟುಕೊಂಡನು. ಆಗ ಅನೀಸ್ ಮತ್ತು ಅಬ್ಬಾಸ್ ಕೂಡ ಆ ಜೈಲಿನಲ್ಲಿ ಇದ್ದರು. ಅಬ್ಬಾಸ್‌ನನ್ನು ಆ ಜೈಲಿನಿಂದ ಬೇರೆ ಕಡೆಗೆ ವರ್ಗಾಯಿಸಿದರು. ಕರೀಂಲಾಲಾ ನನಗೆ ಮತ್ತು ಅನೀಸ್‌ಗೆ, ನನಗೆ ಹೊರಗಿನಿಂದ ಊಟ ಬರುತ್ತದೆ, ಹೋಗಿ ಅದನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದನು. ಇವನು, ಅವರನ್ನು ಗೇಟಿಗೆ ಕಳುಹಿಸಿ ಊಟ ಬರುತ್ತೆ ತೆಗೆದುಕೊಂಡು ಬನ್ನಿ ಎಂದು ಹೇಳುವುದು. ನನಗೆ ಭದ್ರು, ರತೀಕ್, ಜಿತೇಂದರ್ ವಾಜೀದ್, ಅಕ್ರಂ, ಫೈರೋಸ್‌ರವರ ಪರಿಚಯವಿದೆ, ಆಗ ಕರೀಂಲಾಲಾನು, ನಾನು ಮೇಲೆ ಹೇಳಿದ ಎಲ್ಲರಿಗೂ, ಹತ್ತು ಸಾವಿರ, ಇಪ್ಪತ್ತು ಸಾವಿರ ಹಣ ಕೊಡುವುದಾಗಿ ಹೇಳಿದನು. ಆಗ ಸ್ಟಾಂಪ್ ಕೇಸಿನ ಎಲ್ಲಾ ಸಿ.ಡಿ.ಗಳೂ ಅಲ್ಲಿ ಇದ್ದವು. ಜೈಲರ್ ಸಾಹೇಬರು ರೌಂಡ್ಸ್ ಬರುವಾಗ ಅಲ್ಲಿ ದಿನಾಲೂ ಬರುತ್ತಿದ್ದರು. ಅವರು ಕರೀಂಲಾಲಾನ ಜೊತೆಯಲ್ಲಿ ಮಾತನಾಡಿಕೊಂಡು ಹೋಗುತ್ತಿದ್ದರು. ಅವರು ಹೋದನಂತರ ಕರೀಂಲಾಲಾನು ದುಡ್ಡನ್ನು ಜೈಲರಿಗೆ ಕೊಡುತ್ತಿದ್ದನು. ಕರೀಂಲಾಲಾನು ತನ್ನ ಹತ್ತಿರ ಮೊಬೈಲ್ ಫೋನನ್ನು ಇಟ್ಟುಕೊಂಡಿದ್ದನು. ಅದರಲ್ಲಿ ಯಾವಾಗಲೂ ಸ್ಟಾಂಪಿನ ರೇಟ್ ಜಾಸ್ತಿ ಮಾಡು ಎಂದು ಮಾತನಾಡುತ್ತಿದ್ದನು. ಕರೀಂಲಾಲಾನು ಜೈಲಿನಲ್ಲಿ ಇದ್ದುಕೊಂಡೇ ಎಲ್ಲರಿಗೂ ಬಟ್ಟೆ ಕೊಟ್ಟರೆಂಬುದೆಲ್ಲಾ ಇದೆ. ಆ ತಿಂಗಳಲ್ಲಿ ಜಯರಾಮಯ್ಯ, ಜೈಲರ್, ಅವರಿಗೆ ವರ್ಗಾವಣೆ ಆಯಿತು. ಆಗ ಅಲ್ಲಿಗೆ ಅಬ್ಬಯ್ಯ ಎಂಬುವರು ಆ ಜೈಲಿಗೆ ಬಂದರು. ಆಗ ಅಲ್ಲಿ ಸ್ವಲ್ಪ ಟೈಟ್ ಆಯಿತು. ಸಿ.ಡಿ. ಮೊಬೈಲ್‌ಗಳನ್ನು ಬೇರೆ ಬೇರೆ ರೂಮಿಗೆ ಕಳುಹಿಸಿದರು. ಅವರು ಹೋದನಂತರ, ತಿರುಗಿ ಇವೆಲ್ಲವುಗಳನ್ನು ಕರೀಂಲಾಲಾನ ರೂಮಿಗೆ ತೆಗೆದುಕೊಂಡು ಬರಲಾಯಿತು,ಅಬ್ಬಯ್ಯ ಅವರು ಬಂದನಂತರ ಎಂಟು ದಿವಸಗಳು ಮಾತ್ರ ಕರೀಂಲಾಲಾ ರೂಮಿನಲ್ಲಿ ಇದ್ದೆನು. ಅಬ್ಬಯ್ಯ ಬಂದ ನಂತರ ನನ್ನನ್ನು ಬೇರೆ ಕಡೆಗೆ ವರ್ಗಾಯಿಸಿದರು. ಆ ನಂತರ ನಾನು ಬಿಡುಗಡೆ ಆದೆನು. ಆಗ ಕರೀಂಲಾಲಾನ ಎಲ್ಲಾ ಅಡ್ರೆಸ್‌ಗಳನ್ನೂ ಕಳೆದುಕೊಂಡೆನು ಎಂದು ಹೇಳಿದ್ದಾನೆ.

ಅಂದರೆ, ಜೈಲ್ ಎಷ್ಟು ಪೊರಸ್ ಎಂದು. ನಮ್ಮ ಅಧಿಕಾರಿಗಳು ಯಾವರೀತಿ ಕೆಲಸ ಮಾಡುತ್ತಿದ್ದಾರೆ ಎಂದು. ನನಗೆ ಈ ವಿಚಾರ ಹೇಳುವುದಕ್ಕೆ ಇಷ್ಟ ಇಲ್ಲ. ಕರೀಂಲಾಲಾ ತಮಗೆ ಗೊತ್ತಿರುವ ಹಾಗೆ ವೆರಿ ಇಂಪಾರ್ಟೆಂಟ್ ಅಕ್ಯೂಸ್ಡ್ ವೆರಿ ಇಂಪಾರ್ಟೆಂಟ್ ಪರ್ಸನ್ ಇದ್ದಹಾಗೆ ವೆರಿ ಇಂಪಾಂರ್ಟೆಂಟ್ ಅಕ್ಯೂಸ್ಡ್ ಇಡೀ ದೇಶದ ಕಣ್ಣು ಅವನ ಮೇಲೆ ಇದೆ. ಮೂವತ್ತು ಸಾವಿರ, ಮೂವತ್ತೈದು ಸಾವಿರ ಕೋಟಿ ರೂ. ಎಂದು ನಾವೆಲ್ಲಾ ಮಾತನಾಡುತ್ತೇವೆ. ಅಂತಹ ಒಬ್ಬ ವ್ಯಕ್ತಿ ಜೈಲಿನಲ್ಲಿ ಏನು ಮಾಡುತ್ತಾ ಇದ್ದಾನೆಂದು ಗೃಹ ಇಲಾಖೆ ಏಕೆ ನಿಗಾ ಇಡಲಿಲ್ಲ ? ಜೊತೆಜೊತೆಗೆ ನಮ್ಮ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್ ಏನಿದೆ, ಈ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್ ಸರ್ವೇಸಾಮಾನ್ಯವಾಗಿ ಮುಖ್ಯಮಂತ್ರಿಗಳ ಬಳಿ ಇರುತ್ತದೆ. ಈ ರೀತಿಯ ಒಂದು ಪ್ರಸಂಗ ಬೆಂಗಳೂರಿನ ಜೈಲಿನಲ್ಲಿ ಆದಾಗ, ಒಬ್ಬ ಕರೀಂಲಾಲಾನಂತಹ ವ್ಯಕ್ತಿ, ರಾಜಾರೋಷವಾಗಿ ಹೀಗೆಲ್ಲಾ ವರ್ತಿಸುತ್ತಿರುವಾಗ, ಜೈಲರುಗಳ ಜೊತೆ ಬಾಂಧವ್ಯ ಇದ್ದಾಗ Sir, don't you think it is an intelligence

failure? Biggest failure of the intelligence. In a way, is it not the failure of the Chief Minister who heads that intelligence Department? ಬಹಳ ಸಲೀಸಾಗಿ ಆಗುತ್ತೆ, ಏನು ಬೇಕಾದರೂ ಮಾಡಿಕೊಂಡು ಹೋಗಬಹುದು. ನಾನು ಕರೀಂಲಾಲಾ ಬಗ್ಗೆ ಟಿ.ವಿ.ಯಲ್ಲಿ ಮತ್ತೆ ಪೇಪರಿನಲ್ಲಿ ಫೋಟೋಗಳನ್ನು ನೋಡುತ್ತಾ ಇರುತ್ತೇನೆ.

5.20 ಪಿ.ಎಂ

ಕರೀಂಲಾಲಾ ಒಂದೇ ಒಂದು ಸಲವಾದರೂ ಸ್ವಲ್ಪವಾದರೂ ಸಪ್ಪಗೆ ಇರುವುದು, ದುಮ್ಮಾನದಿಂದ ಇರುವುದು, ಬೇಜಾರಾಗಿರುವುದನ್ನು ನಾನು ನೋಡಿಯೇ ಇಲ್ಲ. ಅವನು ಯಾವಾಗಲೂ ಸಂತೋಷವಾಗಿ ಇರುತ್ತಾನೆ. ಇದು ಏಕೆ? He is confident that everybody is purchasable. ಒಂದು ರೀತಿಯಲ್ಲಿ ಎಲ್ಲರನ್ನೂ ನಾನು ನೋಡಿಕೊಳ್ಳುತ್ತೇನೆ ಎನ್ನುವ ಭಾವನೆಯಿಂದಾಗಿ ಅವನಲ್ಲಿ ಆ ಒಂದು ಪರಿಸ್ಥಿತಿ, ವಾತಾವರಣ ಇತ್ತು. ಇಷ್ಟೆಲ್ಲಾ ಆಗಿ ಬಿಟ್ಟಿದೆ. ಇದಕ್ಕೆ ಕರ್ತರು ಯಾರು? ಇಷ್ಟು ದಿವಸ ಜೈಲ್‌ನಲ್ಲಿ ಇವೆಲ್ಲಾ ನಡೆಯುವುದಕ್ಕೆ ಕಾರಣಕರ್ತರು ಯಾರು? ಯಾರೋ ಇಬ್ಬರನ್ನು ಹಿಡಿದು ಕಿಂಗ್‌ಪಿನ್.. ಕಿಂಗ್‌ಪಿನ್ ಎಂದು ಶಬ್ದವನ್ನು ಬಹಳ ಉಪಯೋಗಿಸಿದ್ದೀರಿ. ಇವರನ್ನು ಬಿಟ್ಟು ಕೂಡ ನಿಜವಾದ ಕಿಂಗ್‌ಪಿನ್‌ಗಳು ಇದ್ದಾರೆ. ಅವರನ್ನು ಇವೊತ್ತು ನಾವು ಏನು ಮಾಡುತ್ತಿದ್ದೇವೆ ? ಅವರನ್ನು ರಕ್ಷಣೆ ಮಾಡುವುದಕ್ಕೋಸ್ಕರವೇ ನಾವು ಸಿಬಿಐಗೆ ಕೊಡುವುದಿಲ್ಲವೆಂದು ಎರಡು ವರ್ಷಗಳ ಕಾಲ ಆಟ ಆಡಿಸಿ, ಈಗ ಸಿಬಿಐಗೆ ಕೊಟ್ಟು ಆ ಒಂದು ಸ್ಪೆಶಲ್ ಕೋರ್ಟ್ ಬಗ್ಗೆ ಬಹಳ ಚೆನ್ನಾಗಿ ನಮ್ಮ ನಾಯಕರು ಹೇಳಿದ್ದಾರೆ. ನೀವು ಸ್ಪೆಶಲ್‌ಕೋರ್ಟ್ ಮಾಡಿದ್ದನ್ನು ಬಹಳ ಸೊಗಸಾಗಿ ಹೇಳಿದ್ದೀರಿ, ಬಹಳ ಒಳ್ಳೆಯದು. ಆ ಸ್ಪೆಶಲ್‌ಕೋರ್ಟ್‌ಗೆ ಕೊಟ್ಟಮೇಲೆ ಸ್ಪೆಶಲ್ ಕೋರ್ಟ್ ಅಂದಮೇಲೆ ಒಂದು ಹಾರ್ಡ್‌ವೇರ್ ಒಂದು ಸಾಫ್ಟ್‌ವೇರ್ ಇರಬೇಕು. ಹಾರ್ಡ್‌ವೇರ್ ಅಂದರೆ, ಕಟ್ಟಡ ಇತ್ಯಾದಿಗಳು. ಸಾಫ್ಟ್‌ವೇರ್ ಅಂದರೆ ಅಲ್ಲಿನ ಸಿಬ್ಬಂದಿ ಯಾರು ಕೆಲಸ ಮಾಡುತ್ತಾರೋ ಅವರು. ನೀವು ಆ ಸ್ಟೋರ್‌ಪರ್ಚೇಸ್ ಡಿಪಾರ್ಟ್‌ಮೆಂಟ್‌ನವರನ್ನು ಕಳುಹಿಸುತ್ತೀರಲ್ಲಾ ಎಸ್‌ಪಿಡಿಯನ್ನು ನೀವು ಏತಕ್ಕೆ ಮುಚ್ಚ ಬೇಕೆಂದಿದ್ದದ್ದು? ಅಲ್ಲಿ ಭಯಂಕರ ಸೋರುವಿಕೆ, ಭ್ರಷ್ಟಾಚಾರಗಳಿವೆ ಎಂಬ ಕಾರಣಕ್ಕಾಗಿ ಮುಚ್ಚಬೇಕೆಂದು ಇತ್ತು. ಈಗ ಈ ಕೇಸ್‌ಗೆ ಅವರೇ ಸರಿ ಎಂದು ತಂದು ಹಾಕುತ್ತೀರಲ್ಲಾ, ನಿಮಗೆ ಈ ಒಂದು ಪ್ರಕರಣದ ಬಗ್ಗೆ ಯಾವರೀತಿಯ ಕಾಳಜಿ ಇದೆ ಎಂಬುದನ್ನು ಸರಕಾರದವರು ರಾಜ್ಯದ ಜನತೆಗೆ ತಿಳಿಸಬೇಕು. ಇವೊತ್ತು ನನಗೆ ಬಂದಿರುವ ಮಾಹಿತಿಗಳ ಪ್ರಕಾರ, ಸುಮಾರು ನವೆಂಬರ್‌ನಲ್ಲಿ ನಮ್ಮ ಸ್ಪೆಶಲ್ ಕೋರ್ಟ್ ಆಗಿರುವುದು. ಸುಮಾರು 17 ಪ್ರಕರಣಗಳ ಪೈಕಿ ಕೇವಲ ಒಂದೇ ಒಂದು ಕೇಸ್‌ನ್ನು ಸ್ಪೆಶಲ್‌ಕೋರ್ಟ್‌ಗೆ ರೆಫರ್ ಮಾಡಿರುವುದು, ಅದನ್ನು ಬಿಟ್ಟು ಒಂದೇ ಒಂದು ಇಂಚೂ ಕೂಡ ಮುಂದಕ್ಕೆ ಹೋಗಿಲ್ಲ. ಇದನ್ನು ನೀವು ತೋರಿಸಿದರೆ, ಇದನ್ನು ಯಾರಾದರೂ ಕನ್ಸರ್ನ್ ತೋರಿಸಿದ್ದಾರೆ ಎಂದು ಹೇಳುತ್ತಾರೆಯೇ? ಇದನ್ನೂ ಕೂಡ ನಾವು ಇವೊತ್ತು ಯೋಚಿಸಬೇಕು. ಆ ಮೇಲೆ ಕರೀಂಲಾಲಾನನ್ನು ನಾವೇ ಆಗ ಬಂಧಿಸಿದ್ದು, 7ನೇ ನವೆಂಬರ್, 2001ರಲ್ಲಿ. ರಾಜಸ್ಥಾನದ ಅಜ್ಮೀರ್‌ಗೆ ಹೋಗಿ ಬಂಧಿಸಿದ್ದನ್ನು ನೀವೆಲ್ಲರೂ ಮೆಚ್ಚ ಬೇಕೆಂದು ಹೇಳಿದ್ದೀರಿ. ಖಂಡಿತ ಮೆಚ್ಚುತ್ತೇವೆ. ಬಹಳ ಒಳ್ಳೆಯ ಕೆಲಸವನ್ನು ನೀವು ಮಾಡಿದ್ದೀರಿ. ಹೇಗೆ ಮಾಡದ್ದೀರಿ? ಆ ಜಯಂತ್ ತಿನ್ನೈಕರ್ ಎನ್ನುವಂಥ ವ್ಯಕ್ತಿ, ಸಾಂಗ್ಲಿಯಾನ ರವರ ಮುಂದೆ ಕುಳಿತುಕೊಂಡು ಆತನು ಎಲ್ಲೆಲ್ಲಿ ಹೋಗುತ್ತಾನೆ ಮತ್ತು ಅವನ ವೇರ್‌ಅಬೌಟ್ಸ್ ಎಲ್ಲಾ ಹೇಳಿದ

ಮೇಲೆ, ನಮ್ಮ ಪೋಲೀಸರು ಹೋಗಿ ಚೆನ್ನಾಗಿ ಹಿಡಿದುಕೊಂಡು ಬಂದರು. ಆ ಮೇಲೆ ಏನು ಮಾಡಿದರು ಎನ್ನುವಂಥ ಪ್ರಶ್ನೆ ಇದೆ. 7ನೇ ನವೆಂಬರ್, 2001, 2002, 2003 ಆಗಿಯೂ ಈಗ 2004ನೇ ಇಸವಿಗೆ ಬಂದಿದ್ದೇವೆ. ಇಷ್ಟು ದಿವಸಗಳಲ್ಲಿ ಕರೀಂಲಾಲಾಗೆ ಏಕೆ ಆ ಪಾಲಿಗ್ರಾಫ್ ಟೆಸ್ಟ್‌ನ್ನು ಮಾಡಲಿಲ್ಲ? ಏಕೆ ಕೀಮೊಗ್ರಾಫ್ ಟೆಸ್ಟ್‌ನ್ನು ಮಾಡಲಿಲ್ಲ? ಏಕೆ ನಾರ್ಕೋಅನಾಲಿಸಸ್ ಮಾಡಲಿಲ್ಲ? He was the principal person, ಅವನಿಂದಲೇ ಎಲ್ಲವೂ ಗೊತ್ತಾಗಬೇಕು. ಏತಕ್ಕೆ ಅವನನ್ನು ಈ ಟೆಸ್ಟ್‌ಗಳನ್ನು ಮಾಡದ್ದೇನೆ ಎರಡು, ಎರಡುಕಾಲು ವರ್ಷಗಳಲ್ಲಿ ಅವನನ್ನು ಬಹಳ ಆರಾಮವಾಗಿರುವುದಕ್ಕೆ ಬಿಟ್ಟಿದ್ದೀರಾ? ಅವನಿಗೆ ಫೋನ್ ಮುಖಾಂತರ ವ್ಯವಹಾರ ಮಾಡಲು ಬಿಟ್ಟಿದ್ದೀರಿ ಇದೆಲ್ಲವನ್ನು ನೋಡಿದಾಗ ಸರಕಾರದ ಪ್ರಾಮಾಣಿಕತೆ ಬಗ್ಗೆ, ನಾವು ಡಿಫೆನ್ಸ್ ಆಗಿ ಏನೇನೋ ಹೇಳಬಹುದು, ಮಾನ್ಯ ಮುದ್ದಹನುಮೇಗೌಡರು ಚೆನ್ನಾಗಿ ಹೇಳಿದರು. ಬಹಳ ಚೆನ್ನಾಗಿ ಆರ್ಗ್ಯುಮೆಂಟ್ ಮಾಡಿದರು. but for a very weak case. ಬಹಳ ಚೆನ್ನಾಗಿ ಅವರು ಕೆಲವು ಪದಪುಂಜುಗಳನ್ನು ಉಪಯೋಗಿಸಿದ್ದರು. ಅದೆಲ್ಲವೂ ಸರಿ ಎಂದರೂ ಏನಾಯಿತು ಎನ್ನುವ ಪ್ರಶ್ನೆ ಬರುತ್ತದೆ. ಎರಡು ವರ್ಷಗಳ ಸಮಯ ನಿಮಗೆ ಇದ್ದಾಗ ಏತಕ್ಕೆ ನೀವು ಈ ಒಂದು ಎಲ್ಲಾ ಟೆಸ್ಟ್‌ಗಳನ್ನೆಲ್ಲಾ ಮಾಡಿ ಅದರ ಮೂಲಕ ಯಾವ ಯಾವ ಪುಣ್ಯಾತ್ಮರಿಗೆ ಈತನು ಕೊಟ್ಟಿದ್ದ? ಯಾವ ಯಾವ ಪೊಲೀಸ್ ಸ್ಟೇಶನ್‌ನ ರಿನೋವೇಶನ್‌ಗೆ ಇವನು ಕಾಸು ಕೊಟ್ಟ? ಯಾರ್‍ಯಾರು ಇವನ ಜೇಬಿನಲ್ಲಿದ್ದಾರೆ ಅಥವಾ ಇವನ ಜೇಬಿನಿಂದ ಯಾರ್‍ಯಾರು ತೆಗೆದುಕೊಳ್ಳುತ್ತಾ ಇದ್ದರು, ಇವನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ ಸರಕಾರದವರು ಏತಕ್ಕೆ ಪ್ರಯತ್ನ ಪಡಲಿಲ್ಲ? ಏನಾದರೂ ಭಯ ನಿಮಗೆ ಇತ್ತೇ? ನಮ್ಮಲ್ಲೇ ಯಾರ್‍ಯಾರದ್ದೋ ಹೆಸರುಗಳು ಬರುತ್ತವೆ, ಯಾರ್‍ಯಾರದ್ದೋ ತಲೆಗಳು ಉರುಳಿ ಹೋಗಿ ಬಿಡುತ್ತವೆ, ನಮಗೆ ಏತಕ್ಕೆ? ಇನ್ನೇನು ಚುನಾವಣೆಯು ಹತ್ತಿರಕ್ಕೆ ಬರುತ್ತಿದೆ, ಯಾರನ್ನೂ ಎದುರು ಹಾಕಿಕೊಳ್ಳುವುದು ಬೇಡ, ಎಂಬ ಭಯವಿತ್ತೇ? ಯಾರೋ ಒಬ್ಬರು ಹೇಳಿದ್ದಾರಂತಲ್ಲಾ ಏನಾದರೂ ಹೆಚ್ಚು ಕಡಿಮೆಯಾದರೆ ನಾನೊಬ್ಬನೇ ಮುಳುಗುವುದಿಲ್ಲ, ಪ್ರಮುಖರನ್ನೆಲ್ಲಾ ಸೇರಿಸಿಕೊಂಡು ಮುಳುಗುತ್ತೇನೆಂದು ಹೇಳಿದ್ದಾರಂತೆ. ಕರೀಂಲಾಲಾ ಹೇಳುತ್ತಾನಂತೆ, ನಾನು ಇಲ್ಲೇ ಒಂದು ನೂರು ಸೆಲ್‌ಗಳನ್ನು ಎಸಿ ಸೆಲ್‌ಗಳನ್ನು ಕಟ್ಟಿಸುತ್ತೇನೆಂದು ಹೇಳುತ್ತಾನಂತೆ ಇಂಥ ಮಾತುಗಳು ಬರುತ್ತಾ ಇರುತ್ತವೆ. ಕಾರಣ ಏನೆಂದರೆ, ಇಲ್ಲಿ ನಮ್ಮ ಲ್ಯಾಪ್ಸ್ ಇರುವುದರಿಂದ. ನಾವು ಒಂದು ತರಹ ದೊಡ್ಡ ಹಗರಣ ಏನಿದೆ, ಅದಕ್ಕೂ ಕೂಡ ರಾಜಧಾನಿಯಾಗಿ ಮಾಡಿ ಬಿಟ್ಟಿದ್ದೇವೆ. ಅದು ಒಂದು ದುರಂತವಾಗಿದೆ. ಅದನ್ನು ಸರಕಾರ ಯಾವ ಸಮಯದಲ್ಲಿ ಮಾಡಬೇಕಾಗಿತ್ತೋ ಅದನ್ನು ಮಾಡದೇನೇ ಬಹಳವಾಗಿ ಒಂದು ರೀತಿಯಿಂದ ಸೋಮಾರಿತನವನ್ನು ತೋರಿಸಿದೆ. ಬೇಜವಾಬ್ದಾರಿಯನ್ನು ತೋರಿಸಿದೆ. ಈ ಹಗರಣವು ಮುಂದುವರಿಯಲೂ ಕೂಡ ಸರಕಾರವು ಅವಕಾಶವನ್ನು ಕೊಟ್ಟಿದೆ ಎಂದರೆ ತಪ್ಪಾಗಲಾರದು. 22–07–03ರಲ್ಲಿ ಮೇಲ್ಮನೆಯಲ್ಲಿ ಚರ್ಚೆ ನಡೆಯುತ್ತಾ ಇದ್ದಾಗ, ಅಲ್ಲಿಯೂ ಕೂಡ ಶ್ರೀಕುಮಾರ್‌ರವರ ಚರ್ಚೆ ಬಂತು. ಕರೀಂ ಲಾಲಾರವರ ಚರ್ಚೆ ಬಂತು. ಅಮಾನತ್ ಕೋ–ಅಪರೇಟಿವ್ ಬ್ಯಾಂಕ್‌ನಲ್ಲಿ 60 ಕೋಟಿ ರೂಪಾಯಿಗಳ ಅವ್ಯವಹಾರವಾಗಿದೆ ಎಂದು ಎಲ್ಲಾ ದಾಖಲೆಗಳನ್ನು ಇಟ್ಟುಕೊಂಡಿದ್ದರೂ, ಈ ಒಂದು ಪ್ರಕರಣವನ್ನು ತನಿಖೆ ಮಾಡುವುದಕ್ಕೂ ಕೂಡ ಆ ಒಂದು ಸ್ಟಾಂಪಿಟ್ ಏನಿದೆ, ಅದಕ್ಕೆ ವಹಿಸಬೇಕೆಂದು ಅವರು ಬಲವಾಗಿ ಆಗ್ರಹ ಮಾಡಿದರು. ಅದನ್ನೇನಾದರೂ ಸರಕಾರದವರು ಒಪ್ಪಿಸಿದ್ದಾರೆಯೇ? ನನಗಂತೂ ಗೊತ್ತಿಲ್ಲ. ಅದಕ್ಕೆ ಒಪ್ಪಿಸಿ, ಅಲ್ಲಿ ಏಕೆ ಕರೀಂಲಾಲಾ ದುಡ್ಡು ಹಾಕಿದ್ದ, ಯಾವ ಬ್ಯಾಂಕ್‌ನಿಂದ ಅಲ್ಲಿಗೆ ಟ್ರಾನ್ಸಫರ್ ಆಯಿತು? ಇನ್ನೂ ಎಲ್ಲೆಲ್ಲಿ ಏನೇನು ಇದೆ ಅವನದ್ದು,

ಇತ್ಯಾದಿಗಳನ್ನು ನಾವು ಕಂಡುಹಿಡಿಯಬೇಕಾಗಿತ್ತು. ನಾನು ಏತಕ್ಕೆ ಇದನ್ನು ಮಧ್ಯೆ ಮಧ್ಯೆ ಹೇಳುತ್ತಾ ಇದ್ದೇನೆ ಅಂದರೆ, ವಿರೋಧಪಕ್ಷಗಳು ಅಂದ ತತ್‌ಕ್ಷಣನೇ ಅವರು ಹೇಳುವುದೆಲ್ಲವನ್ನೂ ರಾಜಕೀಯವಾಗಿಯೇ ಹೇಳುತ್ತಾರೆ, ಅದನ್ನು ಪಕ್ಕಕ್ಕೆ ತಳ್ಳಿ ಹಾಕಿಬಿಡಬೇಕು, ಅದನ್ನು ಒಪ್ಪಿಕೊಳ್ಳದಿದ್ದರೂ ಪರವಾಗಿಲ್ಲ, ಅಂಥ ಒಂದು ಧೋರಣೆ ಏನಿದೆ, ಅದು ರಾಜ್ಯಕ್ಕೆ, ರಾಜ್ಯದ ಆಡಳಿತಕ್ಕೆ, ಅದು ಮಾರಕವಾಗುತ್ತದೆ. ನಾವೆಲ್ಲರೂ ಕೂಡ ಯಾವುದೇ ಪಕ್ಷದವರಾಗಿರಲಿ, ಎಲ್ಲರೂ ನಾಡಿಗೋಸ್ಕರ, ಅದರ ಒಳಿತಿಗೋಸ್ಕರ ಇರುವುದು. ಆದರೆ ಇಲ್ಲಿ ನಡೆಯುತ್ತಾ ಇರುವುದನ್ನು ನೋಡಿದರೆ, ನನಗನ್ನಿಸುತ್ತದೆ, the elected Government itself, has it commited an offence of abetment against the State. ಸ್ಟೇಟ್‌ನ ಇಂಟ್ರೆಸ್ಟ್‌ನ ವಿರುದ್ಧ ಚುನಾಯಿತ ಸರಕಾರ ಏನಿದೆ, ಅದು ಇವೊತ್ತು ಕೆಲಸ ಮಾಡಿಯೇ ಎನ್ನುವಂಥಾದ್ದು ನನಗೆ ಬಹಳ ಮನಸ್ಸಿಗೆ ಅನ್ನಿಸುತ್ತಾ ಇದೆ. ಈ ಒಂದು ಕಾರಣಗಳಿಂದ ನಾವೇನು ಕೇಳಿದ್ದೇವೋ ಆ ಮೂರು ವಿಷಯಗಳೂ ಇವೋತ್ತು ಈಡೇರಿವೆ. ಆದರೆ ಇದು ಮುಂದೆ ಹೋಗಬೇಕು. ಮುಂದೆ ಹೋಗುವುದಕ್ಕೋಸ್ಕರ ನಮ್ಮ ನಾಯಕರೇನು ಕೇಳಿದರು, ಆ ಒಂದು ಬೇಡಿಕೆಯನ್ನು ನಾನು ಕೂಡ ಅನುಮೋದಿಸುತ್ತ ಕೂಡಲೇ ರೋಶನ್ ಬೇಗ್ ಏನಿದ್ದಾರೆ, ಅವರೇನು ರೀಚ್‌ಫೌಂಡೇಶನ್ ಬಗ್ಗೆಯೂ ಹೇಳಿದ್ದಾರೆ, ಅದಕ್ಕೆ ಎಂಟೂವರೆ ಕೋಟಿ ರೂಪಾಯಿಗಳು ಒಂದು ಸಲ ಹಾಗೂ ಬೇರೆ ಬೇರೆ ಹಣವು ಬಂದಿದೆ. ಅದರ ಕಾರ್ಯಕ್ರಮಗಳೇನು ಮುಂತಾಗಿ ಅನೇಕ ಸಂಗತಿಗಳು ಇವೊತ್ತು ನಮ್ಮ ನಾಯಕರು ಹೇಳಿದ್ದಾರೆ. ಅದಕ್ಕೋಸ್ಕರ ರೋಶನ್‌ಬೇಗ್‌ರವರನ್ನೂ ಕೂಡ ತಾವು ರಾಜ್ಯದ ಹಿತದೃಷ್ಟಿಯಿಂದ ಬಂಧಿಸಬೇಕು. ಅವರನ್ನೂ ಕೂಡ ಈ ಪಾಲಿಗ್ರಾಫ್ ಮುಂತಾಗಿ ಹಿಂದೆ ನಾವು ಕೇಳಿರದ ಪದಗಳೇನಿವೆ ಅವುಗಳಿಗೆ ಒಂದು ಪರೀಕ್ಷೆಗೆ ಒಳಪಡಿಸಬೇಕು. ತಾವು ಹೇಳುತ್ತೀರಿ ಇದು ಹಿಂದಿನ ಸರಕಾರದಲ್ಲಿ ನಡೆದದ್ದು ಎಂದು. ಕರೀಂ ಲಾಲಾನದ್ದು ಯಾವಾಗ ಶುರುವಾಯಿತು ಅಂತ? ಇಲ್ಲಿ ಒಂದು ವಿಷಯ ಬರುತ್ತದೆ. ಕೆಲವು ವ್ಯಕ್ತಿಗಳು ಆ ಸರಕಾರದಲ್ಲಿಯೂ ಇರುತ್ತಾರೆ, ಈ ಸರಕಾರದಲ್ಲಿಯೂ ಇರುತ್ತಾರೆ. ಅವರುಗಳು ಕಂಟಿನ್ಯೂಯಿಂಗ್ ವ್ಯಕ್ತಿಗಳು. So will it be a continuing offence? Should we tolerate? ಇದನ್ನೂ ಕೂಡ ಯೋಚನೆ ಮಾಡಿ. ಮೂರನೆಯದಾಗಿ, ಸರಕಾರವು ತನ್ನ ವೈಫಲ್ಯವನ್ನು ಒಪ್ಪಿಕೊಳ್ಳಬೇಕು. ಸರಕಾರವು ತಾನು ಇರುವುದು ಯಾತಕ್ಕೆ? ಆ ಕೆಲಸವನ್ನು ನಾವು ಮಾಡಿದ್ದೇವೂ, ಎಂಬುದನ್ನು ಹೇಳಬೇಕು. ಇಲ್ಲಿ ಬುದ್ಧಿವಂತಿಕೆಗೆ ಮತ್ತು ಪ್ರಾಮಾಣಿಕತೆಗೆ ಬಹಳ ವ್ಯತ್ಯಾಸವಿದೆ. ಪ್ರಾಮಾಣಿಕತೆಯಿಂದ ಕೆಲಸವನ್ನು ಮಾಡುವುದನ್ನು ಬಿಟ್ಟು ಬುದ್ಧಿವಂತಿಕೆಯಿಂದ ಕೆಲಸ ಮಾಡಿ, 26ನೇ ತಾರೀಖು ಸಿಬಿಐಗೆ ಒಪ್ಪಿಸಿ, ಸೆಶನ್ ಬರುತ್ತದೆ ಎಂದು, ಅಥವಾ ಅವರ ಹತ್ತಿರ ರಾಜಿನಾಮೆ ತೆಗೆದುಕೊಂಡು ಹಜ್‌ಗೆ ಹೋಗು ಎಂದು ಹೇಳಿ, ಮುಂತಾಗಿ ಮಾಡುವುದು ಯಾವುದೇ ಒಂದು ಸರಕಾರಕ್ಕೆ ಭೂಷಣವಲ್ಲ. ಈ ದಿಶೆಯಲ್ಲಿ ಸರಕಾರವು ತನ್ನ ವೈಫಲ್ಯವನ್ನೂ ಕೂಡ ಒಪ್ಪಿಕೊಳ್ಳಬೇಕು. ತನ್ನ ನೈತಿಕ ಜವಾಬ್ದಾರಿಯನ್ನು ಒಪ್ಪಿಕೊಳ್ಳಬೇಕೆಂದು ನಾನು ಹೇಳಿ, ಕೂಡಲೇ ನಮ್ಮ ಬೇಡಿಕೆಗಳೇನಿವೆ, ಅವುಗಳನ್ನು ಈಡೇರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್: ಇನ್ನು ಒಟ್ಟಾರೆ 30 ನಿಮಿಷಗಳು ಇವೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಮಾತನಾಡಿ.

+ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಹಿಂದೆ ನಾನು ಒಮ್ಮೆ ಮಾತನಾಡುವಾಗ ಹೇಳಿದ್ದೆ. The business of the Government is to keep the

Government out of business, that is unless the business needs the Government aid.ಎಂದು. ಆದರೆ ಸರಕಾರದಲ್ಲಿದ್ದವರೇ ಈಗ ವ್ಯವಹಾರವನ್ನು ಶುರುಮಾಡಿದ್ದಾರೆ. ಇದು ಸಮಸ್ಯೆಯಾಗಿದೆ. ಅದರಲ್ಲಿ ಯಾರ್ಯಾರು ಇದ್ದಾರೆ ಎಂಬುದು ಇನ್ನೂ ಹೊರಗೆ ಬರಬೇಕಾಗಿದೆ. ನಾನು ಯಾರ ಮೇಲೆಯೂ ನೋಟೀಸ್ ಕೊಟ್ಟಿಲ್ಲ ಮತ್ತು ಯಾರ ಹೆಸರನ್ನೂ ಹೇಳುವುದಕ್ಕೆ ತಯಾರಾಗಿಲ್ಲ. ಹಾಗಾಗಿ ಇದನ್ನು ನೋಡುವಾಗ, ಇಲ್ಲಿ ಕೇವಲ ರಾಜ್ಯ ಸರಕಾರ ಎಂದು ನಾನು ಹೇಳುತ್ತಾ ಇಲ್ಲ. ಇಲ್ಲಿ ಕೇಂದ್ರ ಸರಕಾರದ್ದೂ ಕೂಡ ತಪ್ಪು ಇದೆ. ಬೇರೆ ಬೇರೆ ಎಲ್ಲಾ ರಾಜ್ಯ ಸರ್ಕಾರಗಳೂ ಸೇರಿ ಈ ಒಂದು ಅವಾಂತರ ಆಗಿರುವಂತಹದು. ಕೇವಲ ಕರ್ನಾಟಕ ಸರ್ಕಾರ ಒಂದರದ್ದಲ್ಲ. ಆದರೆ ಸರ್ಕಾರ ನಡೆಸುವವರು ಅದರಲ್ಲಿರುವ ಅಧಿಕಾರಿಗಳು, ಏಕೆಂದರೆ 30 ಸಾವಿರ ಕೋಟಿ ರೂಗಳ ವ್ಯವಹಾರವನ್ನು ಅವ ಒಬ್ಬ ವ್ಯಕ್ತಿ ಮಾಡಲಿಲ್ಲ ಎಂದು ಹೇಳಿದರು. ನಿಜ, ಒಬ್ಬ ವ್ಯಕ್ತಿ ಮಾಡಲಿಲ್ಲ ಅವನಿಗೆ ಇಡೀ government machinery, state and central govts. ಎಲ್ಲಾ machinery ಸೇರಿ ಮಾಡಿತು. ಆದ್ದರಿಂದ ಇಷ್ಟು ದೊಡ್ಡ ವ್ಯವಹಾರ. ಈಗ ರಾಜ್ಯ ಸರ್ಕಾರದ 28 ಸಾವಿರ ಕೋಟಿರೂ ಬಜೆಟನ್ನು ನೋಡಿಕೊಳ್ಳಲಿಕ್ಕೆ ಎಷ್ಟು ಲಕ್ಷ ಜನರಿದ್ದಾರೆ, ಆದರೆ ಒಬ್ಬರ ಕೈಲಿ ಇದನ್ನು ಮಾಡಲಿಕ್ಕೆ ಆಗಲಿಲ್ಲ. ಈ ಒಂದು ಅವ್ಯವಸ್ಥೆಗೆ ಯಾಕೆ ಹೋಯಿತು ಅಂತ ಆಲೋಚನೆ ಮಾಡುವಾಗ ಈ ಕ್ರೈಮ್ ಅನ್ನುವುದು contageous ಆಗಿದೆ. If the government becomes a law braker, it breeds contempt for law, it invites every man to become a law unto himself, ಪ್ರತಿಯೊಬ್ಬನೂ ಅವನವನದೇ ಕಾನೂನು ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಯಾಕೆಂದರೆ ಈ ಸ್ಟಾಂಪ್ ಹಗರಣದಲ್ಲಿ ನಕಲಿ ಛಾಪಾ ತಂದವರದೇ ಒಂದು ಕಾನೂನು, ಅವರು ಪರ್ಯಾಯ ಸರ್ಕಾರವನ್ನೇ ನಡೆಸುತ್ತಿದ್ದಾರೆ, ಸ್ಟಾಂಪನ್ನೇನೂ ಕೇವಲ ಜೇಬಲ್ಲಿಟ್ಟುಕೊಂಡು ಬರಲಿಲ್ಲ, ಇಲ್ಲಿ ರಾಜ್ಯಸರ್ಕಾರದ commercial tax dept. ನ ಗೇಟ್ ಬೇರೆ ಬೇರೆ ಕಡೆಯಲ್ಲಿ, ಆ ಲಾರಿ ಬರುವಾಗ ಇವರೇನು ಮಾಡುತ್ತಿದ್ದರು? ಇವರಿಗೆ ಗೊತ್ತಿರಲಿಲ್ಲವಾ? ಪ್ರತಿಯೊಂದು ಗೇಟಿನಲ್ಲಿ ಪಾಸಾಗುವಾಗ ಇವರಿಗೆ ಗೊತ್ತಿತ್ತು, ಹೇಗೆ ಪೋಲೀಸ್ ಅಧಿಕಾರಿಗಳು ಇದರಲ್ಲಿ ಶಾಮಿಲಾಗಿದ್ದಾರೋ ಹಾಗೆಯೇ commercial tax ಅಧಿಕಾರಿಗಳ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ರಾಜ್ಯ ಸರ್ಕಾರ ಸಿಬಿಐಗೆ ಕೊಡುವುದಿಲ್ಲವೆಂದು ಇಷ್ಟು ದಿವಸ vehement ಆಗಿ ಆರ್ಗ್ಯು ಮಾಡಿ ಈಗ ಸಿಬಿಐಗೆ ಕೊಟ್ಟಿದೆ. ಎಲ್ಲೋ ಒಂದು ಕಡೆಯಲ್ಲಿ ನನಗೆ ಅನುಮಾನ. ಪ್ರಾರಂಭವಾಗಿದೆ. ಈಗ ಶ್ರೀಕುಮಾರ್ ಬಗ್ಗೆ ಎಲ್ಲರೂ ಮಾತನಾಡಿದರು. ಎಲ್ಲರೂ ಅವರಿಗೆ ಕಟ್ಟುತ್ತಾರೆ ಇದು ಬೇಡ ಅಂತ ಎಲ್ಲೋ ಒಂದು ಕಡೆ ಇದನ್ನು ಸಿಬಿಐಗೆ ಕೊಟ್ಟಿದ್ದಾರಾ ಅಂತ ನನಗೆ ಸಂಶಯ ಪ್ರಾರಂಭವಾಗಿದೆ ಯಾಕೆ? ಈ ಹಂತದಲ್ಲಿ ಕೊಟ್ಟರು ಎಂಬ ಅನುಮಾನ. ಯಾಕೆಂದರೆ ಸಿಬಿಐಗೆ ಕೊಟ್ಟ ಕೂಡಲೇ ಅಲ್ಲಿ ಎಲ್ಲಾ ಒಳ್ಳೆಯದು ಆಗುವುದಿಲ್ಲ, ಯಾಕೆಂದರೆ ಸಿಬಿಐನಲ್ಲೇನಾಗುತ್ತಿದೆ ಸಿಒಡಿಯಲ್ಲೇನಾಗುತ್ತಿದೆ ಎಲ್ಲವನ್ನೂ ನೋಡಿದ್ದೇವೆ ನಾವು. ಆದರೆ ಯಾರೋ ಒಬ್ಬ ಒಳ್ಳೆಯ ಅಧಿಕಾರಿಗೆ ತನಿಖೆ ಮಾಡಲು ಕೊಟ್ಟಾಗ, ನನಗೆ ಇನ್ನೊಂದು ಕಡೆ ನೋಡಿದರೆ, ಒಂದು ಕಾಬ್‌ವೆಬ್ ತರಹ, ಜೇಡರಬಲೆಯಲ್ಲಿ ಸಣ್ಣಸಣ್ಣ ಹುಳುಗಳು ಸಿಕ್ಕಿಹಾಕಿಕೊಳ್ಳುತ್ತವೆ, ಆದರೆ ದೊಡ್ಡದೊಡ್ಡದು ಬಂದು ಸಿಕ್ಕಿಹಾಕಿಕೊಂಡಾಗ ಬಲೇನೇ ಹರಿದುಹೋಗುತ್ತದೆ, ಈ ಬಲೆಯಲ್ಲಿ ಎಲ್ಲಾ ರಾಜ್ಯಸರ್ಕಾರಗಳು ಕೇಂದ್ರ ಎಲ್ಲಾ ಸೇರಿ ಎದನ್ನು ಒಂದು ಕಡೆ ಮುಚ್ಚಿಹಾಕುತ್ತಾರೇನೋ ಎಂಬ ಅನುಮಾನ ಶುರುವಾಗಿದೆ.

ಇದ್ದರೆ ಈ ವ್ಯವಸ್ಥೆ ಜಾಲ ಇಷ್ಟು ವರ್ಷಗಳ ಕಾಲ ಸರ್ಕಾರಕ್ಕೆ ಗೊತ್ತಾಗದೆ ಹೇಗೆ ನಡೆಯುತ್ತಾ ಇತ್ತು ಅಂತ. ಇದು total failure on the part of intelligence or the total failure of the government machinery. ಯಾಕೆಂದರೆ ಸರ್ಕಾರವೇ ಇದರ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಬಂದಾಗ ಯಾವ ಅಧಿಕಾರಿ ಆಗಲಿ ಅದಕ್ಕೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಒಂದು ಅನುಮಾನ ಏನಿದೆ ಇದನ್ನು ಪ್ರಥಮವಾಗಿ ಇಂಟರಾಗೇಶನ್ ಮಾಡಿದವರು ಸಾಂಗ್ಲಿಯಾನಾರವರು. ಅವರು ಇಂಟರಾಗೇಶನ್ ರಿಪೋರ್ಟ್ ಏನು ಹೇಳುತ್ತದೆ, ಯಾಕೆಂದರೆ ಪತ್ರಿಕೆಗೆ ಹೋಗಿದ್ದು ಸಾಂಗ್ಲಿಯಾನಾ, ಅವರ ವರದಿ ಇದೆ, ಸಾಂಗ್ಲಿಯಾನಾ ಅವರನ್ನೇನಾದರೂ ಇಂಟರಾಗೇಶನ್ ಮಾಡಿದ್ದಾರಾ ಅಂತ ಪುನ: ಮಾಡಬೇಕಾಗುತ್ತದೆ. ಯಾಕೆಂದರೆ ಸಾಂಗ್ಲಿಯಾನಾ ಇಂಟರಾಗೇಶನ್ ಮಾಡಿದಾಗ ಅವರ ಹತ್ತಿರ ರಿಪೋರ್ಟ್ ಇದ್ದಾಗ ಅವರು ಇನ್ನೂ ಅನೇಕ ವಿಷಯಗಳನ್ನು ಹೇಳಲಿಕ್ಕೆ ಸಾಧ್ಯವಾಗುತ್ತದೆ. ಮೊದಲು ಒಂದು ಗಂಟೆ ಕಾಲ ಅವರೇನು ಮಾಡಿದ್ದರು ಅದರಲ್ಲಿದ್ದ ವಿಷಯಗಳೆಲ್ಲಾ ಹೊರಗೆ ಬರಬೇಕಾಗುತ್ತದೆ. ಮತ್ತೆ ಬಾಂಬೆ ಹೈಕೋರ್ಟಿನವರು ರಾಜ್ಯಸರ್ಕಾರವನ್ನು ಕ್ಯಾಸೆಟನ್ನು ಕೇಳಿದರು, ಬಾಂಬೆ ಹೈಕೋರ್ಟಿನವರು ಬಹಳ ಕಠಿಣ ನಿಲುವು ತೆಗೆದುಕೊಳ್ಳುವವರೆಗೆ ರಾಜ್ಯ ಸರ್ಕಾರ ಕ್ಯಾಸೆಟ್ ಕೊಡಲು ಒಪ್ಪಲಿಲ್ಲ. ಆ ಕ್ಯಾಸೆಟಿನಲ್ಲಿ ಏನೇನಿದ ಇವನ್ನೆಲ್ಲಾ ಸ್ವಲ್ಪ ಹೊರಗೆ ತರಬೇಕು. ನಮಗೇನಾಗಿದೆ ಅಂದರೆ ರಾಜಕಾರಣಿಗಳು ಅನ್ನುವಾಗ ಒಂದು ತರಹ ನಾಚಿಕೆ ಆಗಲು ಶುರುವಾಗಿದೆ. ನಾವು ತಲೆತಗ್ಗಿಸಿ ತಿರುಗಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವರೆಲ್ಲರೂ ಒಂದು ಕಡೆ ಪೀಡೆ ತೊಲಗಿತು ಅಂತ ಹೋಗಿಬಿಟ್ಟರೆ ಉಳಿದವರಿಗೇನಾದರೂ ಮರ್ಯಾದೆ ಸಿಗುತ್ತಾ ಅಂತ ನೋಡುವಂತಹ ಆಲೋಚನೆ ಇದೆ. ಇವತ್ತು ಕೋಟ್ಯಂತರ ರೂಪಾಯಿಗಳನ್ನು ಬಾಂಬೆ ಬ್ಯಾಂಕಿನಿಂದ ಬೆಂಗಳೂರಿಗೆ ವರ್ಗಾವಣೆ ಮಾಡಿದರು, ಹಾಗಾದರೆ Income Tax ನವರು ಏನು ಮಾಡುತ್ತಿದ್ದರು? ಇಷ್ಟೊಂದು ಕೋಟ್ಯಂತರ ರೂಪಾಯಿಗಳನ್ನು ಒಂದು ಅಕೌಂಟಿನಿಂದ ಇನ್ನೊಂದು ಅಕೌಂಟಿಗೆ ವರ್ಗಾವಣೆಯಾಗುವಾಗ ಈ ವ್ಯವಹಾರ ಏನು ಯಾರದು ಅಂತ income tax ನವರು ನೋಡಲಿಲ್ಲ. ಕೊನೆಗೆ ಹೇಳುತ್ತಾರೆ ಕೊನೆಗೆ ಒಂದು ದಿವಸ ಬರುತ್ತದೆ, IT dept. wakes up ಅಂತ, ಅಂದರೆ ನಿದ್ರೆಯಲ್ಲಿದ್ದರು ಅಂತ ಪತ್ರಿಕೆಯವರು ಬರೆಯುತ್ತಾರೆ. ನಿದ್ರೆಯಲ್ಲಿದ್ದ IT dept.ನವರು ಎದ್ದು 7-11-2002ರ ವರದಿ ಅಂದರೆ ಮೂರ್ನಾಲ್ಕು ವರ್ಷಗಳ ಕಾಲ ನಿದ್ರೆಯಲ್ಲೇ ಇದ್ದರು, then they got up. ಇಷ್ಟು ಹಣ ಎಲ್ಲಿ ಹೇಗೆ ವರ್ಗಾವಣೆಯಾಯಿತು ಅವನ ಅಸೆಟ್ಸ್ ಎಷ್ಟಿದೆ ಅದನ್ನು ಮುಟ್ಟಗೋಲು ಹಾಕಲಿಕ್ಕೆ ಪ್ರಯತ್ನ ಮಾಡಿದಂತೆ. ಕೇಂದ್ರ ಸರ್ಕಾರದಲ್ಲಿ ಇದರ ಬಗ್ಗೆ ಮಾನ್ಯ ಮುದ್ದಹನುಮೇಗೌಡರು ಹೇಳಿದರು, ರಾಜ್ಯಸರ್ಕಾರದಿಂದ ಜಸ್ವಂತ ಸಿಂಗ್ ಅವರಿಗೆ ಪತ್ರ ಬರೆದಿದ್ದರು ಅಂತ, ಅದನ್ನು ಮಾನ್ಯ ಶಿವಾನಂದ ಪಾಟೀಲರು ಕೇಳಿದರು, it has become the part of the House ಅಂತ, ಅದು Supreme Court ನಲ್ಲಿ ಫೈಲ್ ಮಾಡಿರುವಾಗ ಅದರ ಒಂದು ಅಫಿಡವಿಟನ್ನು ಮಾನ್ಯ ಸುರೇಶಕುಮಾರ್ ಇಲ್ಲಿ ಓದಿದರು, ಪ್ರಾಯಶ: ಇವೆಲ್ಲವನ್ನೂ ರಿಪ್ಲೈ ಮಾಡುವಾಗ ಸದನದ ಗಮನಕ್ಕೆ ತಂದರೆ ಒಳ್ಳೆಯದು ಒಂದು ವೇಳೆ ರಾಜ್ಯ ಸರ್ಕಾರದಿಂದ ಪತ್ರ ಹೋಗಿದ್ದರೆ ಕೇಂದ್ರ ಸರ್ಕಾರ ಏನು ಕ್ರಮ ತೆಗೆದುಕೊಂಡರು? ಒಂದು ವೇಳೆ ತೆಗೆದುಕೊಳ್ಳದೇ ಇದ್ದರೆ ಸೆಕ್ಯುರಿಟಿ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಆ ಆಬ್‌ಸೂಲೇಟ್ ಮೆಶಿನನ್ನು ಆಕ್ಷನ್ ಮಾಡಿದರಲ್ಲಾ ಆ ಆ್ಯಕ್ಷನ್ ಮಾಡಿದವರು ಯಾರು? ಅವರ ಮೇಲೆ ಕ್ರಮ ತೆಗೆದುಕೊಳ್ಳದೆ ಅಷ್ಟು ವರ್ಷ ಕಾಲ ಸುಮ್ಮನೆ

ಕೂತರೆ ಏನು ಪ್ರಯೋಜನ ಅಲ್ಲಿ ಸಹ ಯಾರೋ ವ್ಯಕ್ತಿಗಳಿದ್ದಾರೆ, ಕೇಂದ್ರ ಸರ್ಕಾರದಲ್ಲಿದ್ದ ಮಂತ್ರಿಗಳ ಹೆಸರು ಬಂದಾಗ ಮಾನ್ಯ ರಾಮದಾಸ್ ಅವರು ಅಲ್ಲಿ ನಿಮ್ಮ ವಿರೋಧ ಪಕ್ಷದವರು ಮಾತನಾಡಲಿ ಅಂತ ಹೇಳಿದರು, ಪ್ರಾಯಶ: ಅಲ್ಲಿ ವಿರೋಧ ಪಕ್ಷದವರು ಮಾತನಾಡಲಿಲ್ಲವೆಂದರೆ ಇಲ್ಲಿ ನಾವು ಎತ್ತಬೇಕಾಗುತ್ತದೆ. ಜನರಿಗೆ ಅದನ್ನು ತೋರಿಸುವ ಜವಾಬ್ದಾರಿ ನಮ್ಮ ಮೇಲೆ ಸಹ ಇದೆ. ಒಂದು ವೇಳೆ ಕೇಂದ್ರ ಸರ್ಕಾರ ಎಡವಿದ್ದರೆ ಅದರ ಮಂತ್ರಿಗಳ ಹೆಸರು ಹೇಳುವ ಅವಶ್ಯಕತೆ ಇಲ್ಲ. ಪತ್ರಿಕೆಗಳಲ್ಲಿ ಬಂದಿದೆ, ನಾರ್ಕೊ ಅನಾಲಿಸಿಸ್ ಹಾಗೂ ಫಾಲಿಗ್ರಫಿ ಟೆಸ್ಟ್‌ನಲ್ಲಿ ಬಂದಿದೆ. though it is not the conclusive evidence ಯಾವುದು ಪಾಲಿಗ್ರಫಿ ಮತ್ತು narco analysis test are not conclusive evidence, it helps the further investigation ಅಷ್ಟು ಬಿಟ್ಟರೆ ಇದರಿಂದ ಕೋರ್ಟಿನಲ್ಲಿ ದಾಖಲೆ ಸಲ್ಲಿಸಿ ಅವರ ಮೇಲೆ ಕ್ರಮ ಜರುಗಿಸಲು ಆಗುವುದಿಲ್ಲ. ಆದರೆ ಈ ಹೇಳಿಕೆಗಳಿಂದ ಏನು ಹೊರಬಂದಿದೆ ಕೆಲವೊಂದು contradictions ಇದೆ, ಇವುಗಳಿಂದ investigation ಗೆ ಮಾತ್ರ ಸಹಾಯವಾಗುತ್ತದೆ. ನಮ್ಮ ಶ್ರೀಕುಮಾರರ ಹೇಳಿಕೆ ಒಂದಿದೆ ಛಾಪಾ ಕಾಗದದಡಿ ಇನ್ನೂ 10-12 ಮಂದಿಯನ್ನು ಬಂಧಿಸುವ ಸಾಧ್ಯತೆ ಇದೆ ಅಂತ ನೇರವಾಗಿ ಇಂತಿಂಥ ವ್ಯಕ್ತಿಗಳು ಅಂತ ಹೇಳಿದರೆ ಉಳಿದವರಿಗಾದರೂ ಸ್ವಲ್ಪ ಗೌರವ ಬರುತ್ತದೆ. ದಯವಿಟ್ಟು ಯಾರ್‍ಯಾರು ವ್ಯಕ್ತಿಗಳ ಮೇಲೆ ಈ polygraph and narco analysis test ನಲ್ಲಿ ಹೆಸರು ಹೇಳಿದ್ದಾರೆ ಅವರ ಹೆಸರುಗಳನ್ನು ಹೊರಗೆ ತರಬೇಕು. ಅದು ಮಂತ್ರಿಗಳಾಗಲಿ ವಿರೋಧ ಪಕ್ಷದವರಾಗಲಿ ಯಾವ ರಾಜಕಾರಣಿಯಾಗಲಿ ಅಧಿಕಾರಿಗಳೇ ಆಗಲಿ ಅವರ ಹೆಸರು ಹೇಳುವ ಪ್ರಯತ್ನ ಮಾಡಿ ಅಂತ ನಾನು ತಮ್ಮ ಮುಖೇನ ಸರ್ಕಾರವನ್ನು ಕೇಳುತ್ತೇನೆ. ಮತ್ತೆ ಜೈಲಿನಲ್ಲಿ ಇವರಿಗೆ ಸಹಕಾರವನ್ನು ಕೊಟ್ಟದ್ದು ಪ್ರಾಯಶ: ಇದು ಹೊಸದಲ್ಲ ಅಂತ ಕಾಣುತ್ತದೆ, ಜೈಲಿನಲ್ಲಿ ನಡೆಯುತ್ತಿರುವುದೇ ಇದು, ಹರ್ಷದ್ ಮೆಹ್ತ ಕೇಸಿನಲ್ಲೂ ಇದು ನಡೆಯುತ್ತದೆ, ಆದರೆ ಎಲ್ಲಾ ಕಣ್ಣುಮುಚ್ಚಿಕೊಂಡೇ ಕೂತಿದ್ದಾರೆ ಇವತ್ತು ಅದನ್ನು ದೊಡ್ಡದಾಗಿ ಅರೆಸ್ಟ್ ಮಾಡಿದ್ದಾರೆ, ಅರೆಸ್ಟಾ ಮಾಡಿದ್ದು ಯಾಕೆ? ಅದರಿಂದ ಏನಾದರೂ ಹೊರಗೆ ಬಂದಿದೆಯಾ? ಮಾನ್ಯ ಸುರೇಶಕುಮಾರ್ ಇನ್ನೊಂದು ಮಾತು ಹೇಳಿದರು, ಸೆಲ್‌ಪೋನ್ ಕೊಟ್ಟಿದ್ದು ಅವನಿಂದ ಮಾಹಿತಿ ತೆಗೆದುಕೊಳ್ಳಲಿಕ್ಕೆ ಅಂತ, ಹಾಗಾದರೆ ಅವನಿಂದ ಏನೇನು ಮಾಹಿತಿ ಸಿಕ್ಕಿದೆ? ಸೆಲ್‌ಪೋನ್ ಮೂಲಕ ಯಾರ್‍ಯಾರನ್ನು ಸಂಪರ್ಕಿಸಿದ್ದಾನೆ ಅದರ ಮಾಹಿತಿಯನ್ನೆಲ್ಲಾ ಕೊಡಬೇಕಾಗುತ್ತದೆ. ಕೇವಲ ಅವನಿಗೆ ಸೆಲ್‌ಪೋನ್ ಕೊಟ್ಟು ಮಾಹಿತಿ ಅವನಿಂದ ಸಂಗ್ರಹಿಸಿದ್ದು ಮಾತ್ರವಲ್ಲ, ಅದಕ್ಕೋಸ್ಕರ ಈ ಸೆಲ್‌ಪೋನ್ ಕೊಟ್ಟು ಮಾಹಿತಿ ಪಡೆದ ವಿಷಯದಲ್ಲಿ ಸಹ ನೀವೇನು ಮಾಡಿದ್ದೀರಿ ಎಂದು ಕೇಳಿದರು. ಮಾನ್ಯ ಸೋಮಶೇಖರ್‌ರವರು ಕ್ರಮ ಕೈಗೊಂಡಿದ್ದಾರೆ. ಅವರ ಅಧಿಕಾರದ ಕೊನೆಯ ಸಂದರ್ಭದಲ್ಲಿ ಇದರ ಬಗ್ಗೆ ಮಾಹಿತಿ ಸಿಕ್ಕಿತ್ತು ಅದರ ಬಗ್ಗೆ ಸಾಕಷ್ಟು ಕ್ರಮವನ್ನು ಕೈಗೊಂಡಿದ್ದರು, ನಂತರದ ಸರ್ಕಾರ ಅದನ್ನು ಮುಂದುವರೆಸಿಕೊಂಡು ಯಾಕೆ ಹೋಗಲಿಲ್ಲ ಎಂಬುದು; They should have continued ಅವರು ಏನನ್ನು ಪ್ರಾರಂಭ ಮಾಡಿದ್ದರು, ಅವರು ಸರ್ಕಾರದಿಂದ ಹೊರಗೆ ಬಂದು ಎಷ್ಟು ವರ್ಷದ ನಂತರ ಅವನನ್ನು ನೀವು ಅರೆಸ್ಟ್ ಮಾಡಿದ್ದು? ಅಲ್ಲಿಯವರೆಗೆ ತನಿಖೆ ಏನೇನು ನಡೆಯಿತು? ಅಷ್ಟು ವರ್ಷಗಳ ಕಾಲ ಯಾಕೆ ಸುಮ್ಮನೆ ಕೂತಿದ್ದರು? ಅವರು ಕಂಟಿನ್ಯೂ ಆಗಿದ್ದರೆ probably he would have done it,ಅವರು ಅಧಿಕಾರದಲ್ಲಿರಲಿಲ್ಲ ಅವರಿಗೆ ಮಾಡಲಿಕ್ಕೆ ಆಗಲಿಲ್ಲ ಒಂದು ಕಡೆ ನಾವು ನೀವು ಏನು

ಮಾಡಿದಿರಿ ಎಂದು ಹೇಳುವುದು, ಮಾನ್ಯ ಖರ್ಗೆಯವರು ಒಂದು ಮಾತು ಹೇಳಿದರು, ಹೌದು ನಾನು ಇಂತಹ ಮಾತು ಹೇಳಿದ್ದೇನೆ, you deserve it ಅಂದರು, I am sorry, ಖರ್ಗೆಯವರಂತಹ senior minister ಆ ಮಾತು ಹೇಳಬಾರದಿತ್ತು, ಯಾಕೆಂದರೆ ನಾನು ಅವರು ಹೇಳಿದ್ದನ್ನು ಸದನದಲ್ಲಿ ತೋರಿಸಿದ್ದೇನೆ. ಮಾನ್ಯ ಸೋಮಶೇಖರ್ unparliamentary word use ಮಾಡಿದ್ದರೆ ಅದನ್ನು expunge ಮಾಡಬೇಕಾಗುತ್ತಿತ್ತು. ಹೌದು, ಅದು ಸರಿ, ನಾನು ಹೇಳಿದ್ದು ಸರಿ, you deserve it, ಎಂದು ಹೇಳಿದಂಥದ್ದು expunge ಆಗಬೇಕಾದಂಥದ್ದು. ಆದ್ದರಿಂದ ಹಿಂದಿನ ಸರ್ಕಾರ ತಪ್ಪು ಮಾಡಿದೆ, ನೀವು ಹೋಗಿ ಅಲ್ಲಿ ಕುಳಿತುಕೊಳ್ಳಿ, ನಿಮಗೆ don't get the certificate to do the same mistake... ಅವರು mistake ಮಾಡಿದ್ದರೆ ಅದೇ ತಪ್ಪನ್ನು ಮಾಡಲಿಕ್ಕೆ ನಿಮ್ಮನ್ನು ಅಲ್ಲಿ ಕೂರಿಸಲಿಲ್ಲ. ಒಂದು ವೇಳೆ ಹಿಂದಿನ ಸರ್ಕಾರ ತಪ್ಪು ಮಾಡಿದ್ದರೆ ಅವರು ಹೊರಗೆ ಹೋಗಿದ್ದಾರೆ. ಅದನ್ನು ಸರಿಪಡಿಸಿಕೊಂಡು ಹೋಗಿ ನಿಮ್ಮನ್ನು ಅಲ್ಲಿ ಕೂರಿಸಿರುವಂಥದ್ದು ಮತ್ತೆ ಒಂದು ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಸೋಮಶೇಖರ್‌ರವರ ಹತ್ತಿರ ಕೇಳಿದರು, I agree with the Hon'ble Chief Minister, ಇದು ಅಲಹಾಬಾದ್‌ನ ಕೋರ್ಟ್‌ನ ಜಡ್ಜ್‌ಮೆಂಟ್ whether it is binding ಅಥವಾ ಬಾಂಬೆ ಹೈಕೋರ್ಟಿನಲ್ಲಿ ಅದಕ್ಕೆ ವಿರುದ್ಧವಾದ ಆದೇಶವನ್ನು ಏನು ಕೊಟ್ಟಿದ್ದಾರೆ, we can rely on the judgements of other High Courts, but it is not binding ಆದರೆ ಇವೆರಡೂ ವ್ಯತಿರಿಕ್ತವಾಗಿದ್ದಾಗ ಸುಪ್ರೀಂ ಕೋರ್ಟ್‌ನವರು ಅದನ್ನು ಕ್ಲಾರಿಫೈ ಮಾಡಬೇಕಾಗುತ್ತದೆ, ಅದನ್ನು ಬಿಟ್ಟರೆ ಅದನ್ನು ಸರ್ಕಾರದವರು interpret ಮಾಡಲಿಕ್ಕಾಗುವುದಿಲ್ಲ. I agree with the Hon'ble Chief Minister so far as that is concerned.ಈ ತಿನೇಕರ್ ಬಗ್ಗೆ ತಿನೇಕರ್‌ರವರು ಇದನ್ನು ಪ್ರಥಮವಾಗಿ ಹೊರಗೆ ತಂದರು ಎಂದು ಹೇಳಿದರು. ನಾನು Indian Expressನಲ್ಲಿ ಒಂದು Article ನ್ನು ಓದಿದೆ. That is not my information... He had link with the Kareemlala ಎನ್ನುವಂಥದ್ದು. ನೀವು ಅದರ ಬಗ್ಗೆ ಏಕೆ ತನಿಖೆಯನ್ನು ಮಾಡಿದಿರಿ? ಒಂದು ವೇಳೆ ಅಂಥದ್ದು ಇದ್ದರೆ ಅವರದ್ದು association ಇದ್ದರೆ, even if he were to be involved in such a scandal ಅದರ ಬಗ್ಗೆ ತನಿಖೆಯನ್ನು ಮಾಡಿ ಅದರ ಬಗ್ಗೆ ತಿನೇಕರ್ ಆಗಲಿ, ಅವರು if he is trying to take credit for giving information ಒಂದು ವೇಳೆ ಅದು ಅಲ್ಲ ಎಂದಾಗಿದ್ದರೆ if he is involved with Kareemlala ಅದರ ಬಗ್ಗೆ ತನಿಖೆಯನ್ನು ಮಾಡಿ. ಅವರ ಹಿನ್ನೆಲೆ ಏನು ಇದೆ, ಅವರು ಅದರಲ್ಲಿ involve ಆಗಿದ್ದರೆ ಮೊದಲು ಅವರೊಟ್ಟಿಗೆ business ನಲ್ಲಿದ್ದರಾ? ಈಗ business rivalry ನಿಂದ ಹೊರಗೆ ಬಂದಾಗ ಅವರು ಏನಾದರೂ ಹೊರಗೆ ಹಾಕಲಿಕ್ಕೆ ಪ್ರಯತ್ನವನ್ನು ಮಾಡಿದರಾ? ಇದನ್ನೂ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ಸುಮ್ಮನೆ allegation ನ್ನು ಮಾಡುವುದಕ್ಕಾಗುವುದಿಲ್ಲ. ಒಂದು ವೇಳೆ ಅದು ಹೌದಾಗಿದ್ದರೆ you need to take action against every person who is involved in it ಅದಕ್ಕೋಸ್ಕರ ತಿನೇಕರ್ ಬಗ್ಗೆ ಸ್ವಲ್ಪ ಮಾಹಿತಿಯನ್ನು ಕೊಡಬೇಕಾಗುತ್ತದೆ. ಒಂದು ಕಡೆಯಲ್ಲಿ ಅವರು ಹೇಳಿದ್ದಾರೆ, ನಾನು ಯಾವ ರಾಜಕೀಯ ಪಕ್ಷಕ್ಕೂ ಸೇರಲಿಲ್ಲವೆಂದು. ಆದರೆ ರಾಜಕೀಯ ಪಕ್ಷದ ವೇದಿಕೆಯಲ್ಲಿ ಹೋಗಿ ಅವರು ಎಲ್ಲಾ ಕಡೆಗಳಲ್ಲಿ ಭಾಷಣವನ್ನು ಮಾಡುತ್ತಿದ್ದಾರೆ. ಭಾಷಣವನ್ನು ಬೇರೆ ವೇದಿಕೆಯಲ್ಲಿ ಮಾಡುತ್ತಿಲ್ಲ,

ಒಂದು ವೇಳೆ ಅವರೇ separate ವೇದಿಕೆಯಲ್ಲಿ ಮಾಡಿ Press conference ನ್ನು ಮಾಡಿದರೆ ನಾನು ಅವರ ಬಗ್ಗೆ ಹೆಚ್ಚು ಗೌರವವನ್ನು ಇಡುತ್ತಿದ್ದೆ. ಆದರೆ ಅದರಿಂದ ರಾಜಕೀಯ ಲಾಭ ಪಡೆಯುವುದಕ್ಕೆ ಅವರು ಎಲ್ಲೋ ಒಂದು ಕಡೆಯಲ್ಲಿ ಪ್ರಯತ್ನವನ್ನು ಮಾಡುತ್ತಿದ್ದಾರೆ ಎನ್ನುವ ಬಗ್ಗೆ ಸಹಾ ನೀವು ಸ್ವಲ್ಪ ಗಮನವನ್ನು ಹರಿಸಬೇಕಾಗುತ್ತದೆಂದು ಹೇಳುತ್ತಾ ಈ ಕಾನೂನಿನಲ್ಲಿ ದೊಡ್ಡ ಸಮಸ್ಯೆ ಇದೆ ಮಾನ್ಯ ಅಧ್ಯಕ್ಷರೇ, law is not justice and trial is not a scientific enquiry ಇವತ್ತೇನು ತನಿಖೆಯನ್ನು ಮಾಡುತ್ತಿದ್ದಾರೆ ಇದು scientific enquiry ಅಲ್ಲ, ಇದು ಸತ್ಯವನ್ನು ಹೊರಗೆ ತರಲಿಕ್ಕೆ ಸಾಧ್ಯವಾಗುತ್ತಿಲ್ಲ. Trial is a resolution of a dispute ಎಂದು ಒಬ್ಬರು ಜಡ್ಜ್ ಹೇಳಿದ್ದಾರೆ. ಅಂದರೆ ನಮ್ಮಲ್ಲಿ ಒಂದು ದೊಡ್ಡ ಸಮಸ್ಯೆಯಾಗಿರುವುದೇನೆಂದು ಹೇಳಿದರೆ ದೊಡ್ಡ ದೊಡ್ಡ criminals ಗೆ ಅವರ ಮುಂದೆ ಸಾಕ್ಷಿ ಹೇಳುವವರೆ ಇಲ್ಲ. ಅವರಿಗೆ ನ್ಯಾಯಾಲಯದಲ್ಲಿ conviction ಕೂಡ ಆಗುವುದಿಲ್ಲ. ಯಾವುದೋ ಒಬ್ಬ ಬಡಪಾಯಿ ಮೇಲೆ ಪೋಲೀಸ್ ಕೆಲವೊಮ್ಮೆ ರಾಜಕೀಯ ಒತ್ತಡಕ್ಕೋಸ್ಕರ ಕೇಸನ್ನು foist ಮಾಡುತ್ತಾರೆ, implicate ಮಾಡುತ್ತಾರೆ, ಅವರ ಮೇಲೆ ಹೇಳುವುದಕ್ಕೆ ನೂರು ಜನ ಸಾಕ್ಷಿಗಳು ಇರುತ್ತಾರೆ ಅಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ಕಾನೂನಿನಲ್ಲಿ ನ್ಯಾಯ ಸಿಗುತ್ತದೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತು ಕಾನೂನು ಶ್ರೀಮಂತರಿಗೊಂದು, ಬಡವರಿಗೊಂದು ಆಗಿದೆ. ಜೈಲಿನಲ್ಲಿ ಯಾವ ರೀತಿ ಶ್ರೀಮಂತ ಖೈದಿಗಳಿಗೆ ಒಂದು ರೀತಿಯಲ್ಲಿ ಸಹಾಯವನ್ನು ಕೊಡುತ್ತಿದ್ದಾರೆ, ಬಡ ಖೈದಿಗೆ ಬೇರೆ ರೀತಿಯಲ್ಲಿ ಕೊಡುತ್ತಾರೆ, ಅದೇ ರೀತಿ ಪೊಲೀಸ್ ಸ್ಟೇಷನ್‌ನಲ್ಲೂ ಆಗುತ್ತಿದೆ. ಪ್ರಾಯಶ: ನ್ಯಾಯಾಲಯದಲ್ಲಿ ನ್ಯಾಯ ಸಿಗುವಾಗ ಸಹಾ ಸಾಕ್ಷಿಗಳು ಕೋರ್ಟಿಗೆ ಹೋಗಿ ಸಾಕ್ಷಿ ಹೇಳುವ ಧೈರ್ಯವನ್ನು ಮಾಡುವುದಿಲ್ಲ, ಏಕೆಂದರೆ ನಾವು ಪತ್ರಿಕೆಗಳಲ್ಲಿ ನೋಡುತ್ತೇವೆ, ದೊಡ್ಡ ದೊಡ್ಡ criminals ಮೇಲೆ ಯಾವುದೇ ಒಂದು ಸಾಕ್ಷಿಯನ್ನು ಹೇಳುವುದಕ್ಕೆ ಬರದೆ ಎಲ್ಲಾ acquittal ಆಗುತ್ತಿರುವುದನ್ನು ನೋಡುತ್ತಿದ್ದೇವೆ. ಇಂಥ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಆ ಸಾಕ್ಷಿಗಳಿಗೆ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಏಕೆಂದರೆ ರಕ್ಷಣೆಯನ್ನು ಶಾಶ್ವತವಾಗಿ ಕೊಡಲಿಕ್ಕಾಗುವುದಿಲ್ಲ. ಕೆಲವೊಮ್ಮೆ ಅವರು ಹೇಳಿದ ಕೊಡಲೇ ಮನೆಗೆ ಹೋಗಿ ಬೆದರಿಸುವಂಥದ್ದು ಉಂಟು. ಕೆಲವೊಮ್ಮೆ ಯಾರೋ innocent ಒಬ್ಬರನ್ನು ಕೇಸ್‌ನಲ್ಲಿ ಸೇರಿಸುತ್ತಾರೆ. ಅವರ ಮೇಲೆ ಸಾಕ್ಷಿಯನ್ನು ಹೇಳುವುದಕ್ಕೆ ರಾಜಕೀಯ ದ್ವೇಷದಿಂದ ಬಹಳ ಜನರು ಇರುತ್ತಾರೆ. ಅವರಿಗೆ conviction ನ್ನು ಮಾಡಿಸುವ ಪ್ರಯತ್ನವನ್ನು ಮಾಡುತ್ತಾರೆ. ಅದಕ್ಕೋಸ್ಕರ ಈ ಒಂದು ವ್ಯವಸ್ಥೆಯಲ್ಲಿ ಈ ಕೇಸ್ ಏನಾಗಿದೆ, ಒಟ್ಟು 30 ಸಾವಿರ ಕೋಟಿರೂ ವ್ಯವಹಾರವನ್ನು ಮಾಡಿದ ಒಬ್ಬನೇ ವ್ಯಕ್ತಿಯಲ್ಲ. ಅದರ ಹಿಂದೆ ಇರುವ ಗೌರ್ನಮೆಂಟ್ ಮೆಷಿನರಿಯ nexus with the politicians ಇದನ್ನೆಲ್ಲಾ expose ಮಾಡುವಂಥದ್ದು ಬಹಳ ಅಗತ್ಯ ಇದೆ. ಏಕೆಂದರೆ ದಿನನಿತ್ಯ ಪತ್ರಿಕೆಯಲ್ಲಿ ಬರುವಂಥದ್ದು, ಏಕೆಂದರೆ ಇವತ್ತು Election Commissioner ಹೇಳಿದ ಬಗ್ಗೆ ಮಾತನಾಡಿದರು. ಪ್ರಾಯಶ: I don't agree with what the Elecction Commissioner has said. He has no business to make such a statement. ಅದಕ್ಕೆ ಧೈರ್ಯವಾಗಿ ಉತ್ತರ ಹೇಳುವುದಕ್ಕೆ ನಮ್ಮ ದೊಡ್ಡ ದೊಡ್ಡ ಲೀಡರ್ಸ್ ಯಾರೋ ತಯಾರಿಲ್ಲ. ತಲೆ ತಗ್ಗಿಸಿಕೊಂಡು ಕುಳಿತಿದ್ದಾರೆ. It is a shame ಯಾರು ರಾಜಕಾರಣಿಗಳು ಅವರ ಮಾತನ್ನು ಕೇಳಿಕೊಂಡು ಕುಳಿತಿದ್ದಾರೆ. It is a

shame on their part. They should have told him that it is none of his business ನಿನ್ನ ಕೆಲಸ ಎಷ್ಟಿದೆ, ಅಷ್ಟನ್ನು ನೋಡಬೇಕೆಂದು ಹೇಳುವಂಥದ್ದು ಆಗುತ್ತದೆ. ಈಗ ರಾಜಕಾರಣಿಗಳು ಎಲ್ಲರೂ ಭ್ರಷ್ಟರು ಎಂದು ಹೇಳಬಾರದು. ಅಧಿಕಾರಿಗಳು ಎಲ್ಲರೂ ಭ್ರಷ್ಟರಲ್ಲ. ಒಳ್ಳೆಯವರಿಗೆ give credit ಆಗ ಒಳ್ಳೆಯವರನ್ನು ಇನ್ನೂ ಸ್ವಲ್ಪ ಕಾಣಲಿಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆ, ಭ್ರಷ್ಟ ಇದ್ದವರನ್ನೂ ಒಳ್ಳೆಯ ರಾಜಕಾರಣಿಗಳ ಮಧ್ಯದಲ್ಲಿ ಸೇರಿಸಿದಾಗ ಎಲ್ಲರಿಗೂ ಹೇಳಿದ್ದಾರೆ, ನನಗೇನಾಗಬೇಕು ಎನ್ನುವ ಪರಿಸ್ಥಿತಿ ಉಂಟಾಗುತ್ತದೆ. ಅದಕ್ಕೋಸ್ಕರ ಇನ್ನು ಯಾರಾದರೂ ಅಧಿಕಾರಿಗಳು ಹತ್ತು ಜನ ಇದ್ದಾರೆ, ಇಪ್ಪತ್ತು ಜನರು ಇದ್ದಾರೆ ಎಂದು investigation ನಲ್ಲಿ ಹೇಳಬಾರದು. ಇಂಥಿಂಥವರೇ ಇದ್ದಾರೆಂದು ನೇರವಾಗಿ ಹೇಳುವಂಥ ಪರಿಸ್ಥಿತಿ ಬಂದಾಗ ಮಾತ್ರ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ದಯವಿಟ್ಟು ಇಂಥ sweeping remarks ನ್ನು ಮಾಡುವಂಥದ್ದನ್ನು ನಿಲ್ಲಿಸುವ ವ್ಯವಸ್ಥೆಯನ್ನು ನಾವು ಮಾಡಬೇಕಾಗುತ್ತದೆಂದು ಹೇಳುತ್ತಾ ತಾವು ಸಮಯವಾಯಿತು ಎಂದು ಹೇಳಿದಿರಿ, ತಾವು ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ಮಾನ್ಯ ಕರಿಯಣ್ಣನವರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾವು ಎಲ್ಲಾ ಇದ್ದೇವೆ, ಮಾತನಾಡುವುದಕ್ಕೆ.

ಛೇರ್ಮನ್: ಇವತ್ತು ಚರ್ಚೆ ಎಂದು ಹೇಳಿ ಇಟ್ಟಿದೆ. ತಾವೇ ಕೇಳಿದಿರಿ. ಇಟ್ಟಿದೆ ನಾಳೆ ಉತ್ತರ ಎಂದು ಹೇಳಿ ಇಟ್ಟಿದೆ. ತುಂಬಾ ಜನರು ಮಾತನಾಡುವವರು ಇದ್ದಾರೆ. ಮೊದಮೊದಲು ಮಾತನಾಡುವಂಥ ನಾಯಕರುಗಳು ಸಮಯದ ಬಗ್ಗೆ ಸ್ವಲ್ಪ ಕಡಿವಾಣವನ್ನು ಹಾಕಿಕೊಂಡರೆ ಕೊನೆಗೆ ಮಾತನಾಡುವವರಿಗೆ ಅನುಕೂಲವಾಗುತ್ತದೆ. ಒಳ್ಳೆಯ ವಿಷಯವನ್ನು ಮಾತನಾಡುವವರಿಗೆ ಸಮಯ ಸಿಗುವುದಿಲ್ಲ 5 ನಿಮಿಷ, 10 ನಿಮಿಷ ದಲ್ಲಿ ಆಯಿತು ಎಂದು ಹೇಳಿ ಬೆಲ್ ಹೊಡೆಯಲಿಕ್ಕೆ ಶುರುಮಾಡುತ್ತಾರೆ. ಈಗ ನಾಳೆಗೆ ರಿಪ್ಲೈ ಎಂದು ಇಟ್ಟಿರುವುದರಿಂದ ಸದನ ಇನ್ನು ಕೇವಲ ನಾಲ್ಕಾರು ದಿವಸ ಮಾತ್ರ ಇರುವುದರಿಂದ ಇವತ್ತು ಆರು ಗಂಟೆಯಲ್ಲ, ಎಂಟು ಗಂಟೆಯಾದರೂ ಮಾಡಬಹುದಿತ್ತು. ಆದರೆ ಇವತ್ತು ಸನ್ಮಾನ್ಯ ರಾಜ್ಯಪಾಲರು ಎಲ್ಲಾ ಮಾನ್ಯ ಶಾಸಕರುಗಳನ್ನು ಕರೆದಿರುವುದರಿಂದ ಅಲ್ಲಿಗೆ ಹೋಗಲೇಬೇಕಾಗಿರುವುದರಿಂದ ಆರು ಗಂಟೆಗೆ ಕ್ಲೋಸ್ ಆಗುತ್ತದೆ. ಈಗ ಎಲ್ಲಾ ಪಕ್ಷದಿಂದ ಎರಡೆರಡು ಜನರು ಮಾತನಾಡಿದ್ದೀರಿ. ಈಗ ಕಾಂಗ್ರೆಸ್‌ನಿಂದ ಆಡಳಿತ ಪಕ್ಷದಿಂದ ಒಬ್ಬರು ಮಾತನಾಡಿದರು. ಇನ್ನೊಬ್ಬರು ಮಾತನಾಡುತ್ತಾರೆ. ಈಗ ಇರುವ ಸಮಯದಲ್ಲಿ ಅವರು ಹತ್ತು ನಿಮಿಷದಲ್ಲಿ ಮುಗಿಸಬೇಕು.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಈ ವಿಷಯ ಪ್ರಾರಂಭವಾಗುವಾಗ ಬೇಕಾದರೆ ಎರಡು ದಿವಸವೂ ಚರ್ಚೆ ಮಾಡೋಣ, ಮುಖ್ಯಮಂತ್ರಿಗಳೂ ಹೇಳಿದರು. ಇದು ಸಮಗ್ರವಾಗಿ ಚರ್ಚೆಯಾಗಬೇಕೆನ್ನುವಂಥದ್ದು ಹೇಳಿದರು. ಹೀಗಾಗಿ ನಾಳೆ ಬೆಳ್ಳಿಗೆ ಯಾರು ಮೂರು–ನಾಲ್ಕು ಜನರು ಮಾತನಾಡುತ್ತಾರೆ, ಅವರಿಗೆ ಅವಕಾಶವನ್ನು ಕೊಡಿ. ಅದಕ್ಕೆ ಅವರು ರಿಪ್ಲೈಯನ್ನು ಕೊಡಲಿ.

ಛೇರ್ಮನ್: ಸಾರ್, ನಿನ್ನೆ ತಾವೇ ಹೇಳಿದಿರಿ, ಸದನ ಕೇವಲ ಎಂಟು ದಿವಸ ಇರುವುದರಿಂದ ಚರ್ಚೆಯನ್ನು ಬೇಗ ಬೇಗನೆ ಮುಗಿಸಿಡೋಣ.

ಶ್ರೀ ಜಗದೀಶ್ ಶೆಟ್ಟರ್: ಇನ್ನು ಒಂದು ಗಂಟೆ ಎರಡು ಗಂಟೆಯೋ ಇದೆ. ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡೋಣವೆಂದು ಬೆಳಿಗ್ಗೆ ತೀರ್ಮಾನವಾಯಿತು.

ಛೇರ್ಮನ್: ಅವರು ಮಾತನಾಡಲಿ ಬಿಡಿ. ಸಮಯ ಹೋಗುತ್ತದೆ.

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ: ಮಾಣ್ಯ ಅಧ್ಯಕ್ಷರೆ, ತಮ್ಮಲ್ಲಿ ಒಂದೇ ಒಂದು ವಿಚಾರವನ್ನು ಪ್ರಸ್ತಾಪಿಸುವುದು, ನಾವು ನಿಲುವಳಿ ಸೂಚನೆ ಮೂಲಕ ಈ ವಿಷಯವನ್ನು ಚರ್ಚೆಗೆ ಕೊಟ್ಟಿದ್ದೇವೆ. ತಮಗೂ ಗೊತ್ತಿದೆ. ನಿಲುವಳಿ ಸೂಚನೆ ಮೂಲಕ ಚರ್ಚೆಯನ್ನು ಮಾಡುವುದಕ್ಕೆ ನಾವು ಬಯಸಿದ್ದರೆ ಅದರಂತೆ ತಾವು ಕೂಡ ನಿರ್ಧಾರವನ್ನು ತೆಗೆದುಕೊಂಡಿದ್ದರೆ ಆಡಳಿತ ಪಕ್ಷದವರಿಗೆ ಮಾತನಾಡುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ. ಮತ್ತು ಅಗತ್ಯವೂ ಇರಲಿಲ್ಲ. ಆದರೆ ಇದನ್ನು ತಾವು 69ಕ್ಕೆ ಕನ್‌ವರ್ಟ್ ಮಾಡಿದ್ದೀರಿ. ಇಲ್ಲಿ ಮುಕ್ತವಾದಂಥ ಚರ್ಚೆಗೆ ಅವಕಾಶವಾಗಿದೆ. ಆ ಹಿನ್ನೆಲೆಯಲ್ಲಿ ಈಗ ತಾವು ನಮ್ಮಗಳಿಗೂ ಸಹಾ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ವಿನಂತಿಯನ್ನು ಮಾಡುತ್ತಿದ್ದೇನೆ.

† **ಕರಿಯಣ್ಣ (ಹೊಳೆಹೊನ್ನೂರು)**: ಮಾನ್ಯ ಅಧ್ಯಕ್ಷರೆ, ನಾವು ಕರೀಂಲಾಲನ ವಿಚಾರ ನಿಜಕ್ಕೂ ಸಹಿತ ರಾಷ್ಟ್ರದಲ್ಲಿ ಎಲ್ಲರೂ ತಲೆತಗ್ಗಿಸತಕ್ಕಂಥ ಅತ್ಯಂತ ಒಂದು ದೊಡ್ಡ ಆರ್ಥಿಕ ವ್ಯವಸ್ಥೆಯನ್ನೆ ಬುಡಮೇಲು ಮಾಡುವಂಥ ಒಂದು ದೊಡ್ಡ ಕೃತ್ಯವಾಗಿದೆ. ಇದರಲ್ಲಿ ಆ ಸರ್ಕಾರ, ಈ ಸರ್ಕಾರ ಅಥವಾ ಆ ಪಕ್ಷ ಈ ಪಕ್ಷ ಎನ್ನುತಕ್ಕಂಥದ್ದು ಇಲ್ಲ. ಆದರೆ ನಿಜವಾದ ಅಪರಾಧಿಗಳನ್ನು ಹಿಡಿದು ಶಿಕ್ಷೆ ಮಾಡಬೇಕೆನ್ನುವುದೇ ನಮ್ಮೆಲ್ಲರ ನಿಲುವಾಗಬೇಕಾಗುತ್ತದೆ. ಅದನ್ನು ಬಿಟ್ಟು ಸತ್ಯವನ್ನು ಮುಚ್ಚಿಟ್ಟು ರಾಜಕೀಯಕ್ಕಾಗಿ ಇದನ್ನು ಬಳಸಿಕೊಳ್ಳತಕ್ಕಂಥದ್ದು ಸರಿಯಾದುದಲ್ಲ ಎನ್ನತಕ್ಕಂಥದ್ದು ನನ್ನ ಅನಿಸಿಕೆ. ನಾವೆಲ್ಲರೂ ಸಹಿತ ಶ್ರೀಕುಮಾರ್‌ರವರು ಅತ್ಯಂತ ಉತ್ತಮವಾದ ಕೆಲಸವನ್ನು ಮಾಡಿದ್ದಾರೆ, ಅವರ ಮೇಲೆ ನಾವ್ಯಾರೂ ಅನುಮಾನಪಡುವುದಿಲ್ಲ ಅವರು ಸಿಬಿಐನಲ್ಲಿ ಕೆಲಸ ಮಾಡಿದಂಥವರು, ಅಪಾರ ಅನುಭವವನ್ನು ಹೊಂದಿರತಕ್ಕಂಥವರು ಮತ್ತು ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡಿರುವಂಥವರು ಎಂದು ಹೇಳಿ ವಿರೋಧ ಪಕ್ಷದ ನಾಯಕರಿಂದ ಹಿಡಿದು ಆಡಳಿತ ಪಕ್ಷದವರೆಗೂ ಹೇಳಿದ್ದೇವೆ. ಇಷ್ಟೆಲ್ಲಾ ಇದ್ದರೂ ಕೂಡ ಅತ್ಯಂತ ಪ್ರಾಮಾಣಿಕವಾಗಿ ಒಬ್ಬರು ಕೆಲಸವನ್ನು ಮಾಡಿ ಈ ವಿಷಯದ ಬಗ್ಗೆ ಇಡೀ ರಾಷ್ಟ್ರಮಟ್ಟಕ್ಕೇ ಬೆಳಕನ್ನು ಚೆಲ್ಲಿ, ಇವೊತ್ತು ಕರೀಂಲಾಲಾನಿಗೆ ಇಡೀ ರಾಷ್ಟ್ರದ ವ್ಯಾಪ್ತಿಯಲ್ಲಿ, ಕೇವಲ ಕರ್ನಾಟಕದಲ್ಲಿ ಮಾತ್ರ ಈ ಕೃತ್ಯವನ್ನು ಮಾಡಿಲ್ಲ, ಈತ ಇಡೀ ರಾಷ್ಟ್ರ ಮಟ್ಟದಲ್ಲಿ ಸ್ಟ್ಯಾಂಪ್ ಪೇಪರ್ ಹಗರಣವನ್ನು ನಡೆಸಿದ್ದಾನೆ ಮತ್ತು ಆ ಮೂಲಕ ಆರ್ಥಿಕ ಬುಡಮೇಲು ಕೃತ್ಯವನ್ನು ಮಾಡಿದ್ದಾನೆ ಎನ್ನತಕ್ಕಂಥದ್ದನ್ನು ತೋರಿಸಿಕೊಟ್ಟಂಥ ಒಂದು ಕೀರ್ತಿ ಕರ್ನಾಟಕ ಸರ್ಕಾರದ ಅಧಿಕಾರಿಗಳಿಗೆ ಸಲ್ಲತಕ್ಕಂಥದ್ದಾಗಿದೆ ಮತ್ತು ಸ್ವತಂತ್ರವಾಗಿ ಕೆಲಸ ಮಾಡತಕ್ಕಂಥ ಒಂದು ಶಕ್ತಿಯನ್ನು ಆ ಅಧಿಕಾರಿಗಳಿಗೆ ನೀಡಿರತಕ್ಕಂಥ ಕರ್ನಾಟಕ ಸರ್ಕಾರಕ್ಕೂ ಆ ಕೀರ್ತಿ ಸಲ್ಲತಕ್ಕದ್ದು ಎಂದು ಅವರು ಹೇಳಬೇಕಾಗುತ್ತದೆ. ನಿಜವಾಗಿಯೂ ಅವರುಗಳು ಅಭಿನಂದನೆ ಸೂಚಿಸುತ್ತಾರೆ ಎಂದು ತಿಳಿದಿದ್ದೆ. ಏಕೆಂದರೆ ಶ್ರೀಕುಮಾರ್‌ರವರು ಅತ್ಯಂತ ಪ್ರಾಮಾಣಿಕ ಅಧಿಕಾರಿ ಹಾಗೂ ವ್ಯಕ್ತಿಯಾಗಿದ್ದಾರೆ. ಆದರೆ ವಿರೋಧ ಪಕ್ಷದವರು ಏಕೆ ಈ ಕೇಸ್‌ನ್ನು ಸಿ.ಬಿ.ಐ. ತನಿಖೆಗೆ ಕೊಡಬೇಕು ಎಂಬ ಬಗ್ಗೆಯೇ ಕಳೆದ ಎರಡು ವರ್ಷಗಳಿಂದ ಚರ್ಚೆಯನ್ನು ಮಾಡುತ್ತಿದ್ದಾರೆ. ನಾವು ಕೇಳುತ್ತಲೇ ಇದ್ದೇವೆ. ನಾನು 1989–94ರ ಅವಧಿಯಲ್ಲೂ ಶಾಸಕನಾಗಿದ್ದೆ. ಆಗ ಬದನಾಳು ಪ್ರಕರಣ ಬಂದಿತ್ತು. ಇದು ಮೈಸೂರಿನ ಹತ್ತಿರ ಊರು. ಅಲ್ಲಿ ಇಬ್ಬರು ಹರಿಜನರ, ಅಂದರೆ ತಂದೆ ಹಾಗೂ ಮಗನ ತಲೆಯನ್ನೇ ಕಡಿದು

ಹಾಕಿದ್ದರು. ಆಗ ನಾವೆಲ್ಲರೂ ಈ ಬಗ್ಗೆವಾದ ಮಾಡಿ ಸಿ.ಬಿ.ಐ. ತನಿಖೆಗೆ ಈ ಕೇಸ್‌ನ್ನು ವಹಿಸಿದೆವು. ಆದರೆ ಇವೊತ್ತಿನವರೆಗೂ ಸಿ.ಬಿ.ಐ.ನವರು ಸಂಬಂಧಪಟ್ಟವರನ್ನು ಇನ್‌ವೆಸ್ಟಿಗೇಶನ್ ಮಾಡಲಿಲ್ಲ, ಅರೆಸ್ಟ್ ಮಾಡಲಿಲ್ಲ, ಶಿಕ್ಷೆ ಕೊಡಸಲಿಲ್ಲ. ಆದರೆ ಇತ್ತೀಚೆಗೆ ನಮ್ಮ ಸರ್ಕಾರ ಬಂದ ಪ್ರಥಮದಲ್ಲಿಯೇ ಕಂಬಾಲಪಲ್ಲಿಯಲ್ಲಿ ಏಳು ಜನ ಹರಿಜನರನ್ನು ಒಂದೇ ಮನೆಯಲ್ಲಿ ಕೂಡಿ ಹಾಕಿ ಬೆಂಕಿ ಹಚ್ಚಿ ಸುಟ್ಟರು. ಆವೊತ್ತಿನ ದಿವಸ ನಮ್ಮ ರಾಜ್ಯದ ಅಧಿಕಾರಿಗಳೇ ಈ ಕೇಸ್‌ನ ಇನ್‌ವೆಸ್ಟಿಗೇಶನ್ ಮಾಡಬೇಕು ಎಂದು ಹೇಳಲಾಯಿತು. ಆದರೆ ಅವೊತ್ತಿನ ದಿವಸ ನಾವು ಇದನ್ನು ಸಿ.ಬಿ.ಐ. ತನಿಖೆಗೆ ವಹಿಸಿದೆವು. ಇವೊತ್ತಿನವರೆವಿಗೂ ಕೇಸ್ ಓಪನ್ ಆಗಲಿಲ್ಲ. ಅದೇ ರೀತಿ ಶಾಸಕರಾಗಿದ್ದ ವಸಂತ ಅಸ್ನೋಟಿಕರ್ ಪ್ರಕರಣದಲ್ಲೂ ಸಿ.ಬಿ.ಐ. ತನಿಖೆ ನಮಗೆ ಪ್ರತಿಫಲವನ್ನು ನೀಡಲಿಲ್ಲ. ಅದರೆ ನಮ್ಮ ರಾಜ್ಯದ ಪೊಲೀಸ್ ಅಧಿಕಾರಿಗಳೇ ಅಸ್ನೋಟಿಕರ್‌ರವರನ್ನು ಕೊಲೆ ಮಾಡಿದಂಥವರನ್ನು ಹಿಡಿದುಕೊಂಡು ಬಂದು ಶಿಕ್ಷೆಗೆ ಒಳಪಡಿಸತಕ್ಕಂಥ ಕ್ರಮವನ್ನು ತೆಗೆದುಕೊಂಡರು. ಇಷ್ಟೆಲ್ಲಾ ಉದಾಹರಣೆಗಳು ಇದ್ದರೂ ಕೂಡ ಇವೊತ್ತು ನಮ್ಮ ಶ್ರೀಕುಮಾರ್‌ರವರು ತಮ್ಮ ಪ್ರಾಣದ ಮೇಲೆ ಆಸೆಯನ್ನು ಬಿಟ್ಟು ಯಾವ ಯಾವ ರಾಜ್ಯಗಳಲ್ಲಿ ಈ ಅಪರಾಧಿಗಳು ಅಡಗಿದ್ದಾರೆ ಎನ್ನುವುದನ್ನು ಇನ್‌ವೆಸ್ಟಿಗೇಶನ್ ಮಾಡಿ ಈಗಾಗಲೇ 15 ಕೇಸ್‌ಗಳನ್ನು ದಾಖಲು ಮಾಡಿ 14 ಕೇಸ್‌ಗಳಲ್ಲಿ ಛಾರ್ಜ್‌ಶೀಟ್ ಕೊಟ್ಟು ಸುಮಾರು 800 ಜನರುಗಳನ್ನು ಇನ್‌ವೆಸ್ಟಿಗೇಶನ್ ಮಾಡಿರತಕ್ಕಂಥ ದೊಡ್ಡ ಕೆಲಸವನ್ನು ಕೇಂದ್ರ ಸರ್ಕಾರದ ಅಧೀನದಲ್ಲಿರುವ ಟಂಕಸಾಲಿ ಏನಿದೆಯೋ ಅಲ್ಲಿ ಸ್ಟ್ಯಾಂಪ್ ಪೇಪರ್ ಪ್ರಿಂಟ್ ಆಗುತ್ತಿತ್ತು. ಇಂಥ ಟಂಕಸಾಲಿಯಲ್ಲಿಯೇ ಕರಿಂಲಾಲಾನ ವ್ಯವಹಾರ ಇರಬೇಕಾದರೆ ಅವೊತ್ತು ಕೇಂದ್ರ ಸರ್ಕಾರ ಏನು ಮಾಡುತ್ತಿತ್ತು ಸ್ವಾಮಿ? ಅಂದು ಕೇಂದ್ರ ಸರ್ಕಾರ ಏನು ಮಾಡುತ್ತಿತ್ತು ಎಂಬ ಬಗ್ಗೆ ಅವರು ಉತ್ತರ ಹೇಳಬೇಕೇ ವಿನ: ನಾವು ಉತ್ತರ ಹೇಳುವುದಕ್ಕೆ ಆಗುತ್ತದೆಯೇ? ನಮ್ಮ ಮಾನ್ಯ ಮುದ್ದಹನುಮೇಗೌಡರವರು ಭಾಷಣ ಮಾಡುತ್ತಾ ಹೇಳಿದರು. ನಮ್ಮ ಸರ್ಕಾರದವರು, ನಮಗೆ ತಿಳಿದು ಬಂದಂಥ ವಿಚಾರದಲ್ಲಿ 2002ನೇ ಇಸವಿಯಲ್ಲಿ ಅಂದರೆ ಏಳನೇ ತಿಂಗಳು ಜುಲೈನಲ್ಲಿ ಒಂದು ಕಾಗದವನ್ನು ಕೇಂದ್ರದ ಆರ್ಥಿಕ ಮಂತ್ರಿಗಳಿಗೆ ಬರೆದರು. ಆದರೆ ಒಂದು ಉತ್ತರ ಕೂಡ ಅವರಿಂದ ನಮಗೆ ಬರಲಿಲ. ತದನಂತರದಲ್ಲಿ ಅಕ್ಟೋಬರ್ ತಿಂಗಳಲ್ಲಿ ಮತ್ತೊಂದು ರಿಮೈಂಡರ್ ಕಾಗದವನ್ನು ಬರೆದಿದ್ದಾರೆ. ಆದರೆ ಆಗಲೂ ಕೂಡ ಏನೂ ಆಗಲಿಲ್ಲ. ಆದರೆ ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳು ನಿದ್ದೆಯನ್ನೇ ಮಾಡದೇ ಈ ಬಗ್ಗೆ ಇನ್‌ವೆಸ್ಟಿಗೇಶನ್ ಮಾಡಿ, ಆ ಇನ್‌ವೆಸ್ಟಿಗೇಶನ್ ಆಧಾರದ ಮೇಲೆ ಬೇರೆ ಬೇರೆ ರಾಜ್ಯಗಳಲ್ಲಿ ಅಂದರೆ ಅದು ಚೆನ್ನೈ ಇರಬಹುದು, ಮುಂಬಯಿ ಇರಬಹುದು, ಕಲ್ಕತ್ತಾ ಇರಬಹುದು ಅಥವಾ ಇನ್ನೂ ಅನೇಕ ರಾಜ್ಯಗಳಲ್ಲಿರಬಹುದು, ಅಲ್ಲೆಲ್ಲಾ ನಮ್ಮ ರಾಜ್ಯ ಸರ್ಕಾರದ ಅಧಿಕಾರಿಗಳ ವರದಿಯ ಆಧಾರದ ಮೇಲೆ ಅಲ್ಲಿ ಅವರೆಲ್ಲರೂ ಕೂಡ ಇನ್‌ವೆಸ್ಟಿಗೇಶನ್‌ನ್ನು ಮಾಡಿ ಅಲ್ಲಿರತಕ್ಕಂಥ ಅಪರಾಧಿಗಳನ್ನು ಹಿಡಿಯುವುದಕ್ಕೆ ಸಾಧ್ಯವಾಯಿತು. ಅಪರಾಧಿಗಳನ್ನು ಹಿಡಿದು ಅವರಿಗೆ ಶೀಕ್ಷೆ ಕೊಡತಕ್ಕಂಥ ಕೆಲಸ ಆಯಿತು. ಆದರೆ ಅವೊತ್ತೇ ಈ ಕೇಸ್‌ನ್ನು ಸಿ.ಬಿ.ಐ. ಗೆ ಏನಾದರೂ ವಹಿಸಿದ್ದರೆ ಬಹುಶ: ಇಷ್ಟೆಲ್ಲಾ ವಿಚಾರಗಳು ಆಚೆಗೆ ಬರುತ್ತಿದ್ದವೋ, ಇಲ್ಲವೋ ಗೊತ್ತಿಲ್ಲ. ಇಷ್ಟೊಂದು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದರೋ, ಇಲ್ಲವೋ ಗೊತ್ತಿಲ್ಲ. ಏಕೆಂದರೆ ನಮ್ಮ ಕಂಬಾಲಪಲ್ಲಿಯ ಪ್ರಕರಣವನ್ನೇ ತೆಗೆದುಕೊಂಡರೆ ಅಥವಾ ನಮ್ಮ ಬದನಾಳು ಪ್ರಕರಣವನ್ನೇ ತೆಗೆದುಕೊಂಡರೆ ಸಿ.ಬಿ.ಐ. ನವರು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾರೆ ಎಂಬುದು

ಈ ಪ್ರಕರಣಕೊಂಡರೆ ಸಿ.ಬಿ.ಐ. ನವರು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾರೆ ಎಂಬುದು ಈ ಪ್ರಕರಣಗಳಲ್ಲಿಯೇ ನಮಗೆ ಅರ್ಥವಾಗುತ್ತದೆ. ಆದ್ದರಿಂದ ಈ ಕೇಸ್‌ನ್ನು ಏನಾದರೂ ಎರಡು ವರ್ಷಗಳ ಹಿಂದೆಯೇ ನಾವು ಸಿ.ಬಿ.ಐ. ಗೆ ವಹಿಸಿದ್ದರೆ, ಏನಾಗುತ್ತಿತ್ತು? ಇವೊತ್ತು ಸದನದಲ್ಲಿ ಅನೇಕ ವಿರೋಧಪಕ್ಷದ ನಾಯಕರು ಮಾತನಾಡಿ ಅನೇಕ ಸಲಹೆಗಳನ್ನು ಕೊಟ್ಟರು, ಅದೇ ರೀತಿ ಆಡಳಿತ ಪಕ್ಷದವರು ಮಾತನಾಡಿ ಸಲಹೆಗಳನ್ನು ಕೊಟ್ಟರು. ನಮ್ಮ ಅಧಿಕಾರಿಗಳಿಗೆ ಇವರುಗಳು ಸಲಹೆಗಳನ್ನು ಕೊಟ್ಟು ಎಲ್ಲಿಲ್ಲಿ ಲೋಪದೋಷಗಳಾಗಿವೆ ಅದನ್ನು ತಿಳಿದು ನೀವು ಸರಿಪಡಿಸಬೇಕು ಎನ್ನುವ ಸಲಹೆ ಮಾಡಿದರು. ಅನೇಕ ಇನ್‌ಫರ್ಮೇಶನ್‌ಗಳನ್ನು ವಿರೋಧ ಪಕ್ಷದ ನಾಯಕರು ಹೇಳುತ್ತೇನೆ ಎಂದು ಅವೊತ್ತಿನಿಂದ ಹೇಳುತ್ತಿದ್ದರು. ಈಗ ಇನ್‌ವೆಸ್ಟಿಗೇಶನ್ ಎಲ್ಲವೂ ಆಗಿ ಈ ಅಪರಾಧಿಯನ್ನು ಹಿಡಿಯುವುದಕ್ಕೆ ಮತ್ತು ಈ ಅಪರಾಧಿಗೆ ಇಡೀ ರಾಷ್ಟ್ರವ್ಯಾಪ್ತಿಯಲ್ಲಿ ಇವನ ಜಾಲ ಇದೆ ಎಂದು ತಿಳಿಸುವುದಕ್ಕೆ ಯಾರಾದರೂ ಕಾರಣಕರ್ತರು ಇದ್ದಾರೆ ಎಂದರೆ ಆ ಕೀರ್ತಿ ಕರ್ನಾಟಕ ಸರ್ಕಾರಕ್ಕೆ ಸಲ್ಲಬೇಕಾಗುತ್ತದೆ. ಕರ್ನಾಟಕ ಸರ್ಕಾರದಲ್ಲಿರತಕ್ಕಂಥ ನಿಷ್ಪಕ್ಷಪಾತವಾದ ಅಧಿಕಾರಿಗಳು ಈ ತನಿಖೆಯನ್ನು ಮಾಡಿದ್ದರಿಂದ ಅದರಲ್ಲೂ ಶ್ರೀಕುಮಾರ್‌ರವರಿಗೆ ಕೀರ್ತಿ ಸಲ್ಲುತ್ತದೆ ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳತಕ್ಕಂಥ ವಿಚಾರವಾಗಿದೆ. ಆದರೆ ಇಷ್ಟೆಲ್ಲಾ ಉದಾಹರಣೆ ಇದ್ದರೂ ಕೂಡ ಏನೋ ಸಿ.ಬಿ.ಐ.ಗೆ ಕೇಸ್ ವಹಿಸಿದ್ದರೆ ಏನೋ ಆಗೋಗಿಬಿಡೋದು. ಸಿ.ಬಿ.ಐ.ಗೆ ಕೊಟ್ಟುಬಿಟ್ಟಿದ್ದರೆ ಕಿರೀಟ ಬಂದು ಬಿಡುತ್ತಿತ್ತು. ಎಂದು ಹೇಳುತ್ತೀರಿ. ಆದರೆ ಇವೊತ್ತು ಕೇಂದ್ರದ ಆರ್ಥಿಕ ಮಂತ್ರಿಗಳಾದ ಜಸ್ವಂತ್‌ಸಿಂಗ್‌ರವರು ಹೇಳಿದ್ದಾರೆ. ಯಾವಾಗ ಮುಂಬಯಿಯಲ್ಲಿ ಈ ಪ್ರಕರಣದ ತನಿಖೆ ಅತ್ಯಂತ ಬಿರುಸಾಗಿ ನಡೆದು ಅನೇಕ ಜನರು ಅರೆಸ್ಟ್ ಆದರೋ, ಯಾವಾಗ ಕಲ್ಕತ್ತಾದಲ್ಲಿ ಈ ವಿಚಾರ ಬಂತೋ, ಯಾವಾಗ ದೆಹಲಿಯಲ್ಲಿ ಈ ವಿಚಾರ ಬಂತೋ, ಯಾವಾಗ ಚೆನ್ನೈನಲ್ಲಿ ಈ ವಿಚಾರ ಬಂತೋ, ಯಾವಾಗ ನಮ್ಮ ರಾಜ್ಯ ಸರ್ಕಾರದ ಅನೇಕ ವರದಿಗಳು ಆರ್ಥಿಕ ಮಂತ್ರಿಗಳ ಕೈಗೆ ಸಿಕ್ಕಿತ್ತೋ ಯಾವಾಗ ನಾಸಿಕ್‌ನಲ್ಲಿ ಕೇಂದ್ರ ಸರ್ಕಾರದ ಅಧೀನದಲ್ಲಿರತಕ್ಕಂಥ ಟಂಕಸಾಲಿಯಲ್ಲಿ ಸ್ಟ್ಯಾಂಪ್ ಪೇಪರ್ ಪ್ರಿಂಟ್‌ನಲ್ಲಿ ದುರುಪಯೋಗ ಆಗುತ್ತಿದೆ ಎನ್ನತಕ್ಕಂಥ ವರದಿ ಇವೊತ್ತು ಕರ್ನಾಟಕ ಸರ್ಕಾರದಿಂದ ಕೇಂದ್ರ ಸರ್ಕಾರದ ಆರ್ಥಿಕ ಮಂತ್ರಿಗಳಿಗೆ ಸಿಕ್ಕಿತೋ ಆಗ ಅವರು ಕಣ್ಣು ತೆರೆದು ನೋಡಿ ನಂತರದಲ್ಲಿ ಈ ಬಗ್ಗೆ ಪಾರ್ಲಿಮೆಂಟಿನಲ್ಲಿ ಹೇಳತಕ್ಕಂಥದ್ದು ಬಂತು. ನಿಜಕ್ಕೂ ಕೂಡ ಅತ್ಯಂತ ಉತ್ತಮವಾದ ಕೆಲಸವನ್ನು ಕರ್ನಾಟಕ ಸರ್ಕಾರದ ಅಧಿಕಾರಿಗಳು ಮಾಡಿದ್ದಾರೆ. ಆರ್ಥಿಕ ಮಂತ್ರಿಗಳು ಕೇಂದ್ರದಲ್ಲಿ ಇದನ್ನು ಹೇಳಿದ್ದಾರೆ. ಆದರೆ ಇದು ಅಂತರರಾಜ್ಯಗಳ ಮಟ್ಟದಲ್ಲಿ ಆರ್ಥಿಕತೆಯ ಮೇಲೆ ಅತ್ಯಂತ ದುಷ್ಪರಿಣಾಮ ಉಂಟುಮಾಡತಕ್ಕಂಥ ಅಂತರಜಾಲವೇನಿದೆ ಇವುಗಳನ್ನೆಲ್ಲಾ ನಾವು ಕಂಡು ಹಿಡಿಯಬೇಕಾದರೆ ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಳಪಡಿಸತಕ್ಕಂಥದ್ದು ಒಳ್ಳೆಯದು ಎನ್ನತಕ್ಕಂಥ ಅಭಿಪ್ರಾಯವನ್ನು ಕೇಂದ್ರದ ಆರ್ಥಿಕ ಮಂತ್ರಿಗಳು ಕೊಟ್ಟಿದ್ದರಿಂದ ಇವೊತ್ತು ನಮ್ಮ ರಾಜ್ಯ ಸಕಾರವು ಕೂಡ ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಕೊಡಬೇಕೆನ್ನುವ ತೀರ್ಮಾನವನ್ನು ತೆಗೆದುಕೊಂಡಿರುವುದು ಈ ಹಂತದಲ್ಲಿ ಆಗಿದೆ. ಆದರೂ ಕೂಡ ನಮ್ಮ ರಾಜ್ಯ ಸರ್ಕಾರದ ಪ್ರಾಮಾಣಿಕ ಅಧಿಕಾರಿಗಳು 15 ಕೇಸ್‌ಗಳಲ್ಲಿ 14 ಕೇಸ್‌ಗೆ ಛಾರ್ಜ್‌ಶೀಟ್‌ಗಳನ್ನು ಕೊಡಿಸತಕ್ಕಂಥ ಪ್ರಾಮಾಣಿಕ ಕೆಲಸವನ್ನು ಮಾಡಿದ್ದಾರೆ. ಇಂಥ ಅಧಿಕಾರಿಗಳನ್ನು ಒಳಗೊಂಡ ಸರ್ಕಾರಕ್ಕೆ ನಿಜವಾಗಿಯೂ ಅಭಿನಂದನೆಯನ್ನು ಸಲ್ಲಿಸುತ್ತಾರೆ ಎನ್ನುತಕ್ಕಂಥದ್ದನ್ನು ನಾನು ತಿಳಿಸುಕೊಂಡಿದ್ದೆ. ಆದರೆ ಇದನ್ನು ರಾಜಕಾರಣದ ದೃಷ್ಟಿಗೋಸ್ಕರ

ತೆಗೆದುಕೊಂಡು ಹೋಗುವ ಕೆಲಸ ಆಗಬಾರದು. ಇದನ್ನು ಹಿಂದೆಯೇ ಸಿ.ಬಿ.ಐ.ಗೆ ವಹಿಸಿದ್ದರೆ ಇನ್‌ವೆಸ್ಟಿಗೇಶನ್ನೇ ಇನ್ನೋ ಸ್ಟಾರ್ಟ್ ಆಗುತ್ತಿತ್ತೋ ಇಲ್ಲವೋ ಗೊತ್ತಿಲ್ಲ. ಈಗಲೂ ಕೂಡ ಸಿ.ಬಿ.ಐ.ಗೆ ಕೊಟ್ಟರೆ ನಮಗೆ ಅನುಮಾನವೇ ಇದೆ. ಇದು ನನ್ನ ದೃಷ್ಟಿಯಲ್ಲಿ. ಏಕೆಂದರೆ ಈಗಾಗಲೇ ಈ ಹಗರಣದ ಬಗ್ಗೆ ಇಷ್ಟೊಂದು ಇನ್‌ವೆಸ್ಟಿಗೇಶನ್ ನಮ್ಮ ಅಧಿಕಾರಿಗಳು ಮಾಡಿ ಅಪರಾಧೀಗಳಿಗೆ ಶಿಕ್ಷೆ ಕೊಡಿಸುವ ಮಟ್ಟಕ್ಕೆ ಕೇಸ್‌ಗಳನ್ನು ರಿಜಿಸ್ಟರ್ ಮಾಡಿ ಛಾರ್ಜ್‌ಶೀಟ್‌ಗಳು ಫೈಲ್ ಆಗಿರುವ ಹಂತದಲ್ಲಿ ಮತ್ತೊಂದು ಬಾರಿ ಸಿ.ಬಿ.ಐ.ನವರು ಮರು ಪರಿಶೀಲನೆ ಮಾಡತಕ್ಕಂಥ ಹಂತವನ್ನು ಅವರು ತಲುಪಬಹುದು. ಏಕೆಂದರೆ ಸಿ.ಬಿ.ಐ.ನವರು ಮರು ಪರಿಶೀಲನೆ ಮಾಡಬೇಕಾದರೆ ನಮ್ಮ ಸರ್ಕಾರದ ಅಧಿಕಾರಿಗಳು 2000ನೇ ಇಸವಿಯಿಂದ 2004ನೇ ಇಸವಿಯತನಕ ಅಂದರೆ ಸುಮಾರು ಮೂರೂವರೆ ವರ್ಷಗಳ ಕಾಲದಲ್ಲಿ ಸತತವಾಗಿ ಶ್ರಮ ಪಟ್ಟು ಎಲ್ಲೆಲ್ಲಿ ಹೋಗಬೇಕೋ ಅಲ್ಲೆಲ್ಲಾ ಕಡೆ ತಮ್ಮ ಪ್ರಾಣದ ಮೇಲಿ ಆಸೆಯನ್ನು ಬಿಟ್ಟು ಇವೊತ್ತು ಅನೇಕ ವಿಚಾರಗಳನ್ನು ಸಂಗ್ರಹಿಸಿ ಅವನ ಮೇಲೆ ಕೇಸ್‌ನ್ನು ದಾಖಲಿಸಿದ್ದಾರೆ. ಈ ರಾಜ್ಯಕ್ಕೆ ಸಂಬಂಧಪಟ್ಟಂಥ ಸಾಕ್ಷಿಗಳನ್ನು, ಆಧಾರಗಳನ್ನು ಅವರು ಸಂಗ್ರಹಣೆ ಮಾಡಿ ದಾಖಲಿಸಿದ್ದಾರೆ. ಇವೊತ್ತು ನಾವು ಈ ತನಿಖೆಯನ್ನು ಸಿ.ಬಿ.ಐ.ಗೆ ವಹಿಸುವುದರಿಂದ ಸಿ.ಬಿ.ಐ.ನವರು ಮತ್ತೊಮ್ಮೆ ಹೊಸ ರೀತಿಯಲ್ಲಿ ಇನ್‌ವೆಸ್ಟಿಗೇಶನ್ ಮಾಡುವುದಕ್ಕೆ ಹೊರಟರೆ ಅವರು ಇನ್ನಷ್ಟು ವರ್ಷಗಳನ್ನು ಇನ್‌ವೆಸ್ಟಿಗೇಶನ್‌ಗಾಗಿ ತೆಗೆದುಕೊಳ್ಳುತ್ತಾರೋ ಎಂಬುದನ್ನು ನೋಡಬೇಕಾಗುತ್ತದೆ. ಈ ರೀತಿಯಾದರೆ ಅಪರಾಧಿಗೆ ಅವರು ಶಿಕ್ಷೆ ಕೊಡಿಸುವುದಕ್ಕೆ ಆಗುತ್ತದೆಯೇ? ಆ ಅಪರಾಧಿಗೆ ಶಿಕ್ಷೆ ಕೊಡದೇ ಹೋದರೆ ಅವನು ಬೇರೆ ರೀತಿಯಲ್ಲಿ ಇನ್‌ಫ್ಲೂಯೆನ್ಸ್‌ನ್ನು ಉಪಯೋಗಿಸಿಕೊಂಡರೆ ಅವನು ನಿರಪರಾಧಿ ಎಂದು ಈಚೆಗೆ ಬರತಕ್ಕಂಥ ತಂತ್ರನೂ ಇದು ಆಗಬಹುದೇನೋ ಎನ್ನುವ ಅನುಮಾನ ಬರುತ್ತದೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಕೇಸ್ ರಿಜಿಸ್ಟರ್ ಆಗುವುದಕ್ಕಿಂತ ಮುಂಚಿತವಾಗಿ ಅನೇಕ ರಾಜ್ಯಗಳಲ್ಲಿ ಕೇಸ್‌ಗಳು ರಿಜಿಸ್ಟರ್ ಆಗಿವೆ ಎಂದು ನನಗೆ ತಿಳಿದುಬಂದಿದೆ. ಅದು ಹೈದ್ರಾಬಾದ್‌ನಲ್ಲಿರಬಹುದು, ಮುಂಬಯಿಯಲ್ಲಿರಬಹುದು, ಚೆನ್ನೈನಲ್ಲಿರಬಹುದು ಅಥವಾ ಕಲ್ಕತ್ತಾದಲ್ಲಿರಬಹುದು ಅಥವಾ ದೆಹಲಿಯಲ್ಲಿರಬಹುದು. ಆದರೆ ಯಾವ ರಾಜ್ಯಗಳಲ್ಲೂ ಕೂಡ ಈ ಕರೀಂಲಾಲ ಅಪರಾಧಿ ಎಂದು ಒಳಪಡದೆಯೇ ಅಲ್ಲಿ ಎಲ್ಲೂ ಕೂಡ ಛಾರ್ಜ್‌ಶೀಟ್ ಫೈಲ್ ಇವನ ಮೇಲೆ ಆಗಲೀ ಇಲ್ಲ. ಇಲ್ಲೂ ಅಷ್ಟೆ. ಉಪ್ಪಾರಪೇಟೆ ಪೊಲೀಸ್ ಸ್ಟೇಶನ್‌ನಲ್ಲಿ ಕೇಸ್ ರಿಜಿಸ್ಟರ ಆಗಿದ್ದಾಗ ಅಲ್ಲಿ ಕರೀಂಲಾಲ್ ಹೆಸರನ್ನು ಯಾವುದೋ ರೂಪದಲ್ಲಿ ತಿಳಿದುಕೊಂಡು ಅಲ್ಲಿಂದ ಕರೀಂಲಾಲ್‌ನನ್ನು ಇನ್‌ವೆಸ್ಟಿಗೇಶನ್ ಮಾಡಿಕೊಂಡು ಬಂದಂಥ ಪ್ರಥಮವಾದ ರಾಜ್ಯ ಯಾವುದಾದರೂ ಇದ್ದರೆ ಅದು ಕರ್ನಾಟಕಕ್ಕೆ ಗೌರವ ಸಲ್ಲತಕ್ಕಂಥದ್ದು. ಅದಕ್ಕೆ ಅಭಿನಂದಿಸಬೇಕಾಗಿತ್ತು. ರಾಜ್ಯದ ಗೃಹ ಮಂತ್ರಿಗಳು ಇರಬಹುದು, ರಾಜ್ಯದ ಮುಖ್ಯಮಂತ್ರಿಗಳು ಇರಬಹುದು, ಇವರುಗಳು ಈ ಇಲಾಖೆಯ ಅಧಿಕಾರಿಗಳಿಗೆ ತನಿಖೆಯ ವಿಚಾರದಲ್ಲಿ ಅತ್ಯಂತ ಸ್ವತಂತ್ರವನ್ನು ಕೊಟ್ಟಿದ್ದಕ್ಕೋಸ್ಕರವಾಗಿ ನಿಜವಾಗಿಯೂ ನಿಷ್ಪಕ್ಷಪಾತವಾದ ತನಿಖೆ ಈ ಹಗರಣದಲ್ಲಿ ಆಗಿದ್ದರಿಂದ ಇವೊತ್ತು ಕರೀಂಲಾಲಾನಂಥ ದೊಡ್ಡ ಖದೀಮನನ್ನು ಏನಾದರೂ ಬಂಧಿಸತಕ್ಕಂಥ ಅವಕಾಶ ಮತ್ತು ಅವನ ಮೇಲೆ ಛಾರ್ಜ್‌ಶೀಟ್‌ನ್ನು ಹಾಕಿ ಆ ಅಪರಾಧಿಗೆ ಶಿಕ್ಷೆ ಕೊಡಿಸುವ ಎಲ್ಲಾ ತಂತ್ರಗಳನ್ನು ಮಾಡಿದಂತದ್ದು ಏನಾದರೂ ಇದ್ದರೆ ನಿಜವಾಗಿಯೂ ಆ ಕೀರ್ತಿ ನಮ್ಮ ಮುಖ್ಯಮಂತ್ರಿಗಳಿಗೆ ಹಾಗೂ ಗೃಹ ಮಂತ್ರಿಗಳಿಗೆ ಹೋಗಬೇಕಾಗುತ್ತದೆ. ಅವರು ಅದಕ್ಕೆ ಅತ್ಯಂತ

ಪ್ರಾಮಾಣಿಕವಾಗಿ ಸ್ಪಂದಿಸಿರುವುದರಿಂದ ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಾರೆ. 'ಈ ಹಗರಣದಲ್ಲಿ ಯಾರೇ ರಾಜಕಾರಣಿಗಳು ಭಾಗಿಯಾಗಿದ್ದಲ್ಲಿ ಅವರ ಹೆಸರುಗಳನ್ನೂ ಸೇರಿಸಿಕೊಡಬೇಕು' ಎಂದು ಶ್ರೀಕುಮಾರ್ ಅವರಿಗೆ ಹೇಳಿದ್ದಾರೆನ್ನುವ ಸುದ್ದಿಯನ್ನು ನಾವು ಕೇಳಿದ್ದೇವೆ. ಅವರು ಪ್ರಾಮಾಣಿಕ ಅಧಿಕಾರಿಗಳೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಹಾಗಿದ್ದ ಮೇಳೆ ಈ ಸರ್ಕಾರ ಹಗರಣವನ್ನು ಮುಚ್ಚಿಡುವ ತಂತ್ರವನ್ನು ಅನುಸರಿಸುವ ಮೂಲಕ ಶ್ರೀಕುಮಾರ್ ಅವರಿಗೆ ಏನಾದರೂ ಹೇಳಿದ್ದರೆ ಅವರನ್ನು ನೀವು ಹೇಗೆ ಪ್ರಾಮಾಣಿಕರೆಂದು ಕರೆಯುತ್ತೀರಿ? ಆಗ ಅವರು ಹಗರಣವನ್ನು ಮುಚ್ಚಿ ಹಾಕುತ್ತಾರೆಂಬ ಅರ್ಥ ಬರುವುದಿಲ್ಲವೇ? ಆದುದರಿಂದ, ಇವೊತ್ತು ನಿಜವಾಗಿಯೂ ನಮ್ಮ ಸರ್ಕಾರ, ಅದರಲ್ಲೂ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಅತ್ಯಂತ ನಿಷ್ಪಕ್ಷಪಾತವಾಗಿ ಹಗರಣದ ತನಿಖೆ ಮಾಡಿಸಿ ಇಡೀ ರಾಷ್ಟ್ರಕ್ಕೆ ಇಂತಹ ದೊಡ್ಡ ಇಂತಹ ಅಪರಾಧಿಯನ್ನು ಹಿಡಿದುಕೊಡುವ ಮೂಲಕ ಕರ್ನಾಟಕ ರಾಜ್ಯದಿಂದ ಇಡೀ ರಾಷ್ಟ್ರ ಕೀರ್ತಿ ತಂದುಕೊಟ್ಟಿದ್ದಾರೆ. ವಿರೋಧ ಪಕ್ಷಗಳು ಕೇವಲ ಆಪಾದನೆ ಮಾಡುವುದಲ್ಲ. ಅವರು ತಿಳಿದುಕೊಳ್ಳಬೇಕಿರುವುದೇನೆಂದರೆ, ಕೇಂದ್ರದ ಆರ್ಥಿಕ ಮಂತ್ರಿಗಳು ಈ ದಿಸೆಯಲ್ಲಿ ನಮ್ಮ ರಾಜ್ಯದ ಅಧಿಕಾರಿಗಳ ಕಾರ್ಯ ದಕ್ಷತೆಯನ್ನು ಮೆಚ್ಚಿ ಉತ್ತಮ ರೀತಿಯಲ್ಲಿ ತನಿಖೆ ನಡೆಸಿ ಅಪರಾಧಿ ಬಗ್ಗೆ ಅನೇಕ ಮಾಹಿತಿಗಳನ್ನು ಒದಗಿಸಿಕೊಟ್ಟು ರಾಷ್ಟ್ರಾದ್ಯಂತ ಆಗಬಹುದಾದ ಆರ್ಥಿಕ ಬುಡಮೇಲು ಕೃತ್ಯವನ್ನು ನಿಲ್ಲಿಸುವ ಅವಕಾಶವನ್ನು ಇವೊತ್ತು ನೀವು ಮಾಡಿಕೊಟ್ಟಿದ್ದೀರೆಂದು ರಾಜ್ಯ ಸರ್ಕಾರದ ಕಾರ್ಯ ವೈಖರಿಯನ್ನೂ ಸಹ ಹೊಗಳಿದ್ದಾರೆ. ಅಲ್ಲದೆ, ನಾಸಿಕ್‌ನಲ್ಲಿರುವ ಟಂಕಸಾಲೆಗೆ ಸಂಬಂಧಿಸಿದಂತೆ ಎಲ್ಲೆಲ್ಲಿ, ಯಾವ ರೀತಿ ರಕ್ಷಣೆ ಒದಗಿಸಬೇಕೆಂಬುದನ್ನು ನಮ್ಮ ರಾಜ್ಯ ಸರ್ಕಾರ ಸಲ್ಲಿಸಿದ ವರದಿಯ ಆಧಾರದ ಮೇಲೆ ಇವೊತ್ತು ಅಲ್ಲಿ ಕಲ್ಪಿಸಿಕೊಡುವ ಹೊಸ ಜಾರಿಗೆ ತಂದಿದ್ದಾರೆ. ಸ್ಟಾಂಪ್ ವೆಂಡಿಂಗ್ ಇರಬಹುಸು, ಸ್ಟಾಂಪ್ ಪೇಪರ್ ಪ್ರಿಂಟಿಂಗ್ ಇರಬಹುದು, ಅಥವಾ ಮತ್ತೊಂದು ಇರಬಹುದು, ನಾಸಿಕ್‌ನ ಚರಿತ್ರೆ ಕೇಳಿದರೆ ನಿಜವಾಗಿಯೂ ನಮ್ಮ ರಾಜ್ಯ ಸರ್ಕಾರ ಎಂತಹ ಒಳ್ಳೆಯ ಕೆಲಸ ಮಾಡಿದೆ ಎಂಬ ಬಗ್ಗೆ ತಾವು ಮೆಚ್ಚುಗೆ ಸೂಚಿಸುತ್ತೀರಿ. ನಮ್ಮ ರಾಜ್ಯಕ್ಕೆ ಸುಮಾರು ಐವತ್ತು ಲಕ್ಷ ರೂಪಾಯಿಗಳ ಸ್ಟಾಂಪ್ ಪೇಪರ್ ಒದಗಿಸಿಕೊಡಬೇಕೆಂದು ಇಂಡೆಂಟ್ ಕಳುಹಿಸಿದರೆ ನಮ್ಮ ಬಳಿ ಕೇವಲ 25 ಲಕ್ಷ ರೂಪಾಯಿಗಳ ಸ್ಟಾಂಪ್ ಪೇಪರ್ ಇರುವುದಾಗಿ ಅವರು ಹೇಳುತ್ತಿದ್ದರು ! ಸ್ಟಾಂಪ್ ಪೇಪರ್ ಮುದ್ರಣ ಕುರಿತಂತೆ ಇವೊತ್ತಿನವರೆವಿಗೂ ನಾಸಿಕ್ ಪ್ರಿಂಟಿಂಗ್ ಸರಿಯಾದ ಲೆಕ್ಕ ಇಟ್ಟಿಲ್ಲ. ಈ ರಾಜ್ಯಕ್ಕೆ ಎಷ್ಟು ಮೊತ್ತದ ಸ್ಟಾಂಪ್ ಪೇಪರ್‌ಗಳನ್ನು ಸರಬರಾಜು ಮಾಡಿದ್ದಾರೆ? ಎಷ್ಟು ವಾಪಸ್ಸು ಪಡೆದುಕೊಂಡಿದ್ದಾರೆ? ಎಷ್ಟು ಪ್ರಮಾಣದಲ್ಲಿ ಸ್ಟಾಂಪ್ ಪೇಪರ್‌ಗಳು ಮುದ್ರಣಗೊಂಡವು? ಈ ಕುರಿತಾದ ಲೆಕ್ಕಪತ್ರಗಳ ವಿವರಗಳನ್ನು ನಾಸಿಕ್ ಪ್ರಿಂಟಿಂಗ್ ಪ್ರೆಸ್ ಈ ಸರ್ಕಾರಕ್ಕೆ ಒದಗಿಸಿಕೊಡಲು ಕ್ರಮ ಕೈಗೊಂಡಿಲ್ಲ. ಆದರೆ, ಇವೊತ್ತು ಕೇಂದ್ರ ಸರ್ಕಾರ ಯಾವ ರಿತಿಯ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದೆ ಎಂಬುದರ ಬಗ್ಗೆಯೂ ತಾವು ಆಲೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ಇಡೀ ರಾಷ್ಟ್ರದ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವ ಒಬ್ಬ ಅಪರಾಧಿಯನ್ನು ನಾವು ಹಿಡಿದು ಶಿಕ್ಷಿಸಲೇಬೇಕಾಗುತ್ತದೆ. ಅದು ಯಾರೇ ಇರಲಿ, ಯಾವುದೇ ರಾಜಕೀಯ ಪಕ್ಷದವರಾಗಿರಲಿ. 'ಕಾನೂನು ರೀತಿ ಮಾತನಾಡಿದರು, ಕೋರ್ಟ್‌ಗೆ ಹೋದರು, ಸ್ಪೆಷಲ್ ಕೋರ್ಟ್ ಆಯಿತು' ಎಂದು ಹೇಳಿದರೆ ಏನಾದರೊಂದು ತೀರ್ಮಾನ ಆಗಲೇಬೇಕಲ್ಲಾ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದೂವರೆ

ವರ್ಷದ ಹಿಂದೆ ಕೇಂದ್ರದ ಸನ್ಮಾನ್ಯ ಆರ್ಥಿಕ ಮಂತ್ರಿಗಳಿಗೆ ಸದರಿ ಪ್ರಕರಣವನ್ನು ತನಿಖೆಗಾಗಿ ಸಿಬಿಐಗೆ ಒಪ್ಪಿಸಬೇಕೆಂದು ಅವರು ಆಗಲೇ ಹೇಳಿದ್ದರೆ ರಾಜ್ಯ ಸರ್ಕಾರ ಆಗ ಏನು ತೀರ್ಮಾನ ಕೈಗೊಳ್ಳುತ್ತಿತ್ತೆಂಬುದು ಗೊತ್ತಾಗುತ್ತಿತ್ತು ಅವರು ಒಂದು ತೀರ್ಮಾನ ಕೊಡದೆ ಹೋದರೆ ನಾವು ಸಲ್ಲಿಸುವ ಚಾರ್ಜ್‌ಷೀಟ್‌ಗಳ ಆಧಾರದ ಮೇಲೆ ತೀರ್ಮಾನವಾಗಲು ಬಹಳ ವರ್ಷಗಳು ಹಿಡಿಯಬಹುದೆಂದು ಭಾವಿಸಿ, ತತ್‌ಕ್ಷಣ ಪ್ರಕರಣಗಳೆಲ್ಲವೂ ಇತ್ಯರ್ಥಗೊಳ್ಳಬೇಕೆಂಬ ಉದ್ದೇಶದಿಂದ ವಿಶೇಷ ನ್ಯಾಯಾಲಯ ಸ್ಥಾಪಿಸಿದಂಥ ಕೀರ್ತಿ ಈ ರಾಜ್ಯ ಸರ್ಕಾರಕ್ಕೆ ಸಲ್ಲುತ್ತದೆ. ಇದನ್ನು ತಾವು ಪ್ರಸ್ತಾಪಿಸುತ್ತೀರೆಂದು ತಿಳಿದಿದ್ದೆ. ಆದರೆ, ವಿರೋಧ ಪಕ್ಷದವರು ಅಷ್ಟು ಸೌಜನ್ಯವನ್ನೂ ಈ ಸರ್ಕಾರದ ಮೇಲೆ ತೋರಿಸಲಿಲ್ಲವೆನ್ನುವ ಸಂಕಟ ನಮಗಾಗುತ್ತದೆ. ಆದರೂ ಸಹ ಎಲ್ಲರೂ ನಾಚಿಕೆ ಪಡುವ ಈ ಪ್ರಕರಣದ ಬಗ್ಗೆ ನಾವೆಲ್ಲರೂ ಒಗ್ಗಟ್ಟಾಗಿ ಸೇರಿಕೊಂಡು ಪ್ರಕರಣದ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಇವೊತ್ತು ಅಪರಾಧಿಗೆ ಶಿಕ್ಷೆ ಕೊಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾಗಲಿ ಅಥವಾ ಗೃಹಮಂತ್ರಿಗಳಾಗಲಿ ಇವರು ಪ್ರಕರಣದಲ್ಲಿ ಇವೊತ್ತು ಅತ್ಯಂತ ಪಾರದರ್ಶಕವಾಗಿ ಕಾರ್ಯ ನಿರ್ವಹಿಸಿ ಇಡೀ ರಾಷ್ಟ್ರಕ್ಕೆ ಇಂತಹ ಒಬ್ಬ ಅಪರಾಧಿಯನ್ನು ಹಿಡಿದುಕೊಟ್ಟಂತ ಕೀರ್ತಿಗೆ ಪಾತ್ರರಾಗಿರುವುದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸಿ, ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟಿರುವುದಕ್ಕೆ ತಮಗೂ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇವೆ.

ಛೇರ್ಮನ್ : ಈಗ ಸದನವನ್ನು ನಾಳೆ ಬೆಳಿಗ್ಗೆ 10.30 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 6 ಗಂಟೆ 5 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ 8ನೇ ಜನವರಿ 2004ರ ಗುರುವಾರದಂದು ಬೆಳಿಗ್ಗೆ 10.30 ಗಂಟೆಗೆ ಸೇರಲು ನಿಶ್ಚಯಿಸಿತು)

(† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಸ್ಕರಿಸಿಲ್ಲ ಎಂದು ಸೂಚಿಸುತ್ತದೆ)

****